ಸಂಪುಟ: 05 ಸಂಚಿಕೆ: 349 ಪುಟಗಳು: 08 ಮಂಗಳವಾರ 03 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮನಸ್ಸನ್ನು ಶಕ್ತಿಯುತವೂ, ಶಿಸ್ತುಬದ್ಧವೂ ಆಗಿ ಸುವ್ಯವಸ್ಥಿತವೂ ಆಗಿ ಸುವ್ಯವಸ್ಥೆಯಲ್ಲಿಯೇ ಜ್ಞಾನದ ಮೌಲ್ಯವಿರುವುದು.


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ.
ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

**ಉದಯ ವಾಹಿನಿ**

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಇ-ಸ್ವತ್ತು: 1.15 ಲಕ್ಷ ಅರ್ಜಿ ಅನುಮೋದನೆ: ಸಚಿವ ಖರ್ಗೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 'ಇ-ಸ್ವತ್ತು 2.0' ತಂತ್ರಾಂಶದಡಿ ಇದುವರೆಗೆ 1,14,907 ಅರ್ಜಿಗಳನ್ನು ಅನುಮೋದಿಸಿ, ವಿಲೇವಾರಿ ಮಾಡಲಾಗಿದೆ' ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. 'ಒಟ್ಟು 1,38,470 ಅರ್ಜಿಗಳು ಸ್ವೀಕೃತವಾಗಿದ್ದು, 23,563 ಅರ್ಜಿಗಳು ಅನುಮೋದನೆಗೆ ಬಾಕಿ ಇವೆ' ಎಂದು ಮಾಹಿತಿ ನೀಡಿದ್ದಾರೆ. 'ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಮತ್ತು ಅರ್ಜಿಗಳನ್ನು ಅನುಮೋದಿಸುವ ಸಮಯದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದವು. ಈ ಬಗ್ಗೆ ಕಳೆದ ಜನವರಿಯಲ್ಲಿ ಕೇಂದ್ರದ ಮಾಹಿತಿ ತಂತ್ರಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ಖಾತೆಯ ಸಚಿವರಿಗೆ ಪತ್ರ ಬರೆಯಲಾಗಿತ್ತು. ಬಳಿಕ ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಲಾಗಿದೆ' ಎಂದು ಅವರು ಹೇಳಿದ್ದಾರೆ. 'ಹೊಸ ಬಡಾವಣೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ. ಈವರೆಗೆ 478 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 54 ಅರ್ಜಿಗಳಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಮೋದನೆ ನೀಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

## ಸಿ ದರ್ಜೆಯ ದೇವಸ್ಥಾನಗಳ ತಸ್ತೀಕ್ 10 ಸಾವಿರಕ್ಕೆ ಹೆಚ್ಚಿಸಲು ಆಗ್ರಹ

• ಉದಯವಾಹಿನಿ, ಬೆಂಗಳೂರು

ಮುಜರಾಯಿ ಇಲಾಖೆಯ ಅಧೀನದಲ್ಲಿರುವ 'ಸಿ' ದರ್ಜೆಯ ದೇವಸ್ಥಾನಗಳಿಗೆ ಇರುವ ತಸ್ತೀಕ್ ಅನ್ನು ರೂ.10 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಆಗ್ರಹಿಸಿದೆ.

'ರಾಜ್ಯದಲ್ಲಿ 'ಸಿ' ದರ್ಜೆಯ 36,217 ದೇವಸ್ಥಾನಗಳಿವೆ. ಬಹುತೇಕ ಎಲ್ಲವೂ ಗ್ರಾಮೀಣ ಪ್ರದೇಶದಲ್ಲಿವೆ. ಪೂಜಾ ಸಾಮಗ್ರಿ ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗಿದೆ. ಹೀಗಾಗಿ, ತಸ್ತೀಕ್ ಮೊತ್ತ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

ತಸೀಕ್ ಸದ್ಯ 6,000 ಇದೆ. ಇದಕ್ಕೆ ಇನ್ನೂ 4,000 ಸೇರಿಸಿ ನೀಡಬೇಕು. ಪೂಜಾದ್ರವ್ಯಗಳಿಗೆ 5,000 ನೀಡಬೇಕು. ಈ ಮೊತ್ತ ಎರಡೂ ಸೇರಿದರೆ ಸರ್ಕಾರಕ್ಕೆ ಒಂದು ತಿಂಗಳಿಗೆ 35 ಕೋಟಿಯಷ್ಟು ವೆಚ್ಚವಾಗುತ್ತದೆ. ದೇವಸ್ಥಾನಗಳಲ್ಲಿ ಕೆಲಸ ಮಾಡುವ ಇತರ ಉದ್ಯೋಗಿಗಳಿಗೆ ತಿಂಗಳಿಗೆ ರೂ.5,000 ನೀಡಬೇಕು ಎಂದು ಒತ್ತಾಯಿಸಿದರು. ದೇವಸ್ಥಾನಗಳ ಆಸ್ತಿ ಶಕ್ತಿವಂತರ ಪಾಲಾಗಿತ್ತು. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರ ಮುತುವರ್ಜಿಯಿಂದಾಗಿ 15 ಸಾವಿರಕ್ಕಿಂತಲೂ ಅಧಿಕ ಆಸ್ತಿಗಳನ್ನು ಮರಳಿ ದೇವಸ್ಥಾನಗಳಿಗೆ ಒಪ್ಪಿಸಲಾಗಿದೆ.


## ನೆರೆಯ ಕೊಲ್ಲಿದೇಶಗಳ ಮೇಲೆ ಈಗ ಇರಾನ್ ಪ್ರತೀಕಾರ

# ಇರಾನ್ ಪ್ರತೀಕಾರ
# ಮಧ್ಯಪ್ರಾಚ್ಯ ತತ್ತರ









ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಪ್ರತಿಜ್ಞೆ

### ಅಬ್ರಹಾಂ ನೌಕೆ ಮೇಲೆ ದಾಳಿ

ಕಳೆದೊಂದು ತಿಂಗಳಿಂದ ಇರಾನ್ ಹಿತ್ತಲಲ್ಲಿ ಬೀಡುಬಿಟ್ಟಿದ್ದ ಅಮೆರಿಕದ ಯುಎಸ್‌ಎಸ್ ಅಬ್ರಹಾಂ ಲಿಂಕನ್ ವಿಮಾನವಾಹಕ ನೌಕೆಯ ಮೇಲೆ ದಾಳಿ ನಡೆಸಿರುವುದಾಗಿ ಇರಾನ್‌ನ ರೆವಲ್ಯೂಷ್ನರಿ ಗಾರ್ಡ್ಸ್(ಐಆರ್‌ಜಿಸಿ) ಘೋಷಿಸಿದೆ. 'ನಾಲ್ಕು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಿದ್ದೇವೆ' ಎಂದು ಐಆರ್‌ಜಿಸಿ ಹೇಳಿಕೆಯನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ಅಮೆರಿಕದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.



### ಮಸೀದಿ ಮೇಲೆ ಕೆಂಪು ಧ್ವಜ

ಆಯಾತೊಲ್ಲಾ ಅಲಿ ಖಮೇನಿ ಹತ್ಯೆ ಬೆನ್ನಿಗೆ ಇರಾನ್ ಮಸೀದಿಗಳ ಮೇಲೆ ಕೆಂಪು ಬಾವುಟ ಹಾರಿಸಲಾಗಿದೆ. ಶಿಯಾ ಸಂಪ್ರದಾಯದಲ್ಲಿ ಅನ್ಯಾಯದ ವಿರುದ್ಧ ಸಾಂಕೇತಿಕ ಹೋರಾಟದ ಸೂಚಕವಾಗಿ ಮಸೀದಿಯ ಗುಮ್ಮಟದ ಮೇಲೆ ಕೆಂಪು ಧ್ವಜ ಹಾರಿಸಲಾಗುತ್ತದೆ. ಖಮೇನಿ ಹತರಾದ ಸುದ್ದಿ ಹೊರಬಿದ್ದ ಬಳಿಕ ಟೆಹ್ರಾನ್‌ನಲ್ಲಿರುವ ಶಿಯಾ ಸಮುದಾಯದ ಪ್ರಮುಖ ಧಾರ್ಮಿಕ ಕೇಂದ್ರ, ಜಮ್ಕರನ್ ಮಸೀದಿಯ ಮೇಲೆ ಕೆಂಪು ಧ್ವಜ ಹಾರಿಸಲಾಗಿದೆ. ಬೆನ್ನಿಗೆ ಕೊಲ್ಲಿರಾಷ್ಟ್ರಗಳು, ಇಸ್ರೇಲ್, ಓಮನ್ ಕರಾವಳಿಯಲ್ಲಿ ತೈಲ ಹಡಗುಗಳ ಮೇಲೆ ಇರಾನ್ ಪ್ರತೀಕಾರದ ದಾಳಿ ನಡೆಸಿದೆ.

**ಟೆಹ್ರಾನ್:** ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿಯ ಹತ್ಯೆಗೆ ಪ್ರತೀಕಾರವಾಗಿ ಇರಾನ್ ಈಗ ನರಕದ ಬಾಗಿಲುಗಳನ್ನು ತೆರೆದಿದೆ. ಬೆಳಗಿನ ಜಾವ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಅಮೇರಿಕಾ ಮತ್ತು ಇಸ್ರೇಲ್ ಗುರಿಗಳ ಮೇಲೆ ಇತಿಹಾಸದಲ್ಲೇ ಅತ್ಯಂತ ಭಯಾನಕ ಎನ್ನಲಾದ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಆರಂಭಿಸಿದೆ.

**ಆಪರೇಷನ್ ಟ್ರೂ ಪ್ರಾಮಿಸ್-5: ದುಬೈ ಮತ್ತು ಕತಾರ್‌ನಲ್ಲಿ ಸ್ಫೋಟದ ಸದ್ದು**

ಇರಾನ್ ತನ್ನ ಐದನೇ ಹಂತದ ಕಾರ್ಯಾಚರಣೆಯನ್ನು ಘೋಷಿಸಿದ್ದು, ಯುಎಇ ಮತ್ತು ಕತಾರ್‌ನಲ್ಲಿರುವ ಅಮೇರಿಕಾ ಮಿತ್ರಪಡೆಗಳ ನೆಲೆಗಳನ್ನು ಗುರಿಯಾಗಿಸಿಕೊಂಡಿದೆ. ದುಬೈ ಮತ್ತು ಕತಾರ್ ರಾಜಧಾನಿ ದೋಹಾದಲ್ಲಿ ಭೀಕರ ಸ್ಫೋಟದ ಶಬ್ದಗಳು ಕೇಳಿಬಂದಿವೆ ಎಂದು ವರದಿಯಾಗಿದೆ. ಅಮೇರಿಕಾಕ್ಕೆ ಸಾಥ್ ನೀಡುವ ನೆರೆಹೊರೆಯ ರಾಷ್ಟ್ರಗಳಿಗೆ ಶತ್ರುಗಳ ಪರ ನಿಂತರೆ ಪರಿಣಾಮ ಭೀಕರವಾಗಿರುತ್ತದೆ ಎಂಬ ಎಚ್ಚರಿಕೆಯನ್ನು ಇರಾನ್ ಈ ಮೂಲಕ ನೀಡಿದೆ. ಜೆಬೆಲ್ ಅಲಿ ಮತ್ತು ಕುವೈತ್ ನೆಲೆಗಳ ಧ್ವಂಸ, IRGC ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯ ಪ್ರಕಾರ,ಜೆಬೆಲ್ ಅಲಿ (ದುಬೈ) ಅಮೇರಿಕಾ ನೌಕೆಗಳಿಗೆ ಮದ್ದುಗುಂಡುಗಳನ್ನು ಸಾಗಿಸುತ್ತಿದ್ದ ಬೃಹತ್ ಹಡಗಿನ ಮೇಲೆ ನಾಲ್ಕು ಡ್ರೋನ್‌ಗಳು ದಾಳಿ ನಡೆಸಿದ್ದು, ಹಡಗು ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿದೆ.

**ಕುವೈತ್ ನೆಲೆ:** ಕುವೈತ್‌ನ ಅಬ್ದುಲ್ಲಾ ಮುಬಾರಕ್ ಪ್ರದೇಶದಲ್ಲಿರುವ ಅಮೇರಿಕಾ ನೌಕಾನೆಲೆಯ ಮೇಲೆ 4 ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು 12 ಡ್ರೋನ್‌ಗಳು ಅಪ್ಪಳಿಸಿವೆ. ಇಲ್ಲಿನ ಮೂಲಸೌಕರ್ಯಗಳು ಸಂಪೂರ್ಣ ನಾಶವಾಗಿದ್ದು, ಹಲವಾರು ಅಮೇರಿಕಾ ಸೈನಿಕರು ಸಾವುನೋವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

**ಹಿಂದೂ ಮಹಾಸಾಗರ:** ಅಮೇರಿಕಾ ಹಡಗುಗಳಿಗೆ ಇಂಧನ ಪೂರೈಸುತ್ತಿದ್ದ MST-ಕ್ಲಾಸ್ ಯುದ್ಧನೌಕೆಯ ಮೇಲೆ ಇರಾನ್‌ನ ಖದರ್ 380 ಕ್ಷಿಪಣಿಗಳು ದಾಳಿ ನಡೆಸಿವೆ.ದುಬೈ ಏರ್‌ಪೋರ್ಟ್ ಮತ್ತು ಬುರ್ಜ್ ಅಲ್ ಅರಬ್ ಮೇಲೆ ದಾಳಿ, ಜಗತ್ತಿನ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣಗಳಲ್ಲಿ ಒಂದಾದ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಇರಾನ್ ಗುರಿಯಾಗಿಸಿಕೊಂಡಿದ್ದು, ಸದ್ಯ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಇದಲ್ಲದೆ, ದುಬೈನ ಐಕಾನಿಕ್ ಪಾಮ್ ಐಲ್ಯಾಂಡ್ ಮತ್ತು ಐಷಾರಾಮಿ ಹೋಟೆಲ್ ಬುರ್ಜ್ ಅಲ್ ಅರಬ್ ಮೇಲೆ ಇರಾನ್ ದಾಳಿ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

**ನರಕದ ಬಾಗಿಲು ತೆರೆದಿದ್ದೇವೆ:** ಇರಾನ್ ಎಚ್ಚರಿಕೆ ತನ್ನ ಸರ್ವೋಚ್ಚ ನಾಯಕ ಖಮೇನಿ ಅವರನ್ನು ಆಪರೇಷನ್ ಎಪಿಕ್ ಫ್ಯೂರಿ ಮೂಲಕ ಹತ್ಯೆ ಮಾಡಿದ ಅಮೇರಿಕಾ ಮತ್ತು ಇಸ್ರೇಲ್‌ಗೆ ಇರಾನ್ ತಕ್ಕ ಶಾಸ್ತಿ ಮಾಡುವುದಾಗಿ ಪ್ರತಿಜ್ಞೆ ಮಾಡಿದೆ.

ಟೆಲಿಗ್ರಾಮ್‌ನಲ್ಲಿ ಸಂದೇಶ ಹಂಚಿಕೊಂಡಿರುವ IRGC, ನಮ್ಮ ಇಮಾಮ್ ಅವರ ಕೊಲೆಗಡುಕರನ್ನು ನಾವು ಸುಮ್ಮನೆ ಬಿಡುವುದಿಲ್ಲ. ಶತ್ರುಗಳ ಮೇಲೆ ಇತಿಹಾಸದಲ್ಲೇ ಕಾಣದ ಅತ್ಯಂತ ಕ್ರೂರ ಆಕ್ರಮಣಕಾರಿ ಕಾರ್ಯಾಚರಣೆ ಇದಾಗಿರಲಿದೆ ಎಂದು ಗುಡುಗಿದೆ. ಜಾಗತಿಕ ಆತಂಕ ಮತ್ತು ವಿಶ್ವಸಂಸ್ಥೆಯ ಹಸ್ತಕ್ಷೇಪ ಈ ಭೀಕರ ಬೆಳವಣಿಗೆಯಿಂದಾಗಿ ಇಡೀ ಜಗತ್ತು ಆತಂಕದಲ್ಲಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ತಕ್ಷಣವೇ ಯುದ್ಧ ನಿಲ್ಲಿಸುವಂತೆ ಒತ್ತಾಯಿಸಿದ್ದಾರೆ.

ಯುರೋಪಿಯನ್ ಯೂನಿಯನ್ ಮತ್ತು ರಷ್ಯಾ ಕೂಡ ಪರಿಸ್ಥಿತಿ ಕೈಮೀರಿ ಹೋಗುವ ಮುನ್ನ ಶಾಂತಿ ಕಾಪಾಡುವಂತೆ ಮನವಿ ಮಾಡಿವೆ. ಒಂದು ವೇಳೆ ಈ ಯುದ್ಧ ಮುಂದುವರಿದರೆ ಜಾಗತಿಕ ಭದ್ರತೆ ಮತ್ತು ಆರ್ಥಿಕತೆ ಮೇಲೆ ಚೇತರಿಸಿಕೊಳ್ಳಲಾಗದ ಹೊಡೆತ ಬೀಳಲಿದೆ. ಇರಾನ್‌ನ ಈ ಸರಣಿ ದಾಳಿಗೆ ಅಮೇರಿಕಾ ಮತ್ತು ಇಸ್ರೇಲ್ ಯಾವ ರೀತಿ ಪ್ರತಿಕ್ರಿಯ ನೀಡಲಿವೆ ಎಂಬುದು ಈಗ ಕುತೂಹಲದ ಸಂಗತಿಯಾಗಿದೆ. ಮಧ್ಯಪ್ರಾಚ್ಯದ ಆಕಾಶ ಈಗ ಕ್ಷಿಪಣಿಗಳಿಂದ ತುಂಬಿಹೋಗಿದ್ದು, ಮೂರನೇ ಮಹಾಯುದ್ಧದ ಭೀತಿ ಎದುರಾಗಿದೆ.

| | |
|---|---|
| 1 | ಪ್ರಹಾರ ಮುಂದುವರಿಸಿದ ಅಮೆರಿಕ, ಇಸ್ರೇಲ್ |
| 2 | ಅಮೆರಿಕ ಸ್ನೇಹ ಹೊಂದಿರುವ ನೆರೆ ದೇಶಗಳ ಮೇಲೆ ಮುಗಿಬಿದ್ದ ಇರಾನ್, ಐವರು ನಾಗರಿಕರು ಬಲಿ |
| 3 | ನೆರೆ ರಾಷ್ಟ್ರಗಳ ಜತೆಗೆ ಸಮರ ಬೇಡ ಎಂದು ಯುಎಇ ಕಿವಿಮಾತು |

### ಇರಾನ್ ಮೇಲೆ ನಿಲ್ಲದ ಪ್ರಹಾರ

ಏತನ್ಮಧ್ಯೆ ಇರಾನ್ ವಿರುದ್ಧ ಸಮರ ಮುಂದುವರಿಸಿದ ಅಮೆರಿಕ-ಇಸ್ರೇಲ್ ಭಾನುವಾರ ಟೆಹ್ರಾನ್ ಮೇಲೆ ಮತ್ತೆ ಪ್ರಹಾರ ನಡೆಸಿವೆ. ಪ್ರಮುಖ ಆಡಳಿತ ಕೇಂದ್ರಗಳು, ಮಿಲಿಟರಿ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ. ನೆರೆಯ ಕೊಲ್ಲಿರಾಷ್ಟ್ರಗಳ ಮೇಲೆ ಇರಾನ್ ತಿರುಗಿಬಿದ್ದ ಬೆನ್ನಿಗೆ ರಾಜಧಾನಿ ಟೆಹ್ರಾನ್ ಸೇರಿದಂತೆ ಹಲವು ಪ್ರದೇಶಗಳ ಮೇಲೆ ವಾಯುದಾಳಿ ನಡೆಸಲಾಗಿದೆ. ನಗರದಾದ್ಯಂತ ಸ್ಫೋಟಗಳು ಸಂಭವಿಸಿದ್ದು, ಇಡೀ ನಗರದಾದ್ಯಂತ ದಟ್ಟವಾದ ಹೊಗೆ ಆವರಿಸಿಕೊಂಡಿರುವುದು ಕಂಡು ಬಂದಿದೆ. ''ಇರಾನ್ ಉಗ್ರಗಾಮಿ ಆಡಳಿತ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಪ್ರತಿದಾಳಿಗೆ ಯತ್ನಿಸಿದ ಇರಾನಿಯನ್ ಪಡೆಗಳನ್ನು ಹಿಮ್ಮೆಟ್ಟಿಸಲಾಗಿದೆ,'' ಎಂದು ಇಸ್ರೇಲ್ ರಕ್ಷಣಾ ಪಡೆ ತಿಳಿಸಿದೆ.

## ಬಜೆಟ್ ಅಧಿವೇಶನ: ಸರ್ಕಾರದ ವಿರುದ್ಧ ಹೋರಾಟಕ್ಕೆ ಬಿಜೆಪಿ ಸಜ್ಜು

• ಉದಯವಾಹಿನಿ, ಬೆಂಗಳೂರು

ಮಾರ್ಚ್ 6 ರಿಂದ ಬಜೆಟ್ ಅಧಿವೇಶನ ನಡೆಯಲಿದೆ. ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಸೋಮವಾರ ಮಹತ್ವದ ಸಭೆಯನ್ನು ನಡೆಸಿದ್ದಾರೆ. ಬಜೆಟ್ ಅಧಿವೇಶನದಲ್ಲಿ ಸರ್ಕಾರದ ಲೋಪದೋಷಗಳ ಚರ್ಚೆ, ಆರ್ಥಿಕ ದುಸ್ಥಿತಿಯ ವಿರುದ್ಧ ಹೋರಾಟ ನಡೆಸಲು ತೀರ್ಮಾನ ಮಾಡಲಾಗಿದೆ.

ಈ ಕುರಿತಾಗಿ ವಿಪಕ್ಷ ನಾಯಕ ಆರ್ ಅಶೋಕ್ ನೇತೃತ್ವದಲ್ಲಿ ಸಭೆ ನಡೆದಿದೆ. ಇದೇ ವಿಚಾರವಾಗಿ ಅವರು, ಮಾತನಾಡಿ, ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಸರ್ಕಾರದ ಲೋಪದೋಷಗಳನ್ನು ಚರ್ಚಿಸಲಾಗುವುದು. ರಾಜ್ಯದ ಆರ್ಥಿಕ ದುಸ್ಥಿತಿಯ ವಿರುದ್ಧ ಹೋರಾಟ ಮಾಡಲಾಗುವುದು ಎಂದಿದ್ದಾರೆ.

ಸರ್ಕಾರದ ಲೋಪದೋಷಗಳ ವಿರುದ್ಧ ಹೋರಾಟ

ಈ ಬಾರಿಯ ಬಜೆಟ್‌ನಲ್ಲಿ ಕಾಂಗ್ರೆಸ್ ಸರ್ಕಾರದ ದೋಷಗಳನ್ನು ಸಮರ್ಥವಾಗಿ ಮಂಡನೆ ಮಾಡಲಾಗುವುದು. ಕಾಂಗ್ರೆಸ್ ಒಡೆದ ಮನೆಯಾಗಿದ್ದು, ಶಾಸಕರು ಬೀದಿಯಲ್ಲಿ ನಿಂತು ಧಮಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಆಡಳಿತದ ಅವಧಿ ಮುಗಿಯುತ್ತಾ ಬಂದಿದೆ ಎಂದು ಆರ್ ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಯಲ್ಲಿ ಹಗರಣ ನಡೆದಿದೆ.

**ಸಾಲದ ಹೊರೆ**

ರಾಜ್ಯ ಸರ್ಕಾರ ಮೂರೂವರೆ ಲಕ್ಷ ಕೋಟಿ ರೂ. ಸಾಲ ಮಾಡಿದೆ. ಹಿಂದಿನ ಎಲ್ಲಾ ಮುಖ್ಯಮಂತ್ರಿಗಳನ್ನು ಮೀರಿ ಸಿದ್ದರಾಮಯ್ಯ ಸಾಲ ಮಾಡಿದ್ದು, ಅವಧಿ ಮುಗಿಯುವ ವೇಳೆಗೆ ಸಾಲದ ಪ್ರಮಾಣ 6 ಲಕ್ಷ ಕೋಟಿ ರೂ. ಗೆ ಹೋಗಲಿದೆ. ಪ್ರತಿ ವ್ಯಕ್ತಿಯ ಮೇಲೆ 1 ಲಕ್ಷ ರೂ. ಸಾಲ ಇರಲಿದೆ.



ಅಶೋಕ್ ನೇತೃತ್ವದಲ್ಲಿ ಮಹತ್ವದ ಸಭೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಕ್ರಮ ನಡೆದಿದೆ. ಕಳೆದ ಮೂರು ಬಜೆಟ್‌ನಲ್ಲಿ ಅನುದಾನ ಘೋಷಣೆಯಾದರೂ ಬಿಡುಗಡೆಯಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಮಟ್ಟದಲ್ಲಿ ಸಾಲ ಮಾಡಿದ್ದಾರೆ ಎಂದು ಆರೋಪಿಸಿದರು.

**ಕಾನೂನು ಸುವ್ಯವಸ್ಥೆ ಬಗ್ಗೆಯೂ ಉಲ್ಲೇಖ:** ರಾಜ್ಯದಲ್ಲಿ ಹಿಂದೂಗಳ ಮೇಲೆ ಹಲ್ಲೆಯಾಗುತ್ತಿದೆ. ಬೆಂಗಳೂರಿನಲ್ಲಿ ಕಸದ ಸಮಸ್ಯೆ ಹೆಚ್ಚಿದೆ. ಕಂದಾಯ ಇಲಾಖೆಯಲ್ಲಿ ಇ ಖಾತಾ ಸಮಸ್ಯೆ ಇದೆ. ಈ ಎಲ್ಲಾ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡುತ್ತೇವೆ ಎಂದು ಅಶೋಕ್ ಮಾಹಿತಿ ನೀಡಿದರು.



ವಿತರಕರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ

## ರಾಜ್ಯದಲ್ಲಿ ಪಡಿತರ ವಿತರಕರು ಚುನಾವಣೆಯಲ್ಲಿ ಬೆಂಬಲಿಸಿದ್ದರಿಂದ ಅತ್ಯಧಿಕ ಸ್ಥಾನ ಪಡೆದ ಕಾಂಗ್ರೆಸ್

ರೂ.200 ನೀಡುವಂತೆ ಮನವಿ ಸಲ್ಲಿಕೆ



ಕೋಟ್ಯಂತರ ಕುಟುಂಬಗಳಿಗೆ ಪಡಿತರ ತಲುಪುವುದಕ್ಕೆ ರಾಜ್ಯದ ಪಡಿತರ ವಿತರಕರ ಹೆಚ್ಚಿನ ಪರಿಶ್ರಮ ಅಡಗಿದೆ

• ಉಮೇಶ್ ಬಾಣಾವರ, ಉದಯವಾಹಿನಿ ಬೆಂಗಳೂರು

ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ರಾಜ್ಯದ ಪಡಿತರ ವಿತರಕರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಿದ್ದರ ಪರಿಣಾಮ 136 ಸ್ಥಾನ ಪಡೆದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹಾಗೂ ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ ಎಂದು ಕಡೂರು ಕ್ಷೇತ್ರದ ಶಾಸಕ ಕೆ.ಎಸ್.ಆನಂದ್ ಹೇಳಿದರು.

ಸೋಮವಾರ ಕಡೂರಿನ ಟಿಡಿಎಸ್ ಸಭಾಂಗಣದಲ್ಲಿ ಕಡೂರು ತಾಲ್ಲೂಕು ಪಡಿತರ ವಿತರಕರ ಸಂಘದ ವತಿಯಿಂದ ತಮಗೆ ನೀಡಿದ ಹೃದಯಸ್ಪರ್ಶಿ ಸನ್ಮಾನ ಸಮಾರಂಭವನ್ನು ಸ್ವೀಕರಿಸಿ ಮಾತನಾಡಿದ ಶಾಸಕ ಕೆ ಎಸ್ ಆನಂದ್ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳಲ್ಲಿ ಬಹು ಮುಖ್ಯವಾದ ಮತ್ತು ಬಡವರ್ಗದ ಕುಟುಂಬಗಳಿಗೆ ವರದಾನವಾಗಿರುವ ಅನ್ನಭಾಗ್ಯ ಯೋಜನೆಯೂ ರಾಜ್ಯದ ಕೋಟ್ಯಾಂತರ ಬಡ ಕುಟುಂಬಗಳಿಗೆ ಯಶಸ್ವಿಯಾಗಿ ತಲುಪುತ್ತಿರುವ ಹಿಂದೆ ರಾಜ್ಯದ ಪಡಿತರ ವಿತರಕರ ಹೆಚ್ಚಿನ ಪರಿಶ್ರಮ ಅಡಗಿದೆ ಎಂದರು.

ನಾನು ಇದುವರೆಗೂ ಸಹ ಪಡಿತರ ವಿತರಕರ ಸರ್ಕಾರ ನೀಡುತ್ತಿರುವ ಕಮಿಷನ್ ಬಗ್ಗೆ ಮಾಹಿತಿ ಇರಲಿಲ್ಲ ಈಗ ನೀಡುತ್ತಿರುವ ಕಮಿಷನ್ ವಿಚಾರ ತಿಳಿದು ತುಂಬಾ ಬೇಸರವಾಗಿದೆ ಆದ್ದರಿಂದ ಮನೆ ಮುಖ್ಯಮಂತ್ರಿ ಸಿದ್ದರಾಮಯ್ಯ. ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಗಮನಕ್ಕೆ ತಂದು ಪಡಿತರ ವಿತರಕರ ಸಮಸ್ಯೆಗಳ ಬಗ್ಗೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಶಾಸಕರಾದ ಕೆ ಎಸ್ ಆನಂದ್ ಹೇಳಿದರು.


ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಧ್ಯಕ್ಷ ಕೃಷ್ಣಪ್ಪ ಮಾತನಾಡುತ್ತಾ ರಾಜ್ಯದಲ್ಲಿ ಪಡಿತರ ವಿತರಕರ ಸಂಘ ಬೆಳೆದು ಬಂದ ದಾರಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು ಇದರ ಹಿಂದೆ ಸಂಘದ ಪರಿಶ್ರಮದಿಂದ ಪಡಿತರ ವಿತರಕರ ಕಮಿಷನ್ ಹಣ 150 ರೂಗಳ ವರೆಗೆ ತಲುಪಿದೆ.

ಬರುವ ದಿನಗಳಲ್ಲಿ ಕ್ವಿಂಟಾಲ್ ಗೆ ರೂ.200 ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಇಲಾಖೆ ಸಚಿವರಾದ ಕೆಎಚ್ ಮುನಿಯಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಕೃಷ್ಣಪ್ಪ ತಿಳಿಸಿದರು.

ರಾಜ್ಯದಲ್ಲಿರುವ ಎಲ್ಲಾ ಇಲಾಖೆಗಳಲ್ಲಿ ಇರುವುದು ಒಂದೇ ಕಾನೂನು ಆದರೆ ಆಹಾರ ಇಲಾಖೆ ಪಡಿತರ ವಿತರಣೆಯಲ್ಲಿ ಮಾತ್ರ ಆಗಾಗ ಕಾನೂನುಗಳನ್ನು ಮಾರ್ಪಾಡು ಮಾಡಿ ಪಡಿತರ ವಿತರಣೆ ಬಗ್ಗೆ ಪಡಿತರ ವಿತರಕರ ಮೇಲೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕೆಂದರು.

ಅನ್ನ ಸುವಿಧ ಬಗ್ಗೆ ಪಡಿತರ ವಿತರಕರು ಸಭೆಯಲ್ಲಿ ಮಾತನಾಡಿ ಇದನ್ನು ಬದಲಾವಣೆಗೆ ಒತ್ತಡ ತರಬೇಕೆಂದು ಪ್ರತಿಕ್ರಿಯಿಸಿದ ಕೃಷ್ಣಪ್ಪ ಕೂಡಲೇ ಆಹಾರ ಸಚಿವರು ಮತ್ತು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು 75 ವರ್ಷದ ಮೇಲಿರುವ ಪಡಿತರ ಕಾರ್ಡುದಾರರಿಗೆ ಓಟಿಪಿ ಮುಖಾಂತರ ಇತರ ವಿತರಣೆಗೆ ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯ ಅಧ್ಯಕ್ಷ ಕೃಷ್ಣಪ್ಪ ಹೇಳಿದರು.

ಕಡೂರು ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಆಸಂಧಿ ಕಲ್ಲೇಶ್ ಚಿಕ್ಕಮಂಗಳೂರು ಜಿಲ್ಲೆ ಆಹಾರ ಇಲಾಖೆ ಉಪ ನಿರ್ದೇಶಕರಾದ ಯೋಗಾನಂದ ಕಡೂರು ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳಾದ ಪೂರ್ಣಿಮಾ. ಕಡೂರು ತಾಲ್ಲೂಕು ಪಡಿತರ ವಿತರಕರ ಸಂಘದ ಅಧ್ಯಕ್ಷ ಎಸ್ ಎನ್ ಸದಾಶಿವಪ್ಪ ಸೇರಿದಂತೆ ತಾಲ್ಲೂಕಿನ ಎಲ್ಲಾ ಪಡಿತರ ವಿತರಕರು ಹಾಗೂ ಮಾಲೀಕರು ಸಹಕಾರ ಸಂಘದ ಕಾರ್ಯದರ್ಶಿಗಳು ಹಾಗೂ ಮಾರಾಟ ಸಹಾಯಕರು ಉಪಸ್ಥಿತರಿದ್ದರು.



### ಅನ್ನ ಸುವಿದ ಬಗ್ಗೆ ಬೇಸರ ವ್ಯಕ್ತಪಡಿಸಿದ ಕೃಷ್ಣಪ್ಪ

ಸರ್ಕಾರ ಆರು ತಿಂಗಳಿಗೊಮ್ಮೆ ಪಡಿತರ ವಿತರಣೆಯಲ್ಲಿ ತಮಗೆ ಇಷ್ಟ ಬಂದಂತ ಕಾನೂನುಗಳನ್ನು ರಚಿಸಿಕೊಳ್ಳುತ್ತಿದ್ದು ಈ ಕಾನೂನುಗಳನ್ನು ರಾಜ್ಯದ ಪಡಿತರ ವಿತರಕರ ಮೇಲೆ ಹಾಗೂ ತಾಲ್ಲೂಕು ಮಟ್ಟದ ಆಹಾರ ಇಲಾಖೆ ನಿರೀಕ್ಷಕರು ಹಾಗೂ ಆಹಾರ ಇಲಾಖೆ ಚಿರತೆ ದಾರಿಗಳು ಸೇರಿದಂತೆ ತಾಲ್ಲೂಕು ಮಟ್ಟದ ಸಿಬ್ಬಂದಿಗಳ ಮೇಲೆ ಒತ್ತಡ ಏರುತ್ತಿರುವುದು ಸರಿಯಲ್ಲ ಅನುಸೂವಿದ ಜಾರಿಗೆ ತಂದಿರುವ ಯೋಜನೆ ಬಗ್ಗೆ ನಮಗೆ ಬೇಸರವಿಲ್ಲ ಆದರೆ ವಿತರಣೆಯ ರೀತಿಯನ್ನು ಮಾರ್ಪಾಡು ಮಾಡಬೇಕೆಂದು ಕಡೂರು ಕ್ಷೇತ್ರದ ಶಾಸಕರಾದ ಕೆ ಎಸ್ ಅನಂದ್ ರವರಿಗೆ ಮನವಿ ಮಾಡಿ ಬರುವ ಬಜೆಟ್ ಅಧಿವೇಶನದಲ್ಲಿ ಪದೇ ಪದೇ ಪಡಿತರ ವಿತರಣೆಯಲ್ಲಿ ಸಲ್ಲದ ಕಾನೂನುಗಳನ್ನು ಜಾರಿಗೆ ತರುವುದನ್ನು ನಿಲ್ಲಿಸಬೇಕೆಂದು ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 91.52 ₹/L ಬಂಗಾರ: ₹17,051/Gram24ct ₹15,630/Gram22ct ಬೆಳ್ಳಿ: ₹315.00/Gram

## ಬೆಂಗಳೂರಿನ ವಿವಿಧ ದೇವಾಲಯಗಳಲ್ಲಿ ಪೂಜಾ, ದರ್ಶನ ಸಮಯ ಬದಲು

• ಉದಯವಾಹಿನಿ,ಬೆಂಗಳೂರು

ವರ್ಷದ ಮೊದಲ ಚಂದ್ರಗ್ರಹಣ ಹೋಳಿ ಹುಣ್ಣಿಮೆಯ ದಿನದಂದು ಸಂಭವಿಸುತ್ತಿದೆ. ಇದನ್ನು ಬ್ಲಡ್ ಮೂನ್ ಎಂದೂ ಕರೆಯಲಾಗುತ್ತದೆ. ರಕ್ತ ಚಂದ್ರ ಗ್ರಹಣದಿಂದ ಜಲಕಂಟಕ, ಅಗ್ನಿ ಕಂಟಕ ಜೊತೆಗೆ ಸಿಂಹ ರಾಶಿ ಅವರಿಗೆ ಅಪಾಯ ಇದೆ, ವಿವಿಧ ರಾಶಿಯವರಿಗೂ ಎಫೆಕ್ಟ್ ತಟ್ಟಲಿದೆ ಎಂದು ಜೋತಿಷಿಗಳು ಈಗಾಗಲೇ ಹೇಳುತ್ತಿದ್ದಾರೆ. ಈ ಮಧ್ಯೆ, ಗವಿಗಂಗಾಧರೇಶ್ವರ ದೇವಾಲಯದ ಪ್ರಧಾನ ಅರ್ಚಕ ಸೋಮಸುಂದರ್ ದೀಕ್ಷಿತ್, ಗ್ರಹಣ ದಿನದಂದು ದೇವಾಲಯದ ಕಾರ್ಯಕ್ರಮಗಳ ಬಗ್ಗೆ ತಿಳಿಸಿದ್ದಾರೆ. ಆ ದಿನ ಚಂದ್ರಗ್ರಹಣದಿಂದ ಆಗುವ ಒಳಿತು ಕೆಡುಕುಗಳು ಮತ್ತು ಗವಿಗಂಗಾಧರೇಶ್ವರ ದೇವಾಲಯದ ವಿಶೇಷ ಪೂಜೆ ಪುನಸ್ಕಾರ ಜೊತೆಗೆ ದೇವಸ್ಥಾನ ಯಾವಾಗ ಓಪನ್, ಯಾವಾಗ ಬಂದ್ ಆಗಿರುತ್ತೆ ಅನ್ನೋ ಮಾಹಿತಿಯನ್ನೂ ನೀಡಿದ್ದಾರೆ. ಮಾ.3ರಂದು ರಕ್ತಚಂದ್ರ ಗ್ರಹಣ ಹಿನ್ನೆಲೆ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಎಂದಿನಂತೆ ಪೂಜೆ ಪುನಸ್ಕಾರಗಳು ನೆರವೇರಲಿವೆ.

ಬೆಳ್ಳಗ್ಗೆ 6 ಗಂಟೆಯಿಂದ ಜಲಾಭಿಷೇಕ ವಿಶೇಷ ಪೂಜೆ ನೆರವೇರಿಸಿ, 9 ಗಂಟೆಗೆ ದರ್ಬೆಯಿಂದ ಗರ್ಭಗುಡಿ ಬಂಧನ ಮಾಡಿ, ದೇವಸ್ಥಾನ ಕ್ಲೋಸ್ ಮಾಡಲಾಗುತ್ತೆ. ನಂತರ ಸಂಜೆ 7:30 ಗಂಟೆಗೆ ದೇವಸ್ಥಾನ ಓಪನ್ ಮಾಡಿ ಸ್ವಾಮಿಗೆ ಜಲಾಭಿಷೇಕ, ಮರುದಿನ ಅಂದ್ರೆ, ಬುಧವಾರ ಬೆಳಗ್ಗೆ ದೇವಸ್ಥಾನ ಶುಚಿಗೊಳಿಸುವ ಕಾರ್ಯ ನಡೆಯಲಿದೆ ಎಂದು ಸೋಮಸುಂದರ್ ದೀಕ್ಷಿತ್ ಗುರೂಜಿ ಅವರು ತಿಳಿಸಿದ್ದಾರೆ.

## ಮಕ್ಕಳ ಭವಿಷ್ಯದ ಆತಂಕ: 1ನೇ ತರಗತಿಗೆ ದಾಖಲಾತಿ ವಯೋಮಿತಿ ಸಡಿಲಿಕೆಗೆ ಪೋಷಕರ ಪಟ್ಟು

• ಉದಯವಾಹಿನಿ,ಬೆಂಗಳೂರು

ಹೊಸ ಶಿಕ್ಷಣ ನೀತಿ (KCP) ಪ್ರಕಾರ ಪ್ರಥಮ ತರಗತಿಗೆ ಪ್ರವೇಶಕ್ಕೆ 6 ವರ್ಷ ನಿಗದಿ ಹಿನ್ನೆಲೆ, ನಿಗದಿಪಡಿಸಿದ ವಯೋಮಿತಿಯನ್ನು ಪೂರೈಸದ ಮಕ್ಕಳ ಪೋಷಕರು ಬೆಂಗಳೂರಿನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. 90 ದಿನಗಳ ಸಡಿಲಿಕೆ ನೀಡುವಂತೆ ಕರ್ನಾಟಕ ಸರ್ಕಾರವನ್ನು ಪೋಷಕರು ಆಗ್ರಹಿಸಿದ್ದು, ಯುಕೆಜಿ ಮುಗಿದಿದೆ 1ನೇ ತರಗತಿಗೆ ದಾರಿ ಬಿಡಿ. ಸಮಯ ವ್ಯರ್ಥ ಮಾಡಬೇಡಿ, ಕಲಿಕೆಗೆ ಅವಕಾಶ ಕೊಡಿ. ಶಿಕ್ಷಣ ನಮ್ಮ ಹಕ್ಕು, ವಯಸ್ಸು ಅಡ್ಡಿಯಾಗದಿರಲಿ ಎಂಬಿತ್ಯಾದಿ ಪ್ಲೇ ಕಾರ್ಡ್ ಹಿಡಿದು ಸರ್ಕಾರದ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಂತಹ ಆದೇಶಗಳಿಂದಾಗಿ ಯುಕೆಜಿ ಅಥವಾ ಮಾಂಟೆಸ್ಸರಿ ತರಗತಿಯನ್ನು ಮರುಕಳಿಸಬೇಕಾದ ಪರಿಸ್ಥಿತಿ ಎದುರಾಗಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಈ ಕುರಿತು ಮಾತನಾಡಿರುವ ಓರ್ವ ಪೋಷಕರು, ಇದು ಪ್ರತಿಭಟನೆ ಅಲ್ಲ. ಸರ್ಕಾರಕ್ಕೆ ನಾವು ಮಾಡುತ್ತಿರುವ ಮನವಿ.

ಮೂರು ವರ್ಷಗಳ ಪೂರ್ವ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಮಕ್ಕಳನ್ನು ಪ್ರಥಮ ತರಗತಿಗೆ ದಾಖಲಿಸಬೇಕು. ಆದರೆ ನಮ್ಮ ಮಕ್ಕಳು KCP ಪ್ರಕಾರ 6 ವರ್ಷದ ವಯೋಮಿತಿಯನ್ನು ಪೂರೈಸುತ್ತಿಲ್ಲ. ಈಗಿರುವ ತರಗತಿಯನ್ನು ಮರುಕಳಿಸುವುದು ಮಕ್ಕಳಿಗೆ ಮಾನಸಿಕ ಒತ್ತಡ ಉಂಟುಮಾಡುತ್ತದೆ. ಶಿಕ್ಷಣ ಸಂಸ್ಥೆಗಳು ಸಹ ಮಕ್ಕಳನ್ನು ಮರುಕಳಿಸಲು ಇಷ್ಟಪಡುವುದಿಲ್ಲ ಎಂದಿದ್ದಾರೆ.

## ಬೆಂಗಳೂರು ಏರ್‌ಪೋರ್ಟ್‌ನಲ್ಲಿ ವಿಮಾನ ಹಾರಾಟ ಸ್ಥಗಿತ, ಪ್ರಯಾಣಿಕರ ಪರದಾಟ

• ಉದಯವಾಹಿನಿ,ಬೆಂಗಳೂರು

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿಯ ಹಿನ್ನೆಲೆಯಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು 50 ವಿಮಾನಗಳನ್ನು ರದ್ದುಗೊಳಿಸಿದೆ. ಈ ರದ್ದತಿಯುಆಗಮನ ಮತ್ತು ನಿರ್ಗಮನ ಎರಡರ ಮೇಲೂ ಪರಿಣಾಮ ಬೀರಿದೆ, ಪ್ರಮುಖ ಗಲ್ಫ್ ತಾಣಗಳಿಗೆ ಮತ್ತು ಅಲ್ಲಿಂದ ಪ್ರಯಾಣಿಸುವ ನೂರಾರು ಪ್ರಯಾಣಿಕರಿಗೆ ತೊಂದರೆಯಾಗಿದೆ.

ರದ್ದಾದ 50 ವಿಮಾನಗಳಲ್ಲಿ 22 ಆಗಮನಗಳು ಮತ್ತು 28 ನಿರ್ಗಮನಗಳಾಗಿವೆ. ಅಂಕಿ ಅಂಶಗಳನ್ನು ದಾಖಲಿಸಲಾಗಿದೆ. ದುಬೈ, ಅಬುಧಾಬಿ, ದೋಹಾ, ರಿಯಾದ್, ಜೆಡ್ಡಾ ಮತ್ತು ದಮ್ಮಾಮ್‌ಗೆ ಹೋಗುವ ವಿಮಾನಗಳು ಹೆಚ್ಚು ಪರಿಣಾಮ ಬೀರಿವೆ. ಈ ಮಾರ್ಗಗಳು ಒಟ್ಟಾಗಿ ಬೆಂಗಳೂರು ವಿಮಾನ ನಿಲ್ದಾಣದ ಅಂತರರಾಷ್ಟ್ರೀಯ ಸಂಚಾರದ ಗಮನಾರ್ಹ ಪಾಲನ್ನು ಹೊಂದಿವೆ. ಇರಾನ್ ಮತ್ತು ಇಸ್ರೇಲ್ ತಮ್ಮ ವಾಯುಪ್ರದೇಶವನ್ನು ಮುಚ್ಚಿದ ನಂತರ ಶನಿವಾರ ಸಂಜೆ ತಡವಾಗಿ ಅಡಚಣೆಗಳು ಪ್ರಾರಂಭವಾದವು. ರಾತ್ರಿಯಿಡೀ ಮತ್ತು ಭಾನುವಾರದವರೆಗೂ ಈ ಅಡಚಣೆ ಮುಂದುವರೆಯಿತು, ನೂರಾರು ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡರು.

ಗಲ್ಫ್ ಮಾರ್ಗಗಳಲ್ಲಿ ವಿಮಾನಗಳು ರದ್ದಾದರೂ, ವಿಮಾನ ನಿಲ್ದಾಣದ ಒಟ್ಟಾರೆ ಕಾರ್ಯಾಚರಣೆಗಳು ದಿನವಿಡೀ ಸಾಮಾನ್ಯವಾಗಿದ್ದವು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ತಿಳಿಸಿದೆ.

## ಬೆಂಗಳೂರಿಗರಿಗೆ ಅಲರ್ಟ್; ಮನೆಯಿಂದ ಹೊರ ಬರೋ ಮುನ್ನ ಎಚ್ಚರ

• ಉದಯವಾಹಿನಿ, ಬೆಂಗಳೂರು

ಸರ್ಕಾರಕ್ಕೆ ಸಾಲು ಸಾಲು ಮುಷ್ಕರದ ಬಿಸಿ ತಟ್ಟಲಿದೆ. ರಾಜ್ಯದ ವಿವಿಧ ಇಲಾಖೆಗಳು ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾಗಿದೆ. ಫ್ರೀಡಂ ಪಾರ್ಕ್‌ನಲ್ಲಿ ಸಾಲು ಸಾಲು ಪ್ರತಿಭಟನೆ ನಡೆಯಲಿದ್ದು, ಭಾರೀ ಪ್ರಮಾಣದಲ್ಲಿ ಸ್ಥಳಕ್ಕೆ ಜನರು ಜಮಾಯಿಸುವ ಸಾಧ್ಯತೆ ಇದೆ. ಧರಣಿ ಹಿನ್ನೆಲೆ ಫ್ರೀಡಂ ಪಾರ್ಕ್‌ನಲ್ಲಿ ಸುತ್ತ-ಮುತ್ತ ಟ್ರಾಫಿಕ್ ಜಾಮ್ ಉಂಟಾಗುವ ಸಾಧ್ಯತೆ ಇದ್ದು, ಬೆಂಗಳೂರಿನ ವಾಹನ ಸವಾರರು ಈ ಭಾಗದ ರಸ್ತೆಗಳ ಸಂಚಾರ ತಪ್ಪಿಸೋದು ಉತ್ತಮವಾಗಿದೆ.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು , ಸಹಾಯಕಿಯರ ಫೆಡರೇಶನ್ ಪ್ರತಿಭಟನೆಗೆ ಇಳಿಯಲಿದ್ದಾರೆ. ಬಿಸಿಯೂಟ ತಯಾರಿಕ ಮಹಿಳೆಯರಿಗೆ ಕನಿಷ್ಟ ವೇತನ ಜಾರಿಗೆ ಒತ್ತಾಯಿಸಿ ಹೋರಾಟ ತೀವ್ರಗೊಳ್ಳಲಿದೆ. ವಿವಿಧ ಬೇಡಿಕೆಗಳನ್ನ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಘದಿಂದ ಪ್ರತಿಭಟನೆಗಳು ನಡೆಯಲಿದೆ. ಸರ್ಕಾರಕ್ಕೆ ಹೋರಾಟದ ಬಿಸಿ ತಟ್ಟುವ ಸಾಧ್ಯತೆ ಇದೆ.

# ಸಾತ್ವಿಕ ಹಠ, ಛಲ ಸಾಧನೆಗೆ ದಾರಿ ದೀಪ :ಹೆಚ್. ಎಸ್. ಪ್ರತಿಮಾ ಹಾಸನ್

• ಉದಯವಾಹಿನಿ,ಬೆಂಗಳೂರು

1:03:2026 ರಂದು ಬೆಂಗಳೂರಿನಲ್ಲಿರುವ ಗಾಂಧಿ ಭವನದ ಹತ್ತಿರ ಇರುವ ಮಾನ್ಯ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು. ಇವರ ಗೃಹದಲ್ಲಿ 'ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್' ವತಿಯಿಂದ ಮಾನ್ಯ ಸಭಾಪತಿಗಳಾದ ಶ್ರೀಯುತ ಬಸವರಾಜ ಹೊರಟ್ಟಿರವರಿಗೆ ಟ್ರಸ್ಟ್‌ನ ಸಂಸ್ಥಾಪಕಿ ಸಾಹಿತಿ, ಶಿಕ್ಷಕಿ, ಸಾಮಾಜಿಕ ಚಿಂತಕಿ, ಪತ್ರಕರ್ತೆ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್‌ರವರು ತನ್ನ ಕೃತಿಗಳಾದ 'ಪ್ರತಿಬೋಧ' ಹಾಗೂ ಪ್ರತಿಮಾವಲೋಕನ' ಕೃತಿ ಅವರ ಬಗ್ಗೆ ಬರೆದಂತಹ ಪ್ರತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳ ಕೈಪಿಡಿಯನ್ನು ನೀಡಿ ಸನ್ಮಾನಿಸಿ ಗೌರವಿಸಿದರು.

ನಂತರ ಮಾತನಾಡಿದ ಮಾನ್ಯ ಸಭಾಪತಿಗಳು ಒಬ್ಬ ಮಹಿಳೆಯಾಗಿ, ಸಾಹಿತಿಯಾಗಿ, ಸಾಮಾಜಿಕ ಚಿಂತನೆಗಳಲ್ಲಿ ವೃತ್ತಿಯೊಂದಿಗೆ ಪ್ರವೃತ್ತಿಯಲ್ಲಿ ತೊಡಗಿಸಿಕೊಂಡು ಕಾರ್ಯ


ಉದಯವಾಹಿನಿ ಚಿತ್ರ

ನಿರ್ವಹಿಸುತ್ತಿರುವ ಪ್ರತಿಮಾ ಹಾಸನ್ ರವರ ಕಾರ್ಯವು ಹೀಗೆ ಮುಂದುವರೆಯುತ್ತಾ ಸಾಗಲಿ ಎಂದು ಸಂತಸ ಪಟ್ಟರು . ಇಷ್ಟು ಚಿಕ್ಕ ವಯಸ್ಸಿಗೆ ಇಷ್ಟೊಂದು ಸಾಧನೆ ಮಾಡಿರುವುದು ಸಂತಸದ ವಿಚಾರ ನಾನು ಪ್ರತಿಮಾ ಹಾಸನ್ ರವರನ್ನು ಪ್ರೌಢಶಾಲಾ ಶಿಕ್ಷಕಿ, ಸಾಹಿತಿ ಎಂದು ತಿಳಿದಿದ್ದೆ.

ಎಲ್ಲಾ ರಂಗದಲ್ಲೂ ಕಾರ್ಯನಿರ್ವಹಿಸುತ್ತಿರುವ ಪ್ರತಿಮಾ ಹಾಸನ್ ರವರ ಕ್ರಿಯಾಶೀಲ ಕಾರ್ಯಗಳನ್ನು ಕಂಡರೆ ಖುಷಿಯಾಗುತ್ತದೆ.

ಹೀಗೆ ಇವರ ಕಾರ್ಯಗಳು ಮುಂದುವರೆಯಲಿ ಎಂದು ತಿಳಿಸುತ್ತ ಆಶೀರ್ವಾದಿಸಿದರು. ಸಭಾಪತಿಗಳ ಮುಂದೆ ಐದಾರು ಆಶು ಕವಿತೆಗಳನ್ನು ಹೇಳುತ್ತಾ ಅವರ ಸಾಧನೆಯ ಬಗ್ಗೆ ತಿಳಿಯುತ್ತ ಅವರನ್ನು ಸಂದರ್ಶಿಸಿ ಸಾತ್ವಿಕ ಹಠ ಛಲ ಸಾಧನೆಗೆ ದಾರಿದೀಪ ಎಂಬುದನ್ನು ಸಭಾಪತಿಗಳನ್ನು ಕಂಡರೆ ತಿಳಿಯುತ್ತದೆ ಎಂದು ತಿಳಿಸುತ್ತ ಅವರು ಯುವ ಪೀಳಿಗೆಗೆ ಮಾರ್ಗದರ್ಶಿಗಳಾಗಿದ್ದಾರೆ ಶಿಕ್ಷಕರಿಗೆ ಶಕ್ತಿ ಯಾಗಿದ್ದಾರೆ ಎಂದು ತಿಳಿಸುತ್ತ ಸಂತಸ ಪಡುತ್ತಾ ಹುಟ್ಟಿದ ಮೇಲೆ ಏನಾದರೂ ಸಾಧಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುತ್ತ ಸಾಗುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ.ಆಗಿದ್ದರೆ ಅದು ಒಂದು ಸಾಧನೆಯೇ, ಸಮಾಜದಲ್ಲಿ ಕಾಲೆಳೆಯುವುದನ್ನು ಬಿಟ್ಟು, ಕಾರ್ಯನಿರ್ವಹಿಸುವುದರ ಕಡೆಗೆ ಗಮನವಿದ್ದರೆ ಸನ್ಮಾನಗಳು ಪ್ರಶಸ್ತಿಗಳು ಅವುಗಳಾಗಿಯೇ ಅರಸಿ ಬರುತ್ತದೆ. ಒಟ್ಟಾರೆ ಶ್ರೀಯುತ ಬಸವರಾಜ ಹೊರಟ್ಟಿ ರವರ ಕಾರ್ಯಪ್ರವೃತ್ತಿಯು ಎಲ್ಲೆಡೆ ಮೆಚ್ಚುಗೆಗೆ ಪಾತ್ರವಾಗುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ ಎಂದು ಎಂದು ಹೆಚ್. ಎಸ್. ಪ್ರತಿಮಾ ಹಾಸನ್ ತಿಳಿಸಿದರು.

ಮನುಷ್ಯನಾಗಿ ಹುಟ್ಟಿದ ಮೇಲೆ ಏನಾದರೂ ಸಾಧಿಸ ಬೇಕು

# ಎಚ್‌ಡಿಕೆ ಹೊಸ ಬಾಂಬ್

• ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರ ಮೇಲೆ ಸಚಿವರಿಂದಲೇ ಗುಪ್ತಚಾರಿಕೆ

ಎಚ್‌ಡಿಕೆ ಭರವಸೆ

1 ಫೋನ್ ಟ್ಯಾಪಿಂಗ್

2 ರಾಜ್ಯದಲ್ಲಿ ತಂಬಾಕು ಬೆಳೆಗಾರರ ಹಿತರಕ್ಷಣೆಗೆ ಕೇಂದ್ರ ಸರ್ಕಾರ ಬದ್ಧ


ಉದಯವಾಹಿನಿ ಚಿತ್ರ


• ಉದಯವಾಹಿನಿ,ಬೆಂಗಳೂರು

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಫೋನ್ ಟ್ಯಾಪಿಂಗ್ ಬಾಂಬ್ ಸಿಡಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈಗ ಫೋನ್ ಟ್ಯಾಪಿಂಗ್ ನಡೆಯುತ್ತಿದೆ ಎಂದಿದ್ದಾರೆ. ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಈಗಲೂ ಫೋನ್ ಟ್ಯಾಪಿಂಗ್ ಇದೆ. ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆ ರೀತಿ ವರ್ತಿಸುತ್ತಾರೆ. ನಾನು ಸತ್ಯ ಹೇಳುತ್ತೇನೆ ಕೇಳಿ, ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು.


ಇವತ್ತಿನ ಸರ್ಕಾರದಲ್ಲಿ ಅದು ಎಷ್ಟು ಹೆಚ್ಚಾಗಿದೆ ಎಂಬುದು ಅವರನ್ನೇ ಕೇಳಬೇಕು ಎಂದಿದ್ದಾರೆ. ಅವರದ್ದೇ ಶಾಸಕರ ಮೇಲೆ ಅವರದ್ದೇ ಸಚಿವರು ಗುಪ್ತಚಾರಿಕೆ ಮಾಡುತ್ತಿರುವುದು ಇದೇ ಮೊದಲು. ಸಿಎಂ ಆಗಬೇಕೆಂದುಕೊಂಡವರು ಅವರ ಸರ್ಕಾರದ ಮೇಲೆ ಗುಪ್ತಚರಿಕೆ ಆರಂಭಿಸಿರುವುದು ದುರಂತ ಎಂದು ಮೈಸೂರಿನಲ್ಲಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ.

ಇನ್ನೂ ಮಧ್ಯಪ್ರಾಚ್ಯ, ಇರಾನ್, ಇಸ್ರೇಲ್ ನಲ್ಲಿ ಸಿಲುಕಿರುವ ಕನ್ನಡಿಗರನ್ನು ಯುದ್ಧ ಸಂಪೂರ್ಣ ನಿಲ್ಲುವವರೆಗೂ ಅಲ್ಲಿಂದ ಎಲ್ಲರನ್ನು ಕರೆಸುವುದು ಕಷ್ಟ. ವಿಮಾನ ಹಾರಾಟ ಆರಂಭವಾದ್ರೆ, ಎಲ್ಲರೂ ಬಹುಬೇಗ ಸುರಕ್ಷಿತವಾಗಿ ಬರುತ್ತಾರೆ. ವಿಮಾನ ಹಾರಾಟ ಬಂದ್ ಆಗಿರುವ ಕಾರಣ ಸಮಸ್ಯೆಯಾಗಿದೆ.

ದುಬೈನಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರು ಸಾಧ್ಯವಾದಷ್ಟು ಕನ್ನಡಿಗರ ಸಹಾಯಕ್ಕೆ ಬಂದಿದ್ದಾರೆ. ನನ್ನ ಜೊತೆಯೂ ಬಹಳಷ್ಟು ಜನ ಸಂಪರ್ಕದಲ್ಲಿದ್ದಾರೆ. ಕೇಂದ್ರ ಸರ್ಕಾರವು ಕೂಡ ಎಲ್ಲಾ ಭಾರತೀಯರ ಸುರಕ್ಷತೆಗೆ ಒತ್ತು ಕೊಟ್ಟಿದೆ. ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರದ ಮಾತುಕತೆ ನಡೆಸುತ್ತಿದೆ ಎಂದು ಮೈಸೂರಿನಲ್ಲಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ.

**ಮೈಸೂರಿನವರು ಸಿಲುಕಿರುವ ಮಾಹಿತಿ ಇಲ್ಲ:** ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಲ್ಲಿ ಕನ್ನಡಿಗರ ರಕ್ಷಣೆ ವಿಚಾರಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಸಚಿವ ಹೆಚ್.ಸಿ. ಮಹಾದೇವಪ್ಪ ಅವರು ಕೂಡ ಮಾತನಾಡಿದ್ದಾರೆ, ಯುದ್ಧ ಭೂಮಿಯಲ್ಲಿ ಮೈಸೂರು ಜಿಲ್ಲೆಯವರು ಸಿಲುಕಿರುವ ಬಗ್ಗೆ ಮಾಹಿತಿ ಇಲ್ಲ. ರಾಜ್ಯ ಸರ್ಕಾರ ಕನ್ನಡಿಗರ ರಕ್ಷಣೆಗೆ ಕ್ರಮ ತೆಗೆದುಕೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಗ್ಗೆ ಮಾತನಾಡಿ ಕ್ರಮವಹಿಸಿದ್ದಾರೆ.

ಈ ಘಟನೆಯಲ್ಲಿ ಮೈಸೂರಿನವರು ಇರುವ ಮಾಹಿತಿ ಇಲ್ಲಿಯವರೆಗೂ ಸಿಕ್ಕಿಲ್ಲ, ಕನ್ನಡಿಗರ ರಕ್ಷಣೆಗೆ ಬದ್ಧ ಎಂದು ಸಚಿವ ಮಹಾದೇವಪ್ಪ ತಿಳಿಸಿದ್ದಾರೆ.

ಕನ್ನಡಿಗರ ರಕ್ಷಣೆ ಮಾಡಿ

ಎಚ್‌ಡಿಕೆ ಗಂಭೀರ ಆರೋಪ



### ನಿಮ್ಮ ಸಮಸ್ಯೆ ಆಲಿಸಲು ಸಿದ್ಧ

**ನಿಮ್ಮ ಸಮಸ್ಯೆಗಳನ್ನು ಕೇಳಲು ನಾವು ಸಿದ್ಧರಿದ್ದೇವೆ. ನಾನು, ಮೈಸೂರು ಕೊಡಗು ಕ್ಷೇತ್ರದ ಲೋಕಸಭೆ ಸದಸ್ಯರಾದ ಯದುವೀರ್ ಅವರು ಸತತವಾಗಿ ಸಂಬಂಧಪಟ್ಟ ಎಲ್ಲರ ಜತೆ ಮಾತುಕತೆ ನಡೆಸಿದ್ದೇವೆ. ಸುಂಕ ಏರಿಕೆ ಬಗ್ಗೆ ನಾವು ಕೇಂದ್ರದ ವಿತ್ತ ಸಚಿವರನ್ನು ಭೇಟಿಯಾಗಿ ಮನವಿ ಮಾಡುತ್ತೇವೆ. ಆದರೆ, ರೈತರಿಗೆ ನೀವು ಕೊಟ್ಟ ಮಾತನ್ನು ಉಳಿಸಿಕೊಳ್ಳಿ ಎಂದು ಸಚಿವ ಕುಮಾರಸ್ವಾಮಿ ಅವರು ವರ್ತಕರಿಗೆ ಹೇಳಿದರು. ಹರಾಜು ಪ್ರಕ್ರಿಯೆಯಲ್ಲಿ ಯಾವ ಯಾವ ಖರೀದಿದಾರರು ಭಾಗಿಯಾಗುತ್ತಿದ್ದಾರೆ ಎಂದು ತಂಬಾಕು ಮಂಡಳಿ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು ವಿದೇಶೀ ಕಂಪನಿಗಳು ಹರಾಜಿನಲ್ಲಿ ಭಾಗಿಯಾಗಲು ಏನಾದರೂ ನಿರ್ಬಂಧಗಳು ಇವೆಯೇ ಎಂದು ಮಂಡಳಿ ಅಧಿಕಾರಿಗಳನ್ನು ಪ್ರಶ್ನಿಸಿದರು. ಅದಕ್ಕೆ ಅಧಿಕಾರಿಗಳು, ಯಾವುದೇ ನಿರ್ಬಂಧ ಇಲ್ಲ ಎಂಬ ಅಂಶವನ್ನು ಕೇಂದ್ರ ಸಚಿವರ ಗಮನಕ್ಕೆ ತಂದರು. ಏಕಪಕ್ಷೀಯವಾಗಿ ಹರಾಜು ನಿಲ್ಲಿಸಲು ಸಾಧ್ಯವಿಲ್ಲ. ಅಂತಹ ಕ್ರಮಕ್ಕೆ ನೀವು ಮುಂದಾಗಬಾರದು.**

### ರೈತರನ್ನು ಕಾಪಾಡಿಕೊಳ್ಳಬೇಕಿದೆ

**ರೈತರನ್ನು ಕಾಪಾಡಿಕೊಳ್ಳಬೇಕಿದೆ. ಅವರಿಗೆ ನೀವು ಮಾತು ಕೊಟ್ಟಂತೆಯೇ ನಡೆದುಕೊಳ್ಳಿ. ನೆರೆ ರಾಜ್ಯ ಆಂಧ್ರ ಪ್ರದೇಶದಂತೆಯೇ ಇಲ್ಲಿಯೂ ಉತ್ತಮ ದರವನ್ನು ಕೊಟ್ಟು ತಂಬಾಕು ಖರೀದಿ ಮಾಡಿ. ಸುಂಕ ಸೇರಿದಂತೆ ನಿಮಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ಅದಕ್ಕೂ ಮೊದಲು ನಿಗದಿಯಂತೆ ತಂಬಾಕು ಖರೀದಿ ಮಾಡಿ ಎಂದು ಕೇಂದ್ರ ಸಚಿವರು ಹೇಳಿದರು. ಕೇಂದ್ರ ಸರ್ಕಾರ ಸಿಗರೇಟಿನ ಸುಂಕ ಹಾಕಿದೆ ಎಂದು ಹೇಳುತ್ತೀರಿ.**

## ಬೆಂಗಳೂರಿನಲ್ಲಿ ದೇಶದ ಮೊದಲ ಶೂಟಿಂಗ್ ಲೀಗ್ ಆಯೋಜನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಭಾರತದ ಮೊದಲ ಶೂಟಿಂಗ್ ಲೀಗ್ ಬೆಂಗಳೂರಿನಲ್ಲಿ ನಡೆದಿದೆ. 8 ತಂಡಗಳು ಮತ್ತು 88 ಕ್ರೀಡಾಪಟುಗಳು ಶೂಟಿಂಗ್ ಲೀಗ್‌ನಲ್ಲಿ ಭಾಗಿಯಾಗಿದ್ದವು. ಕರ್ನಾಟಕ ರೈಫಲ್ ಅಸೋಸಿಯೇಷನ್ ಮತ್ತು TIX ಹೌಸಿಂಗ್ ಡೆವಲಪ್ ಮೆಂಟ್ ಕಾರ್ಪೋರೇಷನ್ ಜಂಟಿಯಾಗಿ ಆಯೋಜಿಸಿದ ಶೂಟಿಂಗ್ ಲೀಗ್, ವಿಜೇತರಿಗೆ 7.5 ಲಕ್ಷ ಬಹುಮಾನ ನೀಡಲಾಯಿತು. ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ವೃತ್ತಿಪರ ಶೂಟಿಂಗ್ ಲೀಗ್ ಅನ್ನು ಆಯೋಜಿಸಲಾಗಿದ್ದು, ಇದು ದೇಶದ ಕ್ರೀಡಾ ಲೋಕದಲ್ಲಿ ಹೊಸ ಅಧ್ಯಾಯವನ್ನು ಸೂಚಿಸುತ್ತದೆ.

TIX ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ರೈಫಲ್ ಅಸೋಸಿಯೇಷನ್ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮವು ಪಿಸ್ತೂಲ್ ಮತ್ತು ರೈಫಲ್ ಶೂಟಿಂಗ್ ಅನ್ನು ಲೀಗ್ ಸ್ವರೂಪಕ್ಕೆ ತಂದಿತು. ಶೂಟಿಂಗ್ ಮತ್ತು ರೈಫಲ್ ಆಸಕ್ತರಲ್ಲಿ ಉತ್ಸಾಹವನ್ನು ಮೂಡಿಸಿತು. ಫೆಬ್ರವರಿ 28 ಮತ್ತು ಮಾರ್ಚ್ 1 ರಂದು ಜ್ಞಾನಭಾರತಿ ಕ್ಯಾಂಪಸ್‌ನಲ್ಲಿರುವ ಶೂಟಿಂಗ್ ಕ್ಲಬ್‌ನಲ್ಲಿ ನಡೆದ ಎರಡು ದಿನಗಳ ಪಂದ್ಯಾವಳಿಯಲ್ಲಿ ಆರು ಶೂಟಿಂಗ್ ವಿಭಾಗಗಳಲ್ಲಿ ಎಂಟು ತಂಡಗಳು ಸ್ಪರ್ಧಿಸಿದ್ದವು. ಒಟ್ಟು 88 ಕ್ರೀಡಾಪಟುಗಳು ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು, ವಿಜೇತ ತಂಡಗಳು ನಗದು ಬಹುಮಾನಗಳನ್ನು ಪಡೆದರು. ಈ ಕಾರ್ಯಕ್ರಮದ ಯಶಸ್ಸಿಗೆ TIX ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ ವ್ಯವಸ್ಥಾಪಕ ನಿರ್ದೇಶಕ ಹೆಚ್. ನಾಗರಾಜ್ ಮತ್ತು ಅವರ ಪುತ್ರಿ ನಿಸರ್ಗ ಅವರ ಪ್ರಯತ್ನಗಳು ಕಾರಣ ಎಂದು ಸಂಘಟಕರು ಶ್ಲಾಘಿಸಿದರು. ಸುಮಾರು ನಾಲ್ಕು ದಶಕಗಳಿಂದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಪ್ರಮುಖ ಹೆಸರಾಗಿರುವ ಎಸ್‌ಎಲ್‌ವಿ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಶ್ರೀ ಕೃಷ್ಣ ಚಾರಿಟೇಬಲ್ ಟ್ರಸ್ಟ್ ಮೂಲಕ ಸಾಮಾಜಿಕ ಜವಾಬ್ದಾರಿಯಲ್ಲೂ ಸಕ್ರಿಯವಾಗಿದೆ. ಸರ್ಕಾರಿ ಶಾಲೆಗಳನ್ನು ಸುಧಾರಿಸುವ ಮೂಲಕ, ಹಿಂದುಳಿದ ವಿದ್ಯಾರ್ಥಿಗಳಿಗೆ ಬೆಂಬಲ ನೀಡುವ ಮೂಲಕ ಮತ್ತು ವಿದ್ಯಾರ್ಥಿವೇತನಗಳನ್ನು ನೀಡುವ ಮೂಲಕ ಟ್ರಸ್ಟ್ ಶಿಕ್ಷಣಕ್ಕೆ ಕೊಡುಗೆ ನೀಡಿದೆ. ಇದರ ಜೊತೆಗೆ, ಎಸ್‌ಎಲ್‌ವಿ ನಿರಂತರವಾಗಿ ಕ್ರೀಡೆಗಳನ್ನು, ವಿಶೇಷವಾಗಿ ಶೂಟಿಂಗ್ ಅನ್ನು ಪ್ರೋತ್ಸಾಹಿಸುತ್ತಿದೆ ಮತ್ತು ಕರ್ನಾಟಕ ಶೂಟಿಂಗ್ ಲೀಗ್ ಅನ್ನು ಪ್ರಾಯೋಜಿಸುವುದನ್ನು ಮುಂದುವರೆಸಿದೆ.

## ಮಹನೀಯರ ಆರಾಧನಾ ಮಹೋತ್ಸವ

• ಉದಯವಾಹಿನಿ ,ಬೆಂಗಳೂರು

ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಮಾರ್ಚ್ 5 ರಿಂದ 7ರವರೆಗೆ ಶ್ರೀ ಸುಧೀಂದ್ರತೀರ್ಥರ, ಶ್ರೀ ವಾದಿರಾಜರ ಮತ್ತು ಶ್ರೀ ವ್ಯಾಸರಾಜರ ಆರಾಧನಾ ಮಹೋತ್ಸವವನ್ನು ಪ್ರಕಾಶನಗರದ 10ನೇ ಮುಖ್ಯರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಹಮ್ಮಿಕೊಂಡಿದೆ.

**ಕಾರ್ಯಕ್ರಮಗಳು :** ಮಾರ್ಚ್ 5, ಗುರುವಾರ, ಶ್ರೀ ಸುಧೀಂದ್ರತೀರ್ಥರ ಮತ್ತು ಬಾಳಗಾರು ಶ್ರೀ ರಘುಮಾನ್ಯತೀರ್ಥರ ಆರಾಧನೆ : ಬೆಳಗ್ಗೆ 8 ರಿಂದ ಪಂಚಾಮೃತ ಅಭಿಷೇಕ, ಸುಮಧ್ವ ವಿಜಯ ಸಚ್ಛಾಸ್ತ್ರ ಪಾರಾಯಣ, ಶ್ರೀಕಾಂತ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಮ||ಶಾ||ಸಂ|| ಶ್ರೀ ಅಬ್ಬೂರು ಬದರಿ ಆಚಾರ್ಯರಿಂದ ಶ್ರೀ ಸುಧೀಂದ್ರತೀರ್ಥರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ತತ್ವಜ್ಞಾನಕ್ಕೆ ವಾಙ್ಮಯ ಕೊಡುಗೆ ವಿಷಯವಾಗಿ ಧಾರ್ಮಿಕ ಪ್ರವಚನ.

**ಮಾರ್ಚ್ 6, ಶುಕ್ರವಾರ :** ಶ್ರೀ ವಾದಿರಾಜರ ಆರಾಧನೆ : ಬೆಳಗ್ಗೆ 8 ರಿಂದ ಪಂಚಾಮೃತ ಅಭಿಷೇಕ, ಸುಮಧ್ವ ವಿಜಯ ಸಚ್ಛಾಸ್ತ್ರ ಪಾರಾಯಣ, ರುಕ್ಮಿಣಿ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಮ||ಶಾ||ಸಂ|| ಶ್ರೀ ಸಾಂಗ್ಲಿ ವಾಸುದೇವಾಚಾರ್ಯರಿಂದ


ಉದಯವಾಹಿನಿ ಚಿತ್ರ

ಶ್ರೀ ವಾದಿರಾಜರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ಶ್ರೀ ಮದಾಚಾರ್ಯರ ತತ್ವಜ್ಞಾನಕ್ಕೆ ಶ್ರೀ ವಾದಿರಾಜರ ಕೊಡುಗೆ ವಿಷಯವಾಗಿ ಧಾರ್ಮಿಕ ಪ್ರವಚನ.ಮಾರ್ಚ್ 7, ಶನಿವಾರ : ಶ್ರೀ ವ್ಯಾಸರಾಜರ ಆರಾಧನೆ : ಬೆಳಗ್ಗೆ 8 ರಿಂದ ಪಂಚಾಮೃತ ಅಭಿಷೇಕ, ಸುಮಧ್ವ ವಿಜಯ ಸಚ್ಛಾಸ್ತ್ರ ಪಾರಾಯಣ,

ಶ್ರೀ ಗುರುರಾಘವೇಂದ್ರ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಮ||ಶಾ||ಸಂ|| ಶ್ರೀ ಆತನೂರು ಭೀಮಸೇನಾಚಾರ್ಯರಿಂದ ಶ್ರೀ ವ್ಯಾಸರಾಜರ ಸಂಕ್ಷಿಪ್ತ ಜೀವನ ಚರಿತ್ರೆ ಮತ್ತು ವ್ಯಾಸತ್ರಯಗಳ ಪರಿಚಯ ವಿಷಯವಾಗಿ ಧಾರ್ಮಿಕ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿದೆ ಎಂದು

ಶ್ರೀಮಠದ ಪದಾಧಿಕಾರಿಗಳು ತಿಳಿಸಿದ್ದಾರೆ.

## ರಾಜ್ಯದಲ್ಲಿ ಮುಂದುವರೆದ ತಾಪಮಾನ ಏರಿಕೆ


• ಉದಯವಾಹಿನಿ ,ಬೆಂಗಳೂರು

ರಾಜ್ಯದಲ್ಲಿ ತಾಪಮಾನ ಏರಿಕೆಯ ಪ್ರಮಾಣ ದಿನೇ ದಿನೇ ಅಧಿಕವಾಗುತ್ತಿದೆ. ಉತ್ತರ ಒಳನಾಡಿನ ಹಲವು ಜಿಲ್ಲೆಗಳಲ್ಲಿ ತಾಪಮಾನದಲ್ಲಿ ಏರಿಕೆ ಕಂಡುಬಂದಿದ್ದು, ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬಂದಿದೆ. ರಾಜ್ಯದಲ್ಲಿ ಗರಿಷ್ಠ ತಾಪಮಾನ 34ಲಿಅವರೆಗೂ ಹಾಗೂ ಕನಿಷ್ಠ ತಾಪಮಾನ 22ಲಿಅ ದಾಖಲಾಗಬಹುದು ಎಂದು ರಾಜ್ಯ ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದ್ದು, ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಅಲ್ಪ ಮಳೆಯಾಗುವ ಸಾಧ್ಯತೆಯಿದೆ. ಕಲಬುರಗಿ, ವಿಜಯಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಬಿಸಿಲಿನ ಬೇಗೆ ಹೆಚ್ಚಿರಲಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಭಾಗದಲ್ಲಿ ಸೆಕೆಯ ಅನುಭವ ಹೆಚ್ಚಿರಲಿದೆ. ಬೆಳಗಾವಿಯಲ್ಲಿ ಬೆಳಗ್ಗೆ ಮತ್ತು ರಾತ್ರಿ ತಂಪು ಹವೆ ಇರಲಿದ್ದು, ಮಧ್ಯಾಹ್ನ ಕೊಂಚ ತಾಪಮಾನ ಏರಿಕೆಯಾಗಲಿದೆ.

ಕಲಬುರಗಿಯಲ್ಲಿ ಬಿಸಿ ಗಾಳಿಯ ಎಚ್ಚರಿಕೆ ನೀಡಲಾಗಿದೆ. ಹಾಗೂ ಚಿಕ್ಕಮಗಳೂರು, ಕೊಡಗು ಭಾಗದಲ್ಲಿ ಇತರೆ ಜಿಲ್ಲೆಗಳಿಗಿಂತ ಕೊಂಚ ತಂಪಾದ ವಾತಾವರಣವಿರಲಿದೆ.

**ಮುಂದಿನ ಒಂದು ವಾರದ ನಿರೀಕ್ಷಿತ ಹವಾಮಾನ:** ಹವಾಮಾನ ಇಲಾಖೆ ಈಗಾಗಲೇ ನೀಡಿರುವ ಮುನ್ಸೂಚನೆಯಂತೆ ಮುಂದಿನ 7 ದಿನಗಳ ಕಾಲ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಉಷ್ಣಾಂಶವು ಸರಾಸರಿಗಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ. ದಕ್ಷಿಣ ಒಳನಾಡು ಪ್ರದೇಶದಲ್ಲಿ ಹವಾಮಾನವು ಶುಷ್ಕವಾಗಿರಲಿದ್ದು, ಮಧ್ಯಾಹ್ನದ ವೇಳೆ ತೀವ್ರ ಬಿಸಿಲಿರಲಿದೆ. ಉತ್ತರ ಒಳನಾಡಿನ ಕಲಬುರಗಿ, ರಾಯಚೂರುಗಳಲ್ಲಿ ಉಷ್ಣಾಂಶವು 38 ಡಿಗ್ರಿ ಸೆಲ್ಸಿಯಸ್


ಉದಯವಾಹಿನಿ ಚಿತ್ರ

ದಾಟುವ ಸಾಧ್ಯತೆ ಇದೆ. ಬಿಸಿ ಗಾಳಿಯ ಬಗ್ಗೆ ಎಚ್ಚರಿಕೆ ನೀಡಲಾಗಿದೆ. ಮಂಗಳೂರು, ಉಡುಪಿಗಳಲ್ಲಿ ಆರ್ದ್ರತೆ ಹೆಚ್ಚಿರಲಿದೆ.

**ಈ ಅವಧಿಯಲ್ಲಿ ಉಷ್ಣಾಂಶ ಏರುವ ಸಾಧ್ಯತೆ:** ಈ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಉಷ್ಣಾಂಶವು 34 ಡಿಗ್ರಿ ಸೆಲ್ಸಿಯಸ್‌ನಿಂದ 38.9 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುವ ಸಾಧ್ಯತೆಯಿದೆ.

ಇದು ಸಾಮಾನ್ಯ ತಾಪಮಾನಕ್ಕಿಂತ ಸುಮಾರು 3 ರಿಂದ 4 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿರಲಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ಈ ಮೊದಲು ಕಾರವಾರ ಜಿಲ್ಲಾಧಿಕಾರಿ ಎಚ್ಚರಿಸಿದ್ದರು. ಹೆಚ್ಚಿದ ಬಿಸಿಲಿನಿಂದಾಗಿ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು, ತಲೆಸುತ್ತು, ದೌರ್ಬಲ್ಯ, ಅತಿಯಾದ ಆಯಾಸ, ತಲೆನೋವು ಮತ್ತು ಚರ್ಮದ ಒಣಗುವಿಕೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ತೀವ್ರ ಪ್ರಕರಣಗಳಲ್ಲಿ ಉಷ್ಣಾಘಾತ ಸಂಭವಿಸುವ ಸಾಧ್ಯತೆಯೂ ಇರುವುದರಿಂದ ಜಾಗರೂಕರಾಗಿರಬೇಕು.

# ಡಿಕೆಶಿ ಕಡೆಯವರ ಸಭೆಗಳ ಮೇಲೆ ನಿಗಾ ಇಡಲು ಸಿಎಂ ಒಬ್ಬ ಎಸ್‌ಪಿ ನೇಮಿಸಿದ್ದಾರೆ: ಆರ್.ಅಶೋಕ್

• ಉದಯವಾಹಿನಿ,ಬೆಂಗಳೂರು

ಡಿ.ಕೆ. ಶಿವಕುಮಾರ್ ಕಡೆಯವರ ಸಭೆಗಳ ಮೇಲೆ ನಿಗಾ ಇಡಲು ಸಿಎಂ ಸಿದ್ದರಾಮಯ್ಯ ಒಬ್ಬ ಎಸ್‌ಪಿ ನೇಮಕ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಡಿಕೆಶಿ ಬಣದ ಶಾಸಕರ ಮೇಲೆ ಗುಪ್ತಚರ ನಿಗಾ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಇದು ಆದೇಶ ಇಲ್ಲದ ಎಸ್‌ಐಟಿ ಮಾಡಿರುವ ಹಾಗೆಯೇ ಇದೆ. ಇದೊಂದು ರೀತಿ ಕಣ್ಣಿಗೆ ಕಾಣದ ಎಸ್‌ಐಟಿ.

ಡಿಕೆಶಿ ಕಡೆಯವರು ಎಲ್ಲಿ ಹೋಗುತ್ತಾರೆ, ಏನೇನು ಮಾಡುತ್ತಾರೆ ಅಂತ ಪತ್ತೆ ಮಾಡುವುದೇ ಈ ಕಣ್ಣಿಗೆ ಕಾಣದ ಎಸ್‌ಐಟಿ ಕೆಲಸ ಎಂದು ಹೇಳಿದರು. ಕಾಂಗ್ರೆಸ್ ಒಡೆದ ಮನೆಯಾಗಿದೆ. ಕಾಂಗ್ರೆಸ್‌ನವರು ಕಾಂಗ್ರೆಸ್‌ನವರಿಗೇ ಬೀದಿಗಿಳಿದು ಧಮ್ಕಿ ಹಾಕುತ್ತಿದ್ದಾರೆ. ಈ ಸರ್ಕಾರ ಬಹಳ ದಿನ ಉಳಿಯಲ್ಲ. ಸಿಎಂ, ಡಿಸಿಎಂ ಬೆಂಬಲಿಗರು ಬೀದಿಗಿಳಿದು ಕಚ್ಚಾಡುತ್ತಿದ್ದಾರೆ. ಆಡಳಿತ ಕುಸಿದಿದೆ, ಇದೆಲ್ಲ ನಾವು ಬಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ. ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳುತ್ತಿದ್ದಾರೆ. ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆಗಳಾಗುತ್ತಿವೆ. ಅಭಿವೃದ್ಧಿ ಶೂನ್ಯ, ಕಸದ ಸಮಸ್ಯೆ, ಇ-ಖಾತಾ, ನೋಂದಣಿ ಸ್ಥಗಿತ, ಆದಾಯ ಕುಸಿತ ಎಲ್ಲವನ್ನೂ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ ಎಂದರು. ಶ್ರೀಮಂತರು ಗ್ಯಾರಂಟಿ ಯೋಜನೆ ಬಿಡಬೇಕೆಂಬ ಸಚಿವ ಎಂ.ಬಿ. ಪಾಟೀಲ್ ಹೇಳಿಕೆಗೆ ಪ್ರತಿಕ್ರಿಯಿಸಿ, ಎಲ್ಲರಿಗೂ ಗ್ಯಾರಂಟಿ ಕೊಡುತ್ತೇವೆ ಅಂದಿದ್ದರು. ಈಗ ಶ್ರೀಮಂತರು ಬಿಟ್ಟುಕೊಡಬೇಕು ಅಂತಿದ್ದಾರೆ. ಅಂದರೆ ಜನತೆಗೆ ಕೊಟ್ಟ ಮಾತು ತಪ್ಪುತ್ತಿದ್ದಾರೆ. ಸರ್ಕಾರದ ಖಜಾನೆ ಖಾಲಿ ಆಗಿದೆ.

ಅದಕ್ಕಾಗಿ ಶ್ರೀಮಂತರು ತೆಗೆದುಕೊಳ್ಳಬೇಡಿ ಅಂತಿದ್ದಾರೆ. ಕಾಕಾಪಾಟೀಲ್, ಮಹದೇವಪ್ಪ ಎಲ್ಲರಿಗೂ ಫ್ರೀ ಅಂತ ಯಾಕೆ ಹೇಳಬೇಕಿತ್ತು. ಎಲ್ಲರಿಗೂ ಫ್ರೀ ಅಂತ ಹೇಳಿ ಈಗ ಕಟ್ ಮಾಡುತ್ತಿದ್ದಾರೆ. ಆಗ ಆ ರೀತಿ ಹೇಳುವಾಗ ಇವರಿಗೆ ಜ್ಞಾನ ಇರಲಿಲ್ವಾ ಎಂದು ಟೀಕಿಸಿದರು. ಮಧ್ಯಪ್ರಾಚ್ಯ ದೇಶಗಳಲ್ಲಿ ಕನ್ನಡಿಗರು ಸಿಲುಕಿರುವ ವಿಚಾರವಾವಾಗಿ ಮಾತನಾಡಿ, ಯುದ್ಧ ನಿಲ್ಲಬೇಕು ಎಂಬುದು ಭಾರತದ ನಿಲುವು. ಯುದ್ಧ ಪರಿಹಾರ ಅಲ್ಲ ಅಂತ ಪ್ರಧಾನಿ ಮೋದಿ ಹೇಳಿದ್ದಾರೆ. ಭಾರತೀಯರು ಆ ದೇಶಗಳಲ್ಲಿ ಸಿಲುಕಿದ್ದಾರೆ. ಪ್ರಧಾನಿಯವರು ಆ ದೇಶಗಳ ಜೊತೆ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಕನ್ನಡಿಗರು ಹಲವರು ಸಿಲುಕಿದ್ದಾರೆ. ಮೋದಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ಆಗಿದೆ.

ಎಲ್ಲರನ್ನೂ ಸುರಕ್ಷಿತವಾಗಿ ವಾಪಸ್ ಕರೆತರುವ ಕೆಲಸ ಆಗಲಿದೆ. ರಾಜ್ಯದ ಜನರ ಬಗ್ಗೆ ಗೌರವ ಇದೆ. ನಾವು ಕೂಡ ಕೇಂದ್ರದ ಮೇಲೆ ಒತ್ತಡ ಹಾಕಿದ್ದೇವೆ. ಕೇಂದ್ರ

### ಪ್ರತಿಭಟನೆ ಸರಿಯಲ್ಲ



**ಖಮೇನಿ ಸಾವು ಖಂಡಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆದ ವಿಚಾರವಾಗಿ ಪ್ರತಿಕ್ರಿಯಿಸಿ, ಖಮೇನಿ ಸಾವು ಖಂಡಿಸಿ ಪ್ರತಿಭಟನೆ ಮಾಡಿದ್ದು ಸರಿಯಲ್ಲ. ಪ್ರತಿಭಟನೆ ಮಾಡಬಾರದಿತ್ತು. ಕಾನೂನು ಕೈಗೆ ತಗೊಂಡು ಶಿಯಾ ಗುಂಪಿನವರು ಪ್ರತಿಭಟನೆ ಮಾಡಿದ್ದಾರೆ. ಅವರ ಮೇಲೆ ಕ್ರಮ ಆಗಬೇಕು. ಖಮೇನಿ ಒಬ್ಬ ಸರ್ವಾಧಿಕಾರಿ, ಇವರೂ ಪ್ರತಿಭಟನೆ ಮೂಲಕ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಿದ್ದಾರೆ. ಸಿದ್ದರಾಮಯ್ಯ ಸಹ ಖಮೇನಿ ಸಾವನ್ನು ಖಂಡಿಸಿದ್ದಾರೆ, ಅದು ಕಾಂಗ್ರೆಸ್ ಮನಸ್ಥಿತಿ. ಭಾರತ ಯಾರಿಗೂ ವಿರೋಧಿಯಲ್ಲ, ಇಸ್ರೇಲ್‌ಗೂ ವಿರೋಧ ಇಲ್ಲ, ಇರಾನ್‌ಗೂ ವಿರೋಧ ಇಲ್ಲ. ಭಾರತ-ಇರಾನ್ ಮಧ್ಯೆ ವ್ಯವಹಾರಿಕ ಸಂಬಂಧ ಚೆನ್ನಾಗಿಯೇ ಇದೆ ಎಂದು ಅಶೋಕ್ ತಿಳಿಸಿದರು.**

ಖಮೇನಿ ಸಾವು ಖಂಡಿಸಿ

## ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡುವಂತೆ ಒತ್ತಾಯಿಸಿ ಮಾ. 16 ರಂದು ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ತಲತಲಾಂತರದಿಂದಲೂ ಹಿಂದುಳಿದಿರುವ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಮಾ. 16 ರಂದು ನಗರದ ಫ್ರೀಡಂ ಪಾರ್ಕ್ ನಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಮತ್ತು ಉತ್ತರ ಕರ್ನಾಟಕ ಮಡಿವಾಳ ಕ್ಷೇಮಾಭಿವೃದ್ಧಿ ಸಂಘ ಎಚ್ಚರಿಕೆ ನೀಡಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಎಂ.ಕೆ. ಹನುಮಂತಪ್ಪ, ದೇಶದ 17 ರಾಜ್ಯಗಳು, 4 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಡಿವಾಳ ಸಮಾಜ ಪರಿಶಿಷ್ಟ ಜಾತಿ ಪಟ್ಟಿಯಲ್ಲಿದೆ. ಮಡಿವಾಳ ಸಮಾಜದ ಹಲವು ದಶಕಗಳ ಹೋರಾಟಕ್ಕೆ 2009 ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಡಿವಾಳ ಸಮಾಜದ ಕುಲಶಾಸ್ತ್ರ ಅಧ್ಯಯನ ಮಾಡಲು ಪ್ರೊ. ಡಾ|| ಅನ್ನಪೂರ್ಣ ಅವರನ ಸಮಿತಿಯನ್ನು ನೇಮಕ ಮಾಡಿದರು. ಅದರಂತೆ ಅವರು ರಾಜ್ಯಾದ್ಯಂತ ಪ್ರವಾಸ ಮಾಡಿ 2011ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಆದರೆ ವರದಿ ಅನುಷ್ಠಾನವಾಗಿಲ್ಲ ಎಂದರು.

ಕಳೆದ 2011 ರಿಂದ ಪ್ರತಿ ವರ್ಷವು ಸತತವಾಗಿ ಎಲ್ಲಾ ಸರ್ಕಾರಗಳಿಗೂ ನಮ್ಮನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಿಕೊಂಡು ಬರುತ್ತಿದ್ದೇವೆ. 2022ರಲ್ಲಿ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಸುವ ಸಲುವಾಗಿ ಕಡತವನ್ನು ಸಚಿವ ಸಂಪುಟಕ್ಕೆ ಮಂಡಿಸಲು ಸಜ್ಜಾಗಿದ್ದರು. ಆದರೆ ಆಗ ಮುಖ್ಯಮಂತ್ರಿಗಳ ಅನುಮೋದನೆ ಮಾತ್ರ ಬಾಕಿ ಇತ್ತು. ಆದರೆ ಈ ಕನಸು ಕೈಗೂಡದೇ ಮತ್ತೆ ಮಡಿವಾಳ ಸಮಾಜಕ್ಕೆ ಅನ್ಯಾಯವಾಯಿತು ಎಂದರು.2025ರಲ್ಲಿ


ಉದಯವಾಹಿನಿ ಚಿತ್ರ

ಸಮಾಜದ ಜಗದ್ಗುರು ಡಾ. ಬಸವಮಾಚಿದೇವ ಸ್ವಾಮಿಜಿ ಹಾಗೂ ಮುಕ್ತಾನಂದ ಸ್ವಾಮಿಜಿ ನೇತೃತ್ವದಲ್ಲಿ ಉ.ಕ.ಮಡಿವಾಳರ ಸಂಘದ ಸಹಭಾಗಿತ್ವದಲ್ಲಿ 19 ಮಂತ್ರಿಗಳು 137 ಶಾಸಕರುಗಳಿಂದ ಸರ್ಕಾರಕ್ಕೆ ಶಿಫಾರಸ್ಸು ಪತ್ರಗಳನ್ನು ಸಂಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದೇವೆ. ಆದ್ದರಿಂದ ಈ ಮುಂಬರುವ ಅದಿವೇಶನದಲ್ಲಿ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಒತ್ತಾಯಿಸಿ ಮಾ. 16ರಂದು ಬೆಳಿಗ್ಗೆ 8ರಿಂದ ಫ್ರೀಡಂ ಪಾರ್ಕ್‌ಲ್ಲಿ ಉತ್ತರ ಕರ್ನಾಟಕ ಮಡಿವಾಳರ ಸಂಘದ ಸಹಭಾಗಿತ್ವದಲ್ಲಿ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾ, ತಾಲ್ಲೂಕು, ಹೋಬಳಿ ಭಾಗದಿಂದ ಹೆಚ್ಚಿನ ಮಡಿವಾಳರು ಆಗಮಿಸಿ ಹೋರಾಟದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಕೆ. ಮಲ್ಲೇಶ್, ಉಪಾಧ್ಯಕ್ಷರಾದ ಬಿ. ಬಸವಶೆಟ್ಟಿ, ಕೆ.ಸಿ. ರವೀಂದ್ರ, ಹಿರಣ್ಯಪ್ಪ ಕುಂಬ್ರಿ, ಟಿ. ಕುಮಾರ ಸ್ವಾಮಿ, ಖಜಾಂಚಿ ಎಸ್. ಧನರಾಜ್, ಜಿಲ್ಲಾಧ್ಯಕ್ಷ ಎನ್. ಚಂದ್ರಶೇಖರ್ ಮತ್ತಿರರರು ಉಪಸ್ಥಿತರಿದ್ದರು.

# ಮಾಗಡಿ: ಸರ್ಕಾರಿ ಶಾಲೆಗಳ ಬಲವರ್ಧನೆಗೆ ಸಲಹೆ

• ಉದಯವಾಹಿನಿ, ಮಾಗಡಿ

ಪೋಷಕರು ತಮ್ಮ ಮಕ್ಕಳಿಗೆ ಹಣ-ಆಸ್ತಿ ಮಾಡುವ ಬದಲು ಅವರಿಗೆ ಗುಣಮಟ್ಟದ ಶಿಕ್ಷಣ ನೀಡಿ ಮಕ್ಕಳನ್ನೇ ಸಮಾಜದ ಆಸ್ತಿಯನ್ನಾಗಿ ರೂಪಿಸುವುದು ಇಂದಿನ ಅಗತ್ಯ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು. ತಾಲ್ಲೂಕಿನ ಕರಲಮಂಗಲ ಗ್ರಾಮದಲ್ಲಿ ಯೂತ್ ಫಾರ್ ಪರಿವರ್ತನ್‌ಮತ್ತು ಅಕ್ಸೆಲ್‌ಆಲ್ಫಾ ಕಂಪನಿ ಸಹಯೋಗದೊಂದಿಗೆ ನವೀಕರಿಸಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಮೂಲ ಸೌಕರ್ಯ ಕೊರತೆ ನಿವಾರಿಸುವುದು ಸರ್ಕಾರದ ಮತ್ತು ಸಮಾಜದ ಜವಾಬ್ದಾರಿ. ಯಾವುದೇ ಲಾಭದ ಅಪೇಕ್ಷೆಯಿಲ್ಲದೆ 6 ಲಕ್ಷ ಸಂಗ್ರಹಿಸಿ ಶಾಲೆ ನವೀಕರಿಸಿರುವ ಯೂತ್ ಫಾರ್ ಪರಿವರ್ತನ್ ತಂಡದ ಕಾರ್ಯ ಶ್ಲಾಘನೀಯ. ಶೌಚಾಲಯಗಳ ಸ್ವಚ್ಛತೆ ಆಸ್ಪತ್ರೆ ಆಪರೇಷನ್ ಥಿಯೇಟರ್‌ನಷ್ಟೇ ಮುಖ್ಯ ಎಂದು ಪ್ರತಿಪಾದಿಸಿದರು. ರಾಜ್ಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ಥಿತಿಗತಿ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಸುಮಾರು 79 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ವಿವಿಧ ಇಲಾಖೆಗಳಲ್ಲಿ ಒಟ್ಟು 2.85ಲಕ್ಷ ಸರ್ಕಾರಿ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಸರ್ಕಾರ ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಿ ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಎಂದು ಒತ್ತಾಯಿಸಿದರು.

ತಮ್ಮ ವೈಯಕ್ತಿಕ ಅನುಭವ ಹಂಚಿಕೊಂಡ ಅವರು, ನಾನು ಏಳನೇ ತರಗತಿವರೆಗೆ ಓದಿದ್ದು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಯಲ್ಲಿ. ಇವತ್ತು ದೊಡ್ಡ ಮಟ್ಟದ ವಿಜ್ಞಾನಿಗಳು, ವೈದ್ಯರು ಮತ್ತು ಅಧಿಕಾರಿಗಳು ಸರ್ಕಾರಿ ಶಾಲೆಗಳಿಂದಲೇ ಬಂದಿದ್ದಾರೆ. ಕನ್ನಡದ ಜೊತೆಗೆ ಇಂಗ್ಲಿಷ್ ಕಲಿಯುವುದು ತಪ್ಪಲ್ಲ. ಆದರೆ, ಇಂಗ್ಲಿಷ್ ಮಾತನಾಡಿದವರು ಮಾತ್ರ ಬುದ್ಧಿವಂತರು ಎಂಬ ಭ್ರಮೆ ಬೇಡ' ಎಂದರು.

ಮಹಿಳೆಯರ ಆರೋಗ್ಯ ರಕ್ಷಣೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿಗೆ ತಂದಿರುವ ಎಚ್‌ಪಿವಿ ಲಸಿಕೆ ಯೋಜನೆಯನ್ನು ಐತಿಹಾಸಿಕ ಹೆಜ್ಜೆ ಎಂದು ಬಣ್ಣಿಸಿದರು. ಜಯದೇವ ಆಸ್ಪತ್ರೆ ಮಾದರಿಯಲ್ಲೇ ಸರ್ಕಾರಿ ಸೇವೆಗಳು ಬಲಗೊಂಡರೆ ಖಾಸಗಿ ಕ್ಷೇತ್ರದ ದುಬಾರಿ ವೆಚ್ಚ ನಿಯಂತ್ರಿಸಬಹುದು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಇತಿಹಾಸಕಾರ ಧರ್ಮೇಂದ್ರ, ಕುಮಾರ್ ಅರೇನಹಳ್ಳಿ, ಮಸಾಲಾ ಚಾಯಿ ಮೀಡಿಯಾದ ಶಿವಪ್ರಕಾಶ್, ಯೂತ್ ಫಾರ್ ಪರಿವರ್ತನ್ ಸಂಸ್ಥಾಪಕ ಅಮಿತ್, ಶಾಲಾ ಮುಖ್ಯ ಶಿಕ್ಷಕರು ಹಾಗೂ ಸ್ಥಳೀಯ ಮುಖಂಡರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

# ಕೆಂಪೇಗೌಡರ ಕಾಲದ ಕೆರೆಗಳಿಗೆ ಜೀವಸೆಲೆ

## ವೈಜಿಗುಡ್ಡ ಜಲಾಶಯ ಮೂಲಕ ಕೆರೆಗಳಿಗೆ ನೀರು

**ಈ ಯೋಜನೆ ಅನುಷ್ಠಾನವಾದರೆ ರೈತರಿಗೆ ವರದಾನವಾಗಲಿದೆ.ಅಂತರ್ಜಲ ವೃದ್ಧಿ, ಹೈನುಗಾರಿಕೆ ಮತ್ತು ಕೃಷಿ ಚಟುವಟಿಕೆಗಳಿಗೆ ಪೂರಕವಾಗಲಿದೆ. ಮಳೆಯನ್ನೇ ಆಧರಿಸಿ ಹೆಚ್ಚಿನ ರೈತರು ರಾಗಿ ಬೆಳೆಯನ್ನೇ ನಂಬಿಕೊಂಡಿದ್ದು, ಕೆರೆಗಳಿಗೆ ನೀರು ಬಂದರೆ ರಾಗಿ ಜೊತೆಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಪ್ರಸ್ತುತ ರೈತರು ವರ್ಷಕ್ಕೆ ಒಂದು ಬೆಳೆಯನ್ನು ಮಾತ್ರ ಬೆಳೆಯಲು ಅವಕಾಶವಿದೆ. ಕೆರೆಗಳಿಗೆ ನೀರು ಬಂದರೆ ವರ್ಷಕ್ಕೆ ಮೂರು ಬೆಳೆ ಬೆಳೆಯುವ ನಿರೀಕ್ಷೆ ಮಾಡಬಹುದು. ಇದರಿಂದ ಕೃಷಿಯಲ್ಲಿ ಆದಾಯದ ಜೊತೆಗೆ ರೈತರಿಗೆ ವರ್ಷವಿಡೀ ಕೆಲಸ ಸಿಗುವಂತಾಗಲಿದೆ. ರೈತರ ಪಾಲಿಗೆ ಈ ಯೋಜನೆ ವರದಾನವಾಗಲಿದೆ.**

ರೈತರಿಗೆ ಅನುಕೂಲ ಕೃಷಿ ಚಟುವಟಿಕೆಗೆ ಉತ್ತೇಜನ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಮಾಗಡಿ

ಕೆರೆಗಳಿಗೆ ಮತ್ತೆ ಜೀವಜಲ

ನಾಡಪ್ರಭು ಕೆಂಪೇಗೌಡ ಕಾಲದ ಕೆರೆಗಳಿಗೆ ಈಗ ಮತ್ತೆ ಜೀವಜಲ ಹರಿದು ಬರಲಿದೆ. ಹಲವು ದಶಕಗಳಿಂದ ನೀರು ಕಾಣದೆ ಬತ್ತಿದ್ದ ಕೆರೆಗಳಿಗೆ ವೈಜಿ ಗುಡ್ಡ ಜಲಾಶಯದಿಂದ ಪೈಪ್‌ಲೈನ್ ಮೂಲಕ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡುತ್ತಿದ್ದು, ಇದರಿಂದ ರೈತರ ಮೊಗದಲ್ಲಿ ಸಂತಸ ಮೂಡುವಂತಾಗಿದೆ. ಈ ಯೋಜನೆ ಪೂರ್ಣಗೊಂಡರೆ ಕೃಷಿ ಚಟುವಟಿಕೆಗಳಿಗೆ ಹೊಸ ಸುಗ್ಗಿ ಕಾಲ ಆರಂಭವಾಗಲಿದೆ.

ವೈಜಿಗುಡ್ಡ ಜಲಾಶಯದ ಮೂಲಕ ಹಲವು ಕೆರೆಗಳಿಗೆ ಪೈಪ್‌ಲೈನ್ ಮೂಲಕ ನೀರು ತುಂಬಿಸುವ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡುತ್ತಿದ್ದು, 92 ಕೋಟಿ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ. ಕೆರೆಗಳಿಗೆ ನೀರು ತುಂಬಿಸುವ ಮೂಲಕ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಹೆಚ್ಚು ಅನುಕೂಲವಾಗುವ ನಿಟ್ಟಿನಲ್ಲಿ ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಈ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಹಲವು ವರ್ಷಗಳಿಂದ ನೀರು ಕಾಣದ ಕೆರೆಗಳಿಗೆ ಈಗ ನೀರು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಈ ಹೊಸ ಪ್ರಯತ್ನ ನಡೆದಿದೆ. ಇದಕ್ಕೆ ರೈತರು ಸ್ವಾಗತ ಕೋರಿದ್ದಾರೆ. ಎರಡು ವರ್ಷಗಳಲ್ಲಿ ಈ ಭಾಗದ ಕೆರೆಗಳಿಗೆ ನೀರು ತುಂಬಿ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗುವ ಕಾಲ ಸಮೀಪದಲ್ಲಿದೆ. ವೈಜಿಗುಡ್ಡ ಜಲಾಶಯದ ಅಕ್ಕಪಕ್ಕದ ಕೆರೆಗಳಿಗೆ ಈಗ ಜೀವಜಲ ಬರಲಿದೆ. ಯೋಜನೆ ಪೂರ್ಣವಾದರೆ ಮತ್ತೆ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ತೋಟಗಾರಿಕೆ, ತರಕಾರಿ, ರೇಷ್ಮೆ, ಹೈನುಗಾರಿಕೆಯಲ್ಲಿ ತೊಡಗಿಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿದೆ.

**92 ಕೋಟಿ ವೆಚ್ಚದ ನೀರಾವರಿ ಯೋಜನೆ:** ವೈಜಿಗುಡ್ಡ ಜಲಾಶಯದಿಂದ 18 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 92 ಕೋಟಿ ವೆಚ್ಚದಲ್ಲಿ ಕಾಮಗಾರಿ ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಪೈಪ್‌ಲೈನ್ ಮೂಲಕ ಆಯ್ದ ಕೆರೆಗಳನ್ನು ತುಂಬಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಾಗಿದೆ.

ಮಹತ್ವಾಕಾಂಕ್ಷಿ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ

### ಯೋಜನೆಯ ಕಾಲಮಿತಿ

**ಯೋಜನೆಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನೀಡಲಾಗಿದೆ. ಪೈಪ್‌ಲೈನ್ ಮೂಲಕ ಕೆರೆಗಳಿಗೆ ನೀರು ತುಂಬಿಸಲಾಗುತ್ತದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆಯ ಮಾದರಿಯಲ್ಲೇ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ತಿಳಿದು ಬಂದಿದೆ.**

### ಒಳಗೊಂಡ ಕೆರೆಗಳು

**ಚಕ್ರಭಾವಿ, ಸೀಗೆಕುಪ್ಪೆ, ಹುಲಿಕಟ್ಟೆ, ಅಗಲಕೋಟೆ, ಮಠದಪಾಳ್ಯ, ಮತ್ತಿಕೆರೆ, ಗಟ್ಟಿಪುರ, ಬೆಳಗವಾಡಿ, ಗೆಜ್ಜಿಗಾರಕುಪ್ಪೆ, ಕೊಟ್ಟಗಾರಹಳ್ಳಿ, ನೇರಲವಾಡಿ, ಮತ್ತು ಸಾದಮಾರನಹಳ್ಳಿ ಸಮೀಪದ ಶ್ರೀರಂಗ ಆಣೆಕಟ್ಟು ಸೇರಿದಂತೆ ಹಲವು ಕೆರೆಗಳನ್ನು ಈ ಯೋಜನೆಯಡಿ ತುಂಬಿಸಲಾಗುತ್ತದೆ.**

**ಈ ಯೋಜನೆಯು ಮಾಗಡಿ ತಾಲ್ಲೂಕು ಸೇರಿ ರಾಮನಗರ ಮತ್ತು ಕುಣಿಗಲ್ ತಾಲ್ಲೂಕಿನ ಕೆಲ ಕೆರೆ ಭಾಗಗಳನ್ನು ಒಳಗೊಂಡಿದೆ. ಮೂರು ತಾಲ್ಲೂಕಿನ ರೈತರಿಗೂ ಅನುಕೂಲವಾಗಲಿದೆ.**

# ರಾಜ್ಯ ಬಜೆಟ್‌ನಲ್ಲಿ

## ಈ ಬಾರಿಯಾದರೂ ಸಿಗುವುದೇ 'ಸಿಹಿ'

• ಉದಯವಾಹಿನಿ,ಚಾಮರಾಜನಗರ

ಮಾರ್ಚ್ 6ರಂದು ಮಂಡನೆಯಾಗಲಿರುವ ರಾಜ್ಯ ಬಜೆಟ್ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಜಿಲ್ಲೆಗೆ ಈ ಬಾರಿಯ ಬಜೆಟ್‌ನಲ್ಲಾದರೂ ಭರ್ಜರಿ ಕೊಡುಗೆಗಳು ಸಿಗಬಹುದೇ ಎಂಬ ನಿರೀಕ್ಷೆಗಳು ಗರಿಗೆದರಿವೆ. ಪ್ರೊ.ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿರುವ ಚಾಮರಾಜನಗರ ನಿರ್ಲಕ್ಷ್ಯಕ್ಕೆ ತುತ್ತಾಗಿದ್ದು ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿದೆ. ನಗರ, ಪಟ್ಟಣ, ಗ್ರಾಮಾಂತರ ಭಾಗಗಳಲ್ಲಿ ಇಂದಿಗೂ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಒಳ ಚರಂಡಿ ಹದಗೆಟ್ಟಿದೆ. ಉತ್ತಮ ಶಿಕ್ಷಣ ಹಾಗೂ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಪಡೆಯಲು ನೆರೆಯ ಜಿಲ್ಲೆಗಳ ಮೇಲಿನ ಅವಲಂಬನೆ ತಪ್ಪಿಲ್ಲ.

ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು ತೆವಳುತ್ತಾ ಸಾಗುತ್ತಿವೆ. ನೆಲದ ಮೂಲನಿವಾಸಿಗಳಾದ ಬುಡಕಟ್ಟು ಸಮುದಾಯಗಳ ದಶಕಗಳ ಬೇಡಿಕೆಗಳು ಈಡೇರಿಲ್ಲ.

ಪ್ರತಿವರ್ಷ ಬಜೆಟ್‌ನಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಭರಪೂರ ಯೋಜನೆ, ಅನುದಾನ ಸಿಗಬಹುದು ಎಂಬ ನಿರೀಕ್ಷೆಗಳು ಗರಿಗೆದರುತ್ತಿದ್ದು ಈ ಬಾರಿಯೂ ಮುಂದುವರಿದಿದೆ.

ಹನೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು ಹಾಗೂ ಚಾಮರಾಜಗರ ತಾಲ್ಲೂಕು ವ್ಯಾಪ್ತಿಯ ಕಾಂಡಂಚಿನಲ್ಲಿ 148 ಪೋಡುಗಳಿದ್ದು 7,500 ಆದಿವಾಸಿಗಳು ಕುಟುಂಬಗಳು ನೆಲೆಸಿವೆ. 40,000ಕ್ಕೂ ಹೆಚ್ಚು ಸೋಲಿಗರು, ಬೆಟ್ಟ ಕುರುಬ, ಜೇನು ಕುರುಬ ಸಮುದಾಯಗಳು ಜಿಲ್ಲೆಯಲ್ಲಿ ವಾಸವಾಗಿದ್ದು ಕೆಲವು ಹಾಡಿಗಳಿಗೆ ಇಂದಿಗೂ ಕುಡಿಯುವ ನೀರು, ವಿದ್ಯುತ್, ರಸ್ತೆ, ಆರೋಗ್ಯ, ಶಿಕ್ಷಣದಂತಹ ಕನಿಷ್ಠ ಮೂಲಸೌಕರ್ಯಗಳು ಇಲ್ಲ. ಬಜೆಟ್‌ನಲ್ಲಿ ಹಾಡಿಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸುತ್ತಾರೆ ಆದಿವಾಸಿ ಸಮುದಾಯದ ಮುಖಂಡರಾದ ಕೇತಮ್ಮ. ಹಾಡಿಗಳಿಂದ ಮುಖ್ಯರಸ್ತೆಗಳಿಗೆ ತಲುಪಲು ಸಂಪರ್ಕ ರಸ್ತೆಗಳು ಇಲ್ಲ. ಆರೋಗ್ಯ ಹದಗೆಟ್ಟರೆ ಡೋಲಿಯಲ್ಲಿ ಹತ್ತಾರು ಕಿ.ಮೀ ದೂರ ರೋಗಿಯನ್ನು ಹೊತ್ತೊಯ್ದು ಚಿಕಿತ್ಸೆ ಕೊಡಿಸಬೇಕಾಗಿದೆ.

# ಮನೆಗೊಂದು ಗ್ರಂಥಾಲಯಕ್ಕೆ ಪುಸ್ತಕ ಪ್ರಾಧಿಕಾರದಿಂದ ಚಾಲನೆ

• ಉದಯವಾಹಿನಿ,ರಾಮನಗರ

ಪುಸ್ತಕ ಪ್ರಾಧಿಕಾರ ಕನ್ನಡ ಓದುಗರನ್ನು ಹೆಚ್ಚಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ಅವುಗಳಲ್ಲಿ ಮನೆಗೊಂದು ಗ್ರಂಥಾಲಯ ಉತ್ತಮ ಕಾರ್ಯಕ್ರಮವಾಗಿದೆ ಎಂದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.

ನಗರ ಸಭೆ ಅಧ್ಯಕ್ಷ ಕೆ.ಶೇಷಾದ್ರಿ ಅವರ ನಿವಾಸದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮನೆಯಲ್ಲಿ ಪೂಜಾ ಮಂದಿರಕ್ಕೆ ನೀಡುವಷ್ಟೆ ಪ್ರಾಮುಖ್ಯತೆಯನ್ನು ಪುಸ್ತಕ ಓದಿಗೂ ನೀಡಲು ಪ್ರೇರೇಪಿಸಲು ಇಂದು ಮನೆಗೊಂದು ಗ್ರಂಥಾಲಯ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ.

ಜನ ಸಾಮಾನ್ಯರಲ್ಲಿ ಭಕ್ತಿ ಮತ್ತು ಜ್ಞಾನಕ್ಕೆ ಸಮಾನ ಸ್ಥಾನ ಕಲ್ಪಿಸಿದಾಗ ಸಮೃದ್ಧ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಹನ್ನೆರಡನೆ ಶತಮಾನದ ವಚನ ಚಳುವಳಿಗಳು ಜ್ಞಾನ ಪರಿವರ್ತನೆಗೆ ಹೊಸ ದಿಕ್ಕು ತೋರಿಸಿದಂತೆ ಇಂದು ಗ್ರಂಥಾಲಯಗಳು ನಮ್ಮ ಮಕ್ಕಳನ್ನು ಓದಿನ ಕಡೆಗೆ ಕೊಂಡೊಯ್ಯಲು ದಾರಿ ತೋರಿಸುತ್ತಿವೆ ಎಂದ ಅವರು ಸಾಹಿತಿ ದೇವನೂರು ಮಹದೇವ ಅವರು ಹೇಳಿರುವಂತೆ ಎದೆಗೆ ಬಿದ್ದ ಅಕ್ಷರ ಭೂಮಿಗೆ ಬಿದ್ದ ಬೀಜ ಫಲವನ್ನು ಕೊಟ್ಟೆ ಕೊಡುತ್ತದೆ ಎಂದರು. ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಸ್ವಾತಂತ್ರ್ಯ ನಂತರ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಪುಸ್ತಕ ಪ್ರಾಧಿಕಾರ ಓದುಗರ ಸಂಖ್ಯೆಯನ್ನು ಸೆಳೆಯಲು ಹೊಸ ಹೆಜ್ಜೆ ಇಟ್ಟಿರುವುದು ಶ್ಲಾಘನೀಯ. ಪುಸ್ತಕ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಪುಸ್ತಕ ಪ್ರಾಧಿಕಾರ ಹೊಸ ಯೋಜನೆಗೆ ಮುಂದಾಗಿರುವುದು ಸಂತಸ ತಂದಿದೆ ಎಂದರು. ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಮಾತನಾಡಿ, ಜಗತ್ತಿನಲ್ಲಿ ಯಾವುದೇ ಒಂದು ಕ್ರಾಂತಿ ಸಂಭವಿಸಿದರೂ ಸಹ ಅದು ಪುಸ್ತಕದ ಜ್ಞಾನ ಮತ್ತು ಚಿಂತಕರಿಂದ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಭಾರತದಲ್ಲಿ ಸ್ವತಂತ್ರ ಚಳುವಳಿ ಉತ್ತುಂಗಕ್ಕೆ ಬೆಳೆಯಬೇಕಾದರೂ ಸಹ ಬರವಣಿಗೆಯೆ ಕಾರಣವಾಗಿದೆ.

ಓದಲು ಸಲಹೆ

ಹೀಗಾಗಿ ಇಂದಿನ ಯುವ ಸಮುದಾಯದಲ್ಲಿ ಪುಸ್ತಕದ ಸಂಸ್ಕೃತಿಯನ್ನು ಬೆಳೆಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಸಾಹಿತಿ ಡಾ.ಎಚ್.ಎಲ್.ಪುಷ್ಪ, ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಸತೀಶ್, ಸಾಹಿತಿ ಆಸಿಫ್ ಷರೀಫ್, ಸಂಚಾಲಕಿ ಕವಿತಾರಾವ್, ಸದಸ್ಯ ರುದ್ರೇಶ್ವರ, ಪ್ರತಿಮಾ ಶೇಷಾದ್ರಿ, ಮುಖಂಡ ಶಿವಕುಮಾರಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಬಂಗಾರಪೇಟೆ: ಗೇದಿಗಲ್ ವೃತ್ತದ ಶೌಚಾಲಯಕ್ಕೆ ಬೀಗ

• ಉದಯವಾಹಿನಿ, ಪಾಂಡವಪುರ

ಗ್ರಾಮೀಣ ಭಾಗದಲ್ಲಿ ನೈರ್ಮಲ್ಯ ಕಾಪಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದೆ.

ಆದರೆ, ತಾಲ್ಲೂಕಿನ ಕೇತಗಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೇದಿಗಲ್ ವೃತ್ತದಲ್ಲಿ ನಿರ್ಮಿಸಲಾದ ಸಮುದಾಯ ಶೌಚಾಲಯವು ಸಾರ್ವಜನಿಕರ ಬಳಕೆಗೆ ಲಭ್ಯವಾಗದೆ, ವರ್ಷಗಳಿಂದ ಬೀಗ ಹಾಕಲ್ಪಟ್ಟಿದೆ.

2020-21ನೇ ಸಾಲಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಸಮುದಾಯ ಶೌಚಾಲಯವನ್ನು ನಿರ್ಮಿಸಲಾಗಿತ್ತು. ಗೇದಿಗಲ್ ವೃತ್ತವು ಸದಾ ವಾಹನ ಸವಾರರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಂದ ಕೂಡಿರುವ ಪ್ರಮುಖ ಜಂಕ್ಷನ್ ಆಗಿದೆ. ಇಲ್ಲಿ ಶೌಚಾಲಯದ ಅವಶ್ಯಕತೆ ಹೆಚ್ಚಿರುವುದರಿಂದ ಸರ್ಕಾರ ಅನುದಾನ ಬಿಡುಗಡೆ ಮಾಡಿ ಸುಸಜ್ಜಿತ ಕಟ್ಟಡ ನಿರ್ಮಿಸಿತು. ಆದರೆ ಕಟ್ಟಡ ಉದ್ಘಾಟನೆಯಾದ ದಿನದಿಂದಲೂ ಇಲ್ಲಿಯವರೆಗೆ ಸಾರ್ವಜನಿಕರಿಗೆ ಮಾತ್ರ ಮುಕ್ತವಾಗಿಲ್ಲ.

ಶೌಚಾಲಯದ ಬಾಗಿಲಿಗೆ ಹಾಕಲಾಗಿರುವ ತುಕ್ಕು ಹಿಡಿದ ಬೀಗಗಳು ಅಧಿಕಾರಿಗಳ ನಿರ್ಲಕ್ಷ್ಯವನ್ನು ಸಾರುತ್ತಿದೆ. ನಗರದಲ್ಲಿ ಸಮುದಾಯ ಶೌಚಾಲಯವಿದ್ದರೂ ಪ್ರಯೋಜನಕ್ಕೆ ಬಾರದೆ ಅನಿವಾರ್ಯವಾಗಿ ಸಾರ್ವಜನಿಕರು ಬಯಲನ್ನೇ ಆಶ್ರಯಿಸುವಂತಾಗಿದೆ. ನಿರ್ವಹಣೆ ಇಲ್ಲದೆ ಶೌಚಾಲಯದ ಸುತ್ತಮುತ್ತ ಗಿಡಗಂಟಿಗಳು ಬೆಳೆದು ನಿಂತು ವಿಷಜಂತುಗಳ ವಾಸಸ್ಥಾನವಾಗಿ ಮಾರ್ಪಟ್ಟಿದೆ. ಲಕ್ಷಾಂತರ ರೂಪಾಯಿ ವೆಚ್ಚದ ಈ ಕಾಮಗಾರಿ ಪೂರ್ಣಗೊಂಡಿದ್ದರೂ, ನೀರು ಮತ್ತು ವಿದ್ಯುತ್ ಸಂಪರ್ಕದ ನೆಪ ಹಾಗೂ ನಿರ್ವಹಣೆಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಅಧಿಕಾರಿಗಳು ಶೌಚಾಲಯಕ್ಕೆ ಬೀಗ ಜಡಿದಿದ್ದಾರೆ ಎಂಬುದು ಸಾರ್ವಜನಿಕರ ಆರೋಪ.

ಗೇದಿಗಲ್ ವೃತ್ತದಲ್ಲಿ ಸಂಚರಿಸುವ ಮಹಿಳೆಯರು ಮತ್ತು ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಕೂಡಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗಮನಹರಿಸಿ, ಶೌಚಾಲಯದ ಬೀಗ ತೆರೆಸಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿಸಬೇಕು. ಇಲ್ಲವಾದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

# ಕಡೆಗೂ ಮಕ್ನಾ ಕಾಡಾನೆ ಸೆರೆ: ನಿಟ್ಟುಸಿರು ಬಿಟ್ಟ ರೈತರು

• ಉದಯವಾಹಿನಿ ,ಚಾಮರಾಜನಗರ

ಚನ್ನಪಟ್ಟಣ: ತಾಲ್ಲೂಕಿನ ಬಿ.ವಿ. ಹಳ್ಳಿ ಹಾಗೂ ಅಪಕ್ಕಪದ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ ಮಕ್ನಾ (ದಂತವಿಲ್ಲದ ಗಂಡಾನೆ) ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಭಾನುವಾರ ಸೆರೆ ಹಿಡಿದಿದ್ದಾರೆ. ಬಿ.ವಿ. ಹಳ್ಳಿಯ ಅರಣ್ಯ ಪ್ರದೇಶದ ಕೆಂಪಿಕಟ್ಟೆ ಕೆರೆ ಬಳಿ ಇದ್ದ ಆನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಪ್ರಜ್ಞೆ ತಪ್ಪಿಸಿ ಸೆರೆ ಹಿಡಿಯಲಾಯಿತು. ಬಿ.ವಿ. ಹಳ್ಳಿ ಭಾಗದಲ್ಲಿ ಬೀಡುಬಿಟ್ಟಿದ್ದ ಮಕ್ನಾ, ರೈತರ ತೋಟಗಳಿಗೆ ಬಂದು ಮೇಯ್ದು ದಾಂದಲೆ ಮಾಡುತ್ತಿತ್ತು. ಇದರಿಂದಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ಬೆಳೆ ನಾಶವಾಗಿತ್ತು. ದಿನದಿಂದ ದಿನಕ್ಕೆ ಹೆಚ್ಚಾಗಿದ್ದ ಕಾಡಾನೆ ಸೆರೆ ಹಿಡಿಯಬೇಕು ಎಂದು ರೈತರು ಅರಣ್ಯ ಇಲಾಖೆಗೆ ಒತ್ತಾಯಿಸುತ್ತಲೇ ಬಂದಿದ್ದರು. ಕಡೆಗೆ ಅಧಿಕಾರಿಗಳು ಮಕ್ನಾ ಸೆರೆ ಕಾರ್ಯಾಚರಣೆಗೆ ಸರ್ಕಾರದಿಂದ ಅನುಮತಿ ಪಡೆದಿದ್ದರು. ಶನಿವಾರ ಬೆಳಿಗ್ಗೆ ದುಬಾರ ಆನೆ ಶಿಬಿರದಿಂದ ಆರು ಸಾಕಾನೆಗಳ ತಂಡದೊಂದಿಗೆ ಅರಣ್ಯ ಇಲಾಖೆ ಅಧಿಕಾರಿಗಳ ಹಾಗೂ ಸಿಬ್ಬಂದಿ ಚನ್ನಪಟ್ಟಣಕ್ಕೆ ಬಂದು ಮಕ್ನಾ ಸೆರೆಗೆ ಕಾರ್ಯಾಚರಣೆ ಆರಂಭಿಸಿದ್ದರು. ಭಾನುವಾರ ಬೆಳಿಗ್ಗೆ ಮಕ್ನಾ ಆನೆ ಇದ್ದ ಜಾಗವನ್ನು ಗುರುತಿಸಿದ ಅಧಿಕಾರಿಗಳು, ಅಲ್ಲಿಗೆ ಸಾಕಾನೆ ತಂಡದೊಂದಿಗೆ ಬಂದರು. ಬಂದೂಕಿನ ಮೂಲಕ ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದರು. ಕೆಲ ಹೊತ್ತಿನಲ್ಲೇ ಆನೆ ಪ್ರಜ್ಞೆ ತಪ್ಪಿತ ನಂತರ ಹಗ್ಗದಿಂದ ಕಟ್ಟಿ ಸೆರೆ ಹಿಡಿದು, ಪ್ರಜ್ಞೆ ಬಂದ ನಂತರ ಸಾಕಾನೆಗಳ ಮೂಲಕ ಲಾರಿಗೆಳಿದ್ದ ಜಾಗಕ್ಕೆ ಕರೆತಂದರು. ಆನಂತರ ಕ್ರೇನ್ ಮೂಲಕ ಲಾರಿಗೆ ಹತ್ತಿಸಿ ದುಬಾರೆ ಆನೆ ಶಿಬಿರಕ್ಕೆ ಸಾಗಿಸಲಾಯಿತು. ಕಾರ್ಯಾಚರಣೆ ಕುರಿತು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ. ರಾಮಕೃಷ್ಣಪ್ಪ, 'ಈ ಭಾಗದಲ್ಲಿ ಕಾಡಾನೆಗಳ ಹಾವಳಿ ತೀವ್ರವಾಗಿದೆ. ಅದರಲ್ಲೂ ಮಕ್ನಾ ಹಾಗೂ ಟಸ್ಕರ್ ಆನೆಗಳು ರೈತರ ಬೆಳೆಗಳ ಮೇಲೆ ದಾಳಿ ಮಾಡುತ್ತಿದ್ದವು. ಇವುಗಳ ಸೆರೆಗೆ ಸರ್ಕಾರದಿಂದ ಅನುಮತಿ ಪಡೆಯಲಾಗಿದೆ. ಈಗ ಮಕ್ನಾ ಆನೆ ಸೆರೆ ಹಿಡಿದು ದುಬಾರಿಗೆ ಕಳಿಸಲಾಗಿದೆ ಎಂದರು. ಮುಂದೆ ಟಸ್ಕರ್ ಆನೆ ಸೆರೆಗೆ ಶೀಘ್ರ ಕಾರ್ಯಾಚರಣೆ ನಡೆಸಲಾಗುವುದು. ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಅವರ ಜೊತೆ ಚರ್ಚಿಸಿ ಒಂದೆರಡು ದಿನಗಳ ನಂತರ ಟಸ್ಕರ್ ಆನೆ ಸೆರೆಗು ಕಾರ್ಯಾಚರಣೆ ನಡೆಸಲಾಗುವುದು ಎಂದು ತಿಳಿಸಿದರು. ಎಸಿಎಫ್ ಪುಟ್ಟಮ್ಮ, ಚನ್ನಪಟ್ಟಣ ವಲಯ ಅರಣ್ಯಾಧಿಕಾರಿ ಮಲ್ಲೇಶ್, ಆನೆ ಕಾರ್ಯಪಡೆ ಸಿಬ್ಬಂದಿ ಹಾಗೂ ಇತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

### ಗ್ರಾಮಸ್ಥರ ಪ್ರತಿಭಟನೆ

**ತಾಲ್ಲೂಕಿನ ಬಿ.ವಿ.ಹಳ್ಳಿ ಗ್ರಾಮದ ಬಳಿ ಸೆರೆಯಾದ ಮಕ್ನಾ ಕಾಡಾನೆ ಸಾಗಿಸುತ್ತಿದ್ದ ಲಾರಿಯನ್ನು ರಾಮನಗರ ತಾಲ್ಲೂಕಿನ ಹೊಸದೊಡ್ಡಿ ಗ್ರಾಮಸ್ಥರು ಸಂಜೆ ತಡೆದು ಪ್ರತಿಭಟನೆ ನಡೆಸಿದರು. ತೆಂಗಿನಕಲ್ಲು ಅರಣ್ಯ ಪ್ರದೇಶದಲ್ಲಿ 50ಕ್ಕೂ ಹೆಚ್ಚು ಆನೆಗಳು ಬೀಡುಬಿಟ್ಟಿವೆ. ಈ ಭಾಗದ ಗ್ರಾಮಗಳ ರೈತರ ಬೆಳೆಗಳ ಮೇಲೆ ದಾಳಿ ಮಾಡುತ್ತಿವೆ. ತೆಂಗಿನಕಲ್ಲು ಅರಣ್ಯ ಪ್ರದೇಶದಲ್ಲಿರುವ ಎಲ್ಲಾ ಕಾಡಾನೆಗಳನ್ನು ಸೆರೆ ಹಿಡಿಯಬೇಕು ಎಂದು ಆಗ್ರಹಿಸಿದರು.**

# ಲಿಂಗಾಯತ ಸಮುದಾಯ ಭವನಕ್ಕೆ ಜಾಗ: ಶಾಸಕ

• ಉದಯವಾಹಿನಿ, ಕೋಲಾರ

ವೀರಶೈವ ಲಿಂಗಾಯತ ಸಮುದಾಯ ಭವನಕ್ಕೆ ಅತಿ ಶೀಘ್ರದಲ್ಲೇ ಜಾಗ ಕೊಡಿಸಲಾಗುವುದು. ಈ ಸಂಬಂಧ ಈಗಾಗಲೇ ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವ ಕಳಿಸಲಾಗಿದೆ ಎಂದು ಶಾಸಕ ಕೊತ್ತೂರು ಜಿ.ಮಂಜುನಾಥ್ ಹೇಳಿದರು. ನಗರದ ಟಿ ಚನ್ನಯ್ಯ ರಂಗಮಂದಿರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ವೀರಶೈವ ಸಮುದಾಯದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ, ಯುಗಮಾನೋತ್ಸವದಲ್ಲಿ ಅವರು ಮಾತನಾಡಿದರು. ಮಠಗಳ ಸ್ವಾಮೀಜಿಗಳ ಆಶೀರ್ವಾದ ಎಲ್ಲರ ಮೇಲಿದ್ದು, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸದ ನಂತರ ಉತ್ತಮ ಕೆಲಸ ಸಿಗಬೇಕು. ಮಠದಲ್ಲಿ ಗುರುಗಳು ಇರುವುದರಿಂದಲೇ ಸಂಸ್ಕೃತಿ, ಸಿದ್ಧಾಂತ, ಪದ್ಧತಿಗಳು ಉಳಿದುಕೊಂಡಿವೆ ಎಂದರು.

ಬೆಳ್ಳಾವಿ ಮಠದ ಮಹಾಂತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ನಮ್ಮ ಸಮುದಾಯವು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರಾಗಿದೆ. ರೇಣುಕಾಚಾರ್ಯ ಹಾಗೂ ಬಸವಣ್ಣ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡುವುದು ವಾಡಿಕೆ ಇದೆ. ಕಳೆದ ವರ್ಷಕ್ಕಿಂತ ಈ ವರ್ಷ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸ ಮೂಡಿಸಿದೆ' ಎಂದು ಹೇಳಿದರು.

ನಾಗಲಾಪುರ ಮಠದ ತೇಜೇಶಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 'ಭಾರತ ದೇಶ ಪುಣ್ಯ ಭೂಮಿ. ಇಲ್ಲಿನ ಮಣ್ಣಿನಲ್ಲಿ ಸಾವಿರಾರು ಸಂತರು, ಮಹಂತರು, ಪುಣ್ಯ ಪುರುಷರ ಜನ್ಮತಾಳಿದ್ದಾರೆ. ಅಧರ್ಮ ಅಟ್ಟಹಾಸ ಮೆರೆದಾಗ ಒಬ್ಬೊಬ್ಬ ಪುಣ್ಯ ಪುರುಷರು ಹುಟ್ಟಿ ಶಾಂತಿ, ನೆಮ್ಮದಿ ತಂದು ಕೊಟ್ಟಿದ್ದಾರೆ. ಮಾನವನನ್ನು ಮಹದೇವನನ್ನಾಗಿ ಮಾಡಿದ್ದು ರೇಣುಕಾಚಾರ್ಯರು ಎಂದು ವಿವರಿಸಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಧರ್ಮ, ಜಾತಿ ಎನ್ನದೆ ಸಂಸ್ಕೃತಿ, ಧರ್ಮದ ಜಾಗೃತಿ ಹಾಗೂ ಸಮಾಜದ ಏಳಿಗೆಯ ಬಗ್ಗೆ ವಿಚಾರಗಳನ್ನು ತಿಳಿಸುವ ಕೆಲಸವನ್ನು ರೇಣುಕಾಚಾರ್ಯರು ಮಾಡಿದ್ದಾರೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಶಿವಕುಮಾರ್ ಉಪನ್ಯಾಸ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಎಂ.ಮಂಗಳಾ, ಸಮುದಾಯದ ಮುಖಂಡ ವೀರಭದ್ರಸ್ವಾಮಿ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಎನ್.ವಿಜಯಲಕ್ಷ್ಮಿ ಸ್ವಾಗತಿಸಿದರು. ಮಾಲೂರು ಗಾಯತ್ರಿ ನಿರೂಪಿಸಿ, ವಂದಿಸಿದರು.

ಉತ್ತಮ ಕೆಲಸ ಸಿಗಲಿ

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ವೈ.ಶಿವಕುಮಾರ್, ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ.ಸುರೇಶ್, ಅಖಿಲ ಭಾರತ ವೀರಶೈವ ಮಹಾ ಸಭಾದ ಸಿದ್ದಲಿಂಗ ಒಡೆಯರ್, ಶರಣೆಯರ ಬಳಗದ ಜಿಲ್ಲಾಧ್ಯಕ್ಷೆ ಉಷಾ ಗಂಗಾಧರ್, ಸಮುದಾಯ ಮುಖಂಡರಾದ ರಾಮಸಂದ್ರ ಕುಮಾರ್, ವೀರೇಂದ್ರ ಪಾಟೀಲ್, ಬಿ.ಆರ್.ಎಂ ಚನ್ನಪ್ಪ, ವಿಮಲ ಬೈಲಪ್ಪ ಇದ್ದರು.


ಉದಯವಾಹಿನಿ ಚಿತ್ರ

### ರೇಣುಕಾಚಾರ್ಯರ ಪಲ್ಲಕ್ಕಿ ಉತ್ಸವ

**ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಕೋಲಾರ ನಗರದ ಆರಳೇಪೇಟೆಯ ಶ್ರೀಬಸವೇಶ್ವರ ದೇವಾಲಯದಿಂದ ಟಿ.ಚನ್ನಯ್ಯ ರಂಗಮಂದಿರದವರೆಗೆ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರ ಹೊತ್ತ ಪಲ್ಲಕ್ಕಿ ಉತ್ಸವ ನಡೆಯಿತು.**

**ಕಳಸ ಮಂಗಳವಾದ್ಯ ಪೂರ್ಣಕುಂಭ ವೀರಗಾಸೆ ಡೊಳ್ಳು ಕುಣಿತ ಚಂಡಿ ವಾದ್ಯ ನಾಸಿಕ್ ವಾದ್ಯ ಮೆರುಗು ತುಂಬಿತು. ಅರಳೇಪೇಟೆಯ ಶ್ರೀಬಸವೇಶ್ವರ ಸ್ವಾಮಿ ದೇವಾಲಯದಿಂದ ಎಂ.ಜಿ.ರಸ್ತೆ ಪೊಲೀಸ್ ಸ್ಟೇಷನ್ ಮುಂಭಾಗದಿಂದ ಹಳೆ ಬಸ್ ನಿಲ್ದಾಣದ ಮಾರ್ಗವಾಗಿ ಮೆರವಣಿಗೆ ಸಾಗಿತು. ಮಹಿಳೆಯರು ಕಳಶ ಹೊತ್ತು ಸಾಗಿದರು. ಶ್ರೀಬಸವೇಶ್ವರ ಭಕ್ತ ಮಂಡಳಿ ಹಾಗೂ ಶರಣೆಯರ ಬಳಗ ಪಾಲ್ಗೊಂಡಿತ್ತು.**

## ಮಿನಿ ನ್ಯೂಸ್

### ಶಾಂತಿ, ಸೌಹಾರ್ದದಿಂದ ಹಬ್ಬ ಆಚರಿಸಿ: ಡಿವೈಎಸ್ಪಿ ವಿ.ಮುರಳೀಧರ್

• ಉದಯವಾಹಿನಿ,ಚಿಂತಾಮಣಿ

ಹೋಳಿ, ಯುಗಾದಿ, ರಂಜಾನ್ ಸರಣಿ ಹಬ್ಬಗಳನ್ನು ಹಿಂದೂಮುಸ್ಲಿಂ ಸಮುದಾಯದವರು ಭಾವೈಕ್ಯತೆಯಿಂದ, ಶಾಂತಿಯುತವಾಗಿ ಆಚರಿಸಬೇಕು ಎಂದು ಡಿವೈಎಸ್ಪಿ ವಿ.ಮುರಳೀಧರ್ ಮನವಿ ಮಾಡಿದರು. ಹಬ್ಬಗಳ ಹಿನ್ನೆಲೆಯಲ್ಲಿ ಭಾನುವಾರ ನಗರದ ಪೊಲೀಸ್ ಠಾಣೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದರು.

ಹೋಳಿ ದಿನ ಬಣ್ಣ ಎರಚುವುದು ರೂಢಿಯಲ್ಲಿದೆ. ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಆಚರಿಸಬೇಕು. ರಂಜಾನ್ ಹಬ್ಬದ ಉಪವಾಸ ಬಿಡುವ ಸಮಯದಲ್ಲಿ ಸಂಚಾರಿ ವ್ಯವಸ್ಥೆಯನ್ನು ಕಾಪಾಡಲು ಮಸೀದಿಗಳ ಬಳಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತದೆ ಎಂದರು. ರಂಜಾನ್ 26ನೇ ದಿನ ಜಾಗರಣೆ ಇರುತ್ತಾರೆ.

ರಾತ್ರಿ ವೀಲಿಂಗ್, ತ್ರಿಬಲ್ ರೈಡಿಂಗ್, ರಸ್ತೆಗಳಲ್ಲಿ ಕೂಗಾಡುವುದು, ಲೈಟ್‌ಗಳನ್ನು ಒಡೆಯುವುದು ಮುಂತಾದ ಕೆಲಸಗಳನ್ನು ಮಾಡಬಾರದು ಎಂದು ಮಸೀದಿಗಳಲ್ಲಿ ಸೂಚನೆ ನೀಡಿ ಜಾಗೃತಿಗೊಳಿಸಬೇಕು.

ಅಂತಹ ಘಟನೆಗಳು ಕಂಡುಬಂದರೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುದು ಎಂದು ಎಚ್ಚರಿಸಿದರು. ಸಂಚಾರ ನಿಯಮ, ಅಪರಾಧ ತಡೆ ನಿಯಂತ್ರಣದ ಕುರಿತು ಎಷ್ಟು ಹೇಳಿದರೂ ಸಾಕಾಗುತ್ತಿಲ್ಲ. ಹೆಲ್ಮೆಟ್ ಧರಿಸದಿರುವುದು, ಸಂಚಾರ ನಿಯಮಗಳ ಉಲ್ಲಂಘನೆ, ತ್ರಿಬಲ್ ರೈಡಿಂಗ್ ಮತ್ತಿತರ ಅಪರಾಧಗಳನ್ನು ತೀವ್ರವಾಗಿ ಪರಿಗಣಿಸಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋಗಳನ್ನು ಹಾಕುವ ಕುರಿತು ಸಾಕಷ್ಟು ಬಾರಿ ಎಚ್ಚರಿಕೆ ವಹಿಸಬೇಕು. ನಿಜವೇ, ಸುಳ್ಳ ಎಂದು ಪರಿಗಣಿಸಿ ಪೊಲೀಸ್ ಇಲಾಖೆಯೊಂದಿಗೆ ಸಂಪರ್ಕ ಬೆಳೆಸಬೇಕು.

### ಬೆಂಕಿಗೆ ಬಾಳೆ, ತೆಂಗು ಬೆಳೆ ನಾಶ

• ಉದಯವಾಹಿನಿ, ಹಾರೋಹಳ್ಳಿ

ತಾಲ್ಲೂಕಿನ ಮರಳವಾಡಿ ಗ್ರಾಮದ ಚಿಕ್ಕಮರಳವಾಡಿ ಸಮೀಪದ ರೈತ ಪ್ರಕಾಶ್ ಹೆಬ್ಬಾರ್ ಅವರ ತೋಟದಲ್ಲಿ ಸಂಭವಿಸಿದ ಆಕಸ್ಮಿಕ ಬೆಂಕಿ ಅಪಾರ ಪ್ರಮಾಣದ ನಷ್ಟ ಉಂಟು ಮಾಡಿದೆ. ಎರಡು ದಿನಗಳ ಹಿಂದೆ ಸಂಜೆ 7ಗಂಟೆ ಸುಮಾರಿಗೆ ಕಾಣಿಸಿಕೊಂಡ ಬೆಂಕಿ ತಡರಾತ್ರಿವರೆಗೂ ಉರಿದು, ಸುಮಾರು 2ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಹಲವು ಬೆಳೆಗಳು ಸುಟ್ಟು ಕರಕಲಾಗಿದೆ. ಬೆಂಕಿಯಿಂದ 60 ಬಾಳೆ ಗಿಡ, 20 ಹಣ್ಣಿನ ಗಿಡ, 10 ತೆಂಗಿನ ಮರ, 20 ಮಾವಿನ ಮರ ಮತ್ತು 30 ತೇಗಿನ ಗಿಡಗಳು ಸಂಪೂರ್ಣವಾಗಿ ನಾಶವಾಗಿವೆ. ತೋಟದಲ್ಲಿ ಅಳವಡಿಸಿದ್ದ ಡ್ರಿಪ್ ಪೈಪ್‌ಗಳು ಬೆಂಕಿಗಾಹುತಿಯಾಗಿವೆ. ಈ ಅವಘಡದಿಂದ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಈ ಅನಾಹುತಕ್ಕೆ ಯಾರನ್ನು ಹೊಣೆ ಮಾಡಬೇಕೆಂದು ತಿಳಿಯುತ್ತಿಲ್ಲ. ಸೂಕ್ತ ಪರಿಹಾರ ನೀಡಬೇಕೆಂದು ಎಂದು ರೈತ ಪ್ರಕಾಶ್ ಹೆಬ್ಬಾರ್ ಮನವಿ ಮಾಡಿದ್ದಾರೆ.

ಎರಡು ದಿನಗಳ ಹಿಂದೆ ಸಂಜೆ 7ಗಂಟೆ ಸುಮಾರಿಗೆ ಕಾಣಿಸಿಕೊಂಡ ಬೆಂಕಿ ತಡರಾತ್ರಿವರೆಗೂ ಉರಿದು, ಸುಮಾರು 2ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಹಲವು ಬೆಳೆಗಳು ಸುಟ್ಟು ಕರಕಲಾಗಿದೆ. ಬೆಂಕಿಯಿಂದ 60 ಬಾಳೆ ಗಿಡ, 20 ಹಣ್ಣಿನ ಗಿಡ, 10 ತೆಂಗಿನ ಮರ, 20 ಮಾವಿನ ಮರ ಮತ್ತು 30 ತೇಗಿನ ಗಿಡಗಳು ಸಂಪೂರ್ಣವಾಗಿ ನಾಶವಾಗಿವೆ.

### ಆದಿಚುಂಚನಗಿರಿ ಜಾತ್ರೆ: ಚುಂಚಶ್ರೀಗಳ ಜ್ವಾಲಾಪೀಠಾರೋಹಣದ ಸಂಭ್ರಮ

• ಉದಯವಾಹಿನಿ,ನಾಗಮಂಗಲ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಇತಿಹಾಸ ಸುಕ್ಷೇತ್ರ ಆದಿಚುಂಚನಗಿರಿಯಲ್ಲಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥಸ್ವಾಮೀಜಿ ಅವರ ಜ್ವಾಲಾಪೀಠಾರೋಹಣ ಮತ್ತು ಸಿದ್ದಸಿಂಹಾಸನ ಪೂಜೆ ಅಪಾರ ಭಕ್ತರ ಸಮೂಹದೊಂದಿಗೆ ಶ್ರದ್ಧಾ ಭಕ್ತಿಯಿಂದ ಜರುಗಿತು. ಜಾತ್ರಾ ದಿನದ ವಿಶೇಷವಾಗಿ ಭಾನುವಾರ ಕಾಲಭೈರವೇಶ್ವರ ಸ್ವಾಮಿಗೆ ಸುವರ್ಣ ಕವಚಾಲಂಕಾರ ಪೂಜೆ, ಗಂಗಾಧರೇಶ್ವರಸ್ವಾಮಿಗೆ ರಜತ ನಾಗಾಭರಣ ಅಲಂಕಾರ ಪೂಜೆ ನೆರವೇರಿತು.

**ಜ್ವಾಲಾಪೀಠಾರೋಹಣ:** ಜಾತ್ರಾ ಸಮಯದಲ್ಲಿ ಮಠದ ಪೀಠಾಧ್ಯಕ್ಷರು ಜ್ವಾಲಾಪೀಠಾರೋಹಣ ಮಾಡುವುದು ವಾಡಿಕೆ. ಆದಿಚುಂಚನಗಿರಿ ಕ್ಷೇತ್ರದಲ್ಲಿ ಪರಶಿವನು ಬಂದು ತಪಸ್ಸು ಮಾಡಿದ ಸ್ಥಳವೇ ಜ್ವಾಲಾಪೀಠ ಎಂಬ ಐತಿಹ್ಯವಿದೆ. ಅದರಂತೆ ಶ್ರೀಮಠದ ನಿರ್ಮಲಾನಂದನಾಥ ಸ್ವಾಮೀಜಿಯವರು ಭಾನುವಾರ ರಾತ್ರಿ ಸರ್ವಾಲಂಕಾರ ಭೂಷಿತರಾಗಿ ಜ್ವಾಲಾಪೀಠಕ್ಕೆ ಪೂಜೆ ಸಲ್ಲಿಸಿ ಜ್ವಾಲಾಪೀಠಾರೋಹಣ ಮಾಡಿ ಭಕ್ತರಿಗೆ ದರ್ಶನಾಶೀರ್ವಾದ ನೀಡಿದರು. ನೆರೆದಿದ್ದ ಅಪಾರ ಭಕ್ತ ಸಮೂಹ ಪುಣ್ಯ ಘಳಿಗೆಗೆ ಸಾಕ್ಷಿಯಾದರು. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಚಿನ್ನದ ಕಿರೀಟದೊಂದಿಗೆ ಸರ್ವಾಲಂಕಾರ ಭೂಷಿತರಾಗಿದ್ದ ನಿರ್ಮಲಾನಂದನಾಥಶ್ರೀಗಳು ಶ್ರೀ ಮಠದ ಸಿದ್ದ ಸಿಂಹಾಸನವನ್ನೇರಿ ಭಕ್ತರಿಗೆ ದರ್ಶನ ನೀಡುವುದಕ್ಕೂ ಮುನ್ನ, ಸಹಸ್ರಾರು ಭಕ್ತರ ನಡುವೆ ಶ್ರೀಮಠದ ವಟುಗಳ ವೇದ ಘೋಷಗಳ ಝೇಂಕಾರದೊಂದಿಗೆ ಮೆರವಣಿಗೆಯಲ್ಲಿ ಆಗಮಿಸಿದರು. ಕಾಲಭೈರವೇಶ್ವರ ಸ್ವಾಮಿ ಮತ್ತು ಪರಿವಾರ ದೇವತೆಗಳಿಗೆ ಪೂಜೆ ಸಲ್ಲಿಸಿದ ಬಳಿಕ ಸಿದ್ಧ ಸಿಂಹಾಸನರೂಢರಾಗಿ ದರ್ಶನ ನೀಡಿದರು.

### ಉದ್ಯೋಗ ಮೇಳ ಏ.10ರಂದು


ಉದಯವಾಹಿನಿ ಚಿತ್ರ

• ಉದಯವಾಹಿನಿ ಮೈಸೂರು

ಇಲ್ಲಿನ ಮೇಟಗಳ್ಳಿಯ ಮೈಕಾಸ್ ಕಾಲೇಜಿನಿಂದ ಏ.10ರಂದು ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. 'ಹಲವು ಖಾಸಗಿ ಕಂಪನಿಗಳು ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿವೆ. ಬಿಕಾಂ, ಬಿಬಿಎ, ಬಿಎ ಬಿಎಸ್‌ಡಬ್ಲ್ಯು, ಬಿ.ಎಸ್ಸಿ., ಬಿಇ, ಎಂಕಾಂ, ಎಂಬಿಎ, ಎಂಸಿಎ, ಎಂಎ, ಎಂಎಸ್ ಡಬ್ಲ್ಯು, ಎಂ.ಎಸ್ಸಿ. ಪದವೀಧರರು ಭಾಗವಹಿಸಬಹುದು' ಎಂದು ನಿರ್ದೇಶಕ ಜಿ. ರಾಮಚರಣ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ನೋಂದಣಿ ಹಾಗೂ ಮಾಹಿತಿಗೆ ಮೊ.ಸಂ. 98440 99514 ಸಂಪರ್ಕಿಸಬಹುದು ಎಂದರು. ಪ್ರಾಂಶುಪಾಲೆ ರಮ್ಯಾ ತೆಕ್ಕಡೆ, ರಯಾನ್, ವಿಕ್ರಮ್ ಇದ್ದರು

ಅಂತರಾಳದಿಂದ..

EDITORIAL

# ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿಯ ಭಯೋತ್ಪಾದನೆ



ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿರುವ ಭೀಕರ ದಾಳಿಯು ಉಭಯ ದೇಶಗಳು ತಮ್ಮ ಸ್ವಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ನಡೆಸಿರುವ ಸೈನಿಕ ಹಾಗೂ ಸಾಮ್ರಾಜ್ಯಶಾಹಿ ಕಾರ್ಯಾಚರಣೆಯಾಗಿದೆ. 2025ರಲ್ಲಿ ನಡೆದ ದಾಳಿಯ ಎಂಟು ತಿಂಗಳ ತರುವಾಯ ಮತ್ತೆ ನಡೆದಿರುವ ದಾಳಿಯು, ಇರಾನ್‌ನ ರಾಜಕೀಯ, ಧಾರ್ಮಿಕ ಹಾಗೂ ಸೇನಾ ನಾಯಕತ್ವ ಮತ್ತು ಅವರ ಕುಟುಂಬಗಳನ್ನು ಗುರಿಯಾಗಿಸಿಕೊಂಡಿದೆ. ಇರಾನ್ ಅತ್ಯುಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರನ್ನು ಹತ್ಯೆ ಮಾಡಲಾಗಿದೆ. ಗಾಜಾದಲ್ಲಿ ನಡೆದಿರುವ ಜನಾಂಗೀಯ ಹತ್ಯೆಗಳಿಗೆ ಜಡವಾಗಿರುವ ಜಗತ್ತು, ವಿಶೇಷವಾಗಿ ಪಶ್ಚಿಮ ದೇಶಗಳು, ಪ್ರಸಕ್ತ ಅಂತರರಾಷ್ಟ್ರೀಯ ಕಾನೂನುಗಳನ್ನು ಮತ್ತೆ ಉಲ್ಲಂಘಿಸಿರುವ ಅಮೆರಿಕ ಮತ್ತು ಇಸ್ರೇಲ್‌ನ ರಾಕ್ಷಸೀಯ ಕೃತ್ಯಗಳಿಂದ ಉಂಟಾಗುವ ಪರಿಣಾಮಗಳ ಬಗ್ಗೆ ವಿಚಲಿತಗೊಳ್ಳುವ ಸಾಧ್ಯತೆ ಕಡಿಮೆ. ಹಿಂದೆ ಬಳಸಿದ ತಂತ್ರಗಳನ್ನೇ ಪ್ರಸಕ್ತ ಪ್ರಹಸನದಲ್ಲೂ ಬಳಸಲಾಗುತ್ತಿದೆ. ಮೊದಲಿಗೆ ರಾಜತಾಂತ್ರಿಕ ಸಂವಾದವನ್ನು ಆರಂಭಿಸುವುದು ಹಾಗೂ ಮಾತುಕತೆಯ ಮುಖವಾಡದಡಿಯೇ ಎದುರಾಳಿಗಳನ್ನು ನಾಶಗೊಳಿಸುವ ತಂತ್ರವಿದು. ಈ ಬಾರಿ ರಾಜತಾಂತ್ರಿಕ ಮಧ್ಯವರ್ತಿಯಾಗಿ ಒಮನ್ ಭಾಗವಹಿಸಿತ್ತು ಹಾಗೂ ಮಾತುಕತೆಗಳು ಫಲಪ್ರದವಾಗುವ ಸಾಧ್ಯತೆಯೂ ಇತ್ತು. ಅಮೆರಿಕದೊಂದಿಗಿನ ಮಾತುಕತೆಯಲ್ಲಿ ಇರಾನ್ ಸಾಕಷ್ಟು ಒಪ್ಪಂದಗಳಿಗೆ ಬಂದಿತ್ತು. ಆದರೆ, ಈಗಿನ ದಾಳಿಯು ಅಮೆರಿಕ ಒಮನ್ ಹಾಗೂ ಇರಾನ್ ನಡುವಣ ಸಂವಾದವು ಒಪ್ಪಂದದ ಸ್ವರೂಪಕ್ಕೆ ಬರುವುದನ್ನು ಹಾಳು ಮಾಡಿದೆ.

ಅಮೆರಿಕ ಮತ್ತು ಇರಾನ್ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸಿದ್ದ ಒಮನ್‌ನ ವಿದೇಶಾಂಗ ಸಚಿವ ಬದ್–ಅಲ್–ಬುಸೈದಿ ಅವರ ಪ್ರತಿಕ್ರಿಯೆಯು, ತ್ವರಿತ ದಾಳಿಯ ಹಿಂದಿನ ಉದ್ದೇಶವನ್ನು ಬಹಿರಂಗಪಡಿಸುವಂತಿದೆ.

ಅಮೆರಿಕಮತ್ತು ಇರಾನ್ ನಡುವಣ ಸಾಮರಸ್ಯ ವನ್ನು ಇಸ್ರೇಲ್ ಬಯಸುವುದಿಲ್ಲ ಹಾಗೂ ಆ ಸಂಭಾವ್ಯ ಸೌಹಾರ್ದವನ್ನು ತಡೆಯಲು ಇಸ್ರೇಲ್ ಪ್ರಯತ್ನಿಸುತ್ತದೆ ಎಂದು ಭಾವಿಸಲಾಗಿದೆ. ರಾಜತಾಂತ್ರಿಕ ಮಾತುಕತೆಗಳಿಂದ ಸಾಧ್ಯವಾಗಬಹು ದಾದ ಫಲಿತಾಂಶವು, 'ಗ್ರೇಟರ್ ಇಸ್ರೇಲ್' ಗುರಿ ಸಾಧನೆಯ ಕಡೆಗಿನ 'ಜಿಯೊನಿಸ್ಟ್'ಗಳ ಸೈನಿಕ ಕಾರ್ಯಾಚರಣೆಗೆ ಅಡಚಣೆ ಉಂಟು ಮಾಡುವಂತಹದ್ದಾಗಿದೆ. ಇಸ್ರೇಲ್‌ನ ಸೈನಿಕ ಕಾರ್ಯಾಚರಣೆಯನ್ನು ವಿಫಲಗೊಳಿಸುವ ಉದ್ದೇಶ ದಿಂದ ನಡೆದ ಮಾತುಕತೆಗಳನ್ನು ಪ್ರಸಕ್ತ ದಾಳಿ ಹಾಳುಗೆಡವಿದೆ. ಈ ಯುದ್ಧವು ಅರಬ್ ರಾಷ್ಟ್ರಗಳೊಂದಿಗೆ ಇರಾನ್‌ಗೆ ಹಗೆತನ ಸೃಷ್ಟಿಸುವುದರೊಂದಿಗೆ, ಆ ಪ್ರದೇಶದಲ್ಲಿ ತೀವ್ರ ಅಸ್ಥಿರತೆ ಉಂಟಾಗಲು ಕಾರಣವಾಗಿದೆ. ಅಮೆರಿಕಕ್ಕೆ ಇರಾನ್ 'ಸನ್ನಿಹಿತ ಬೆದರಿಕೆ'ಯಾಗಿದೆ ಎನ್ನುವ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಹೇಳಿಕೆ ಈಗಾಗಲೇ ಬಳಕೆಯಾಗಿರುವ ಸವಕಲು ಚಿತ್ರಕಥೆಯಾಗಿದೆ. ವಿಶ್ವಾಸಾರ್ಹ ಪುರಾವೆಗಳಿಲ್ಲದ ಪರಮಾಣು ಶಸ್ತ್ರಾಸ್ತ್ರಗಳ ಯೋಜನೆಗಳು ಹಾಗೂ ಆಡಳಿತ ಬದಲಾವಣೆಯ ಮೂಲಕ ಇರಾನ್ ನಾಗರಿಕರಿಗೆ 'ಸ್ವಾತಂತ್ರ್ಯ' ದೊರಕಿಸಿಕೊಡುವ ಮಾತುಗಳ ಹಿಂದಿನ ಹುನ್ನಾರ ಅರ್ಥವಾಗದೆ ಇರುವಂತಹದ್ದೇನೂ ಅಲ್ಲ. ಆರ್ಥಿಕ ಸಂಕಷ್ಟ ಹಾಗೂ ನಾಗರಿಕ ಕ್ಷೋಭೆಯಲ್ಲಿ ಇರಾನ್ ಸಿಲುಕಿರುವ ಸೂಕ್ಷ್ಮ ಸಂದರ್ಭವನ್ನು ಆಕ್ರಮಣಕಾರರು ತಮ್ಮ ದಾಳಿಗೆ ಎಚ್ಚರಿಕೆಯಿಂದ ಆರಿಸಿಕೊಂಡಿದ್ದಾರೆ.

ಅರಬ್ ಒಕ್ಕೂಟದ ಪಶ್ಚಿಮದ ಮಿತ್ರರು ಇರಾನ್ ಪರವಾಗಿ ಧ್ವನಿ ಎತ್ತದೆ ಇದ್ದರೂ, ಅವರು ಪರಿಸ್ಥಿತಿಯ ಲಾಭಪಡೆಯುವವರಾಗಿರುವ ಸಾಧ್ಯತೆ ಕಡಿಮೆಯಾಗಿದೆ. ಸೈನಿಕ ಕಾರ್ಯಾಚರಣೆಯಿಂದ ಆಡಳಿತದ ಬದಲಾವಣೆ ಸರಳವಾಗಿ ಸಂಭವಿಸಿರುವುದೂ ವಿರಳ. ಮತ್ತೊಂದು ಗಾಜಾ ಆಗದಂತಿರಲು ಹಾಗೂ ಪ್ಯಾಲೆಸ್ಟೀನಿಯರ ದುರ್ಗತಿ ಪಡೆಯದಿರಲು. ಪ್ರತಿ ಹೋರಾಟ ನಡೆಸುವುದು ಇರಾನ್‌ಗೆ ಅನಿವಾರ್ಯ ಎನ್ನುವಂತಾಗಿದೆ. ಖಮೇನಿ ಹತ್ಯೆಯ ನಂತರ ಇರಾನ್‌ನಲ್ಲಿ ಉಳಿದಿರುವ ನಾಯಕತ್ವ ಹಾಗೂ 'ರೆವಲ್ಯೂಷನರಿ ಗಾರ್ಡ್ಸ್' ಈಗಿನ ಸವಾಲುಗಳಿಗೆ ಹೇಗೆ ಪ್ರತಿಕ್ರಿಯಿಸಲಿದೆ ಎನ್ನುವುದು ಇರಾನ್‌ನ ಭವಿಷ್ಯವನ್ನು ನಿರ್ಧರಿಸಲಿದೆ. ಖಮೇನಿ ಅವಧಿಯಲ್ಲಿ ಇರಾನ್‌ನಲ್ಲಿ ಒಂದಷ್ಟು ಅತಿರೇಕಗಳಿದ್ದವು ಎನ್ನುವುದು ನಿಜ. ಆದರೆ, ಯಾವುದೇ ಕಾರಣವು ಅಮೆರಿಕ ಇಸ್ರೇಲ್ ದಾಳಿಗೆ ಮತ್ತು ಹತ್ಯೆಗಳಿಗೆ ಸಮರ್ಥನೆ ಆಗಲಾರದು. ಇರಾಕ್, ಲಿಬಿಯಾ, ಸಿರಿಯಾ, ಗಾಜಾ, ಲೆಬನಾನ್ ಸೇರಿದಂತೆ ಎಲ್ಲೆಲ್ಲಿ ಅಮೆರಿಕದ ಸೇನಾಪಡೆಗಳು ಹಸ್ತಕ್ಷೇಪ ನಡೆಸಿ ಆಕ್ರಮಿಸಿಕೊಂಡಿವೆಯೋ ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪಾಠವೊಂದಿದೆ: ಸ್ವಯಂ ನಿಯೋಜಿತ ವಿದೇಶಿ ರಕ್ಷಕರು ಸಂಘರ್ಷದ ನೆಲದಲ್ಲಿ ಸ್ಥಿರ, ಶಾಂತಿಯುತ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ರೂಪಿಸುವುದು ಅಪರೂಪಕ್ಕಷ್ಟೇ ಸಾಧ್ಯವಾಗಿದೆ.

## ರಾಮಾಯಣ



**ಶ್ರೀ ಲಕ್ಷ್ಮಣನು ಸುಗ್ರೀವನನ್ನು ರಾಮನ ಬಳಿಗೆ ಕರೆದದ್ದು**

• ಹಿಂದಿನ ಸಂಚಿಕೆಯಿಂದ

121 ನೆಯ ಅಧ್ಯಾಯ

ಹಸ್ತಾಚಲ ಐದ್ರಾಚಲ ಅಂಜನಗಿರಿ ಧೂವಾರಿಯೇ ಮೊದಲಾದ ಪರ್ವತಗಳ ಗುಹೆಗಳಲ್ಲಿಯೂ ಇತರ ಸ್ಥಾನಗಳಲ್ಲಿಯೂ ವಾಸಮಾಡುತ್ತ ನಾನಾವರ್ಣವಾಗಿಯೂ ಮಹಾಬಲವುಳ್ಳವಾಗಿಯೂ ಆನೆಗಳಿಗೂ ಮೇಘಗಳಿಗೂ ಸಮಾನವಾದ ಶರೀರಾಕಾರವುಳ್ಳವಾಗಿಯೂ ಮಧುಪಾನಮಾಡಿಕೊಂಡಿರುವ ಕಪಿಗಳನ್ನು ಕರೆಕಳುಹಿಸು. ನಾನು ಮೊದಲು ಕಳುಹಿಸಿದ ಕಪಿನಾಯಕರು ಕಪಿಗಳನ್ನು ಕರೆದುಕೊಂಡು ಶೀಘ್ರದಲ್ಲಿ ಬರುವ ಹಾಗೆ ಇನ್ನೂ ಕೆಲವು ಕಪಿನಾಯಕರನ್ನು ಕಳುಹಿಸು. ಕೆಲವರನ್ನು ಸಮಸ್ತ ಒಕ್ಕಗಳಲ್ಲಿರುವ ಕಪಿಗಳನ್ನೂ ಕರೆದುಕೊಂಡು ಶೀಘ್ರವಾಗಿ ಬರುವಹಾಗೆ ಕಟ್ಟು ಮಾಡಿ ಕಳುಹಿಸು. ಇನ್ನು ಹತ್ತು ದಿನಗಳೊಳಗಾಗಿ ಎಲ್ಲರೂ ಬಂದು ಸೇರಬೇಕೆಂದು ನನ್ನ ಆಜ್ಞೆ. ಈ ರಾಜಾಜ್ಞೆಯನ್ನು ಮೀರಿದ ಕಪಿಗಳನ್ನು ಮರಣದಂಡನೆಗೆ ಒಳಪಡಿಸುತ್ತೇನೆ ಎಂದು ಹೇಳಿದನು.

ಆ ಮಾತನ್ನು ಕೇಳಿ ಹನುಮಂತನು ಅತಿವೇಗವುಳ್ಳ ಕಪಿನಾಯಕರನ್ನು ಕಳುಹಿಸಲು, ಅವರು ಆಕಾಶದಲ್ಲಿ ಪಕ್ಷಿಗಳು ಹೋಗುವಂತೆ ಶೀಘ್ರವಾಗಿ ಹೋಗಿ ಸಮುದ್ರದ ತಡಿಗಳಲ್ಲಿಯೂ ವನಗಳಲ್ಲಿಯೂ ಪರ್ವತಗುಹೆಗಳಲ್ಲಿಯೂ ಇದ್ದ ಕಪಿನಾಯಕರಿಗೆ, ಕಾಲಮೃತ್ಯುವಿಗೆ ಸಮಾನವಾದ ಸುಗ್ರೀವನ ಆಜ್ಞೆಯನ್ನು ತಿಳಿಸಿದರು. ಅದನ್ನು ಕೇಳಿ ನಾನಾದಿಕ್ಕುಗಳಲ್ಲಿದ್ದ ಕವಿನಾಯಕರು ತಮ್ಮ ತಮ್ಮ ಸೇನೆಗಳನ್ನು ಕೂಡಿಕೊಂಡು ಶೀಘ್ರವಾಗಿ ಬರಲಾರಂಭಿಸಿದರು. ಅಂಜನಗಿರಿಯಿಂದ ಬಂದ ಮಹಾ ಬಲವಂತರಾದ ಕಪಿಗಳು ಮೂರುಕೋಟಿ, ಅಸ್ತಮಯಪರ್ವತದಿಂದ ಬಂದ ಸುವರ್ಣಕಾಯರಾದ ಕವಿ ಗಳು ಹತ್ತು ಕೋಟಿ, ಕೈಲಾಸಪರ್ವತದಿಂದ ಬಂದ ಸಿಂಹದಂತೆ ಬಲಪರಾಕ್ರಮವುಳ್ಳ ಕಪಿಗಳು ಸಾವಿರ ಕೋಟಿ, ಹಿಮವತ್ಪರ್ವತವನ್ನಾಶ್ರಯಿಸಿಕೊಂಡು ಕಂದಮೂಲ ಫಲಾಹಾರಗಳನ್ನು ಮಾಡಿಕೊಂಡಿದ್ದ ಕಪಿಗಳು ಸಾವಿರಕೋಟಿ, ವಿಂಧ್ಯಪರ್ವತದಿಂದ ಬಂದ ಯಜ್ಞಪುರುಷನಿಗೆ ಸಮಾನರಾದ ಕಪಿಗಳು ಒಂದುಸಾವಿರ ಕೋಟಿ, ಕ್ಷೀರಸಮುದ್ರದ ತಡಿಯಲ್ಲಿರುವ ತಮಾಲವೆಂಬ ವನದಲ್ಲಿ ತೆಂಗಿನಕಾಯಿಗಳ ನೀರನ್ನೇ ಆಹಾರಮಾಡಿಕೊಂಡಿದ್ದ ಕಪಿಗಳು ಲೆಕ್ಕವಿಲ್ಲದಷ್ಟು, ವನಗಳಿಂದಲೂ ಗುಹೆಗಳಿಂದಲೂ ನದೀತೀರಗಳಿಂದಲೂ ಬಂದ ಕವಿಗಳೂ ಲೆಕ್ಕವಿಲ್ಲದವಾಗಿದ್ದುವು !

ಈ ಪ್ರಕಾರ ಸೂರೋದಯದಲ್ಲಿ, ಸೂರ್ಯಮಂಡಲವನ್ನೇ ಕೌಚಿದವೋ ಎಂಬಂತೆ ಕಪಿಸೇನೆಯು ಬರಲಾರಂಭಿಸಿತು. ಆ ಕಪಿಗಳನ್ನು ಕರೆತರುವುದಕ್ಕೆ ಕಿಷ್ಕಿಂಧಾಪಟ್ಟಣದಿಂದ ಹೋದ ಕಪಿನಾಯಕರು ಮಹತ್ತಾದ ವನಗಳುಳ್ಳ ಹಿಮವತ್ಪರ್ವತವನ್ನು ಕಂಡರು.

ಅಲ್ಲಿ ಹಿಂದೆ ಒಂದು ದೊಡ್ಡ ಅಶ್ವಮೇಧಯಾಗವು ನಡೆದಿತ್ತು. ಅಲ್ಲಿ ಅಮೃತಸಮಾನವಾದ ಹಣ್ಣುಹಂಪಲುಗಳು ಯಥೇಚ್ಛವಾಗಿ ಬೆಳೆದಿದ್ದವು. ಆ ಹಣ್ಣುಗಳನ್ನು ತಿಂದರೆ ಒಂದು ತಿಂಗಳವರೆಗೆ ಆಧಾರಾಪೇಕ್ಷೆ ಇಲ್ಲದೆ ಇರಬಹುದಾಗಿತ್ತು.

ಮುಂದುವರಿಯುವುದು...



**ಹೋಳಿ ಎಂದರೆ ಕೇವಲ ಬಣ್ಣಗಳ ಆಟವಲ್ಲ; ಅದು ಪ್ರಕೃತಿ ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧವನ್ನು ಬೆಸೆಯುವ ಒಂದು ಸುಂದರ ಸೇತುವೆ. ವಸಂತ ಕಾಲದ ಆಗಮನದೊಂದಿಗೆ ಮರಗಿಡಗಳು ಚಿಗುರಿ, ಹೂವುಗಳು ನಲಿದಾಡುವಂತೆ, ಮನುಷ್ಯನ ಮನಸ್ಸು ಕೂಡ ನವೋಲ್ಲಾಸದಿಂದ ಕಂಗೊಳಿಸಲಿ ಎಂಬುದೇ ಈ ಹಬ್ಬದ ಆಶಯ.**

# ಬಣ್ಣದ ಬದುಕು ಹೋಳಿಯ ರಂಗು





**ನೋವು ಮರೆಸುವ ಬಣ್ಣದ ಲೋಕ**

ನಮ್ಮ ಜೀವನವು ಒಂದು ಬಿಳಿ ಕ್ಯಾನ್ವಾಸ್ ಇದ್ದಂತೆ. ಅದಕ್ಕೆ ಯಾವ ಬಣ್ಣವನ್ನು ಬಳಿಯಬೇಕು ಎಂಬುದು ನಮ್ಮ ಕೈಯಲ್ಲಿದೆ. ಬದುಕು ಬಣ್ಣದಂತೆ ರಂಗಾಗಿರಲಿ ಎಂಬ ಹಾರೈಕೆಯಲ್ಲಿ ದೊಡ್ಡದೊಂದು ದಾರ್ಶನಿಕ ಸತ್ಯವಿದೆ.

ಕೆಂಪು ಬಣ್ಣ ಪ್ರೀತಿಯನ್ನು ಸೂಚಿಸಿದರೆ, ಹಳದಿ ಸೌಹಾರ್ದತೆಯನ್ನು, ಹಸಿರು ಸಮೃದ್ಧಿಯನ್ನು ಹಾಗೂ ನೀಲಿ ಬಣ್ಣ ಶಾಂತಿಯನ್ನು ಪ್ರತಿನಿಧಿಸುತ್ತದೆ. ಈ ಎಲ್ಲಾ ಬಣ್ಣಗಳು ಮನುಷ್ಯನ ಭಾವನೆಗಳಿಗೆ ಕನ್ನಡಿ ಹಿಡಿಯುತ್ತವೆ. ಬದುಕಿನ ಏರಿಳಿತಗಳಲ್ಲಿ ಸುಖ–ದುಃಖಗಳು ಸಹಜ. ಆದರೆ, ಹೋಳಿಯ ಬಣ್ಣಗಳು ನಮಗೆ ಕಲಿಸುವುದು ಒಂದೇ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಿ ಸಂಭ್ರಮಿಸುವುದನ್ನು.

**ಕಷ್ಟಗಳು ಮಾಯವಾಗಲಿ, ರಂಗಿನಂತೆ ಜೀವನ ಕಂಗೊಳಿಸಲಿ**

ಜೀವನದಲ್ಲಿ ಸವಾಲುಗಳು ಬರುವುದು ಸಹಜ, ಆದರೆ ಅವು ಶಾಶ್ವತವಲ್ಲ. ಕಷ್ಟಗಳು ಮಾಯವಾಗಿ ಜೀವನ ರಂಗಿನಂತೆ ಕಂಗೊಳಿಸಲಿ ಎನ್ನುವಾಗ ನಾವು ನಮ್ಮೊಳಗಿನ ಭರವಸೆಯನ್ನು ಜಾಗೃತಗೊಳಿಸುತ್ತೇವೆ. ಕಾಮದಹನದ ಬೆಂಕಿಯಲ್ಲಿ ನಮ್ಮೊಳಗಿನ ಅಹಂಕಾರ, ದ್ವೇಷ ಮತ್ತು ಕೆಟ್ಟ ಆಲೋಚನೆಗಳನ್ನು ಸುಟ್ಟು ಹಾಕಿ, ಮರುದಿನ ಹೊಳೆಯುವ ಬಣ್ಣಗಳೊಂದಿಗೆ ಹೊಸ ಬದುಕನ್ನು ಅಪ್ಪಿಕೊಳ್ಳಬೇಕು. ಕತ್ತಲೆಯ ನಂತರ ಬೆಳಕು ಬರುವಂತೆ, ಸಂಕಷ್ಟದ ಕಾರ್ಮೋಡಗಳು ಸರಿದು ಸೌಭಾಗ್ಯದ ಮಳೆ ಸುರಿಯಲಿ ಎಂಬುದು ಈ ಹಬ್ಬದ ಪ್ರಾರ್ಥನೆ.

**ಸಂಬಂಧಗಳ ಬೆಸುಗೆ**

ಹೋಳಿ ಹಬ್ಬವು ಹಗೆತನವನ್ನು ಮರೆತು ಸ್ನೇಹದ ಹಸ್ತ ಚಾಚುವ ಸಮಯ. ಪರಸ್ಪರ ಬಣ್ಣಗಳನ್ನು ಹಚ್ಚುವಾಗ ಅಲ್ಲಿ ಮೇಲು–ಕೀಳು ಎನ್ನುವ ಭಾವನೆ ಮಾಯವಾಗುತ್ತದೆ. ಎಲ್ಲರೂ ಒಂದೇ ಎಂಬ ಬಣ್ಣದ ಹೊದಿಕೆ ಎಲ್ಲರನ್ನೂ ಆವರಿಸುತ್ತದೆ. ನಮ್ಮ ಜೀವನ ಕೂಡ ಇದೇ ರೀತಿ ಪರಸ್ಪರ ಪ್ರೀತಿ ಮತ್ತು ವಿಶ್ವಾಸದಿಂದ ರಂಗಾಗಬೇಕು. ಬಣ್ಣಗಳು ಹರಡಿದಂತೆ ಸಂತೋಷವು ಸಮಾಜದ ಪ್ರತಿಯೊಂದು ಮನೆಗೂ ತಲುಪಲಿ.

ಬಣ್ಣಗಳ ಈ ಮಹೋತ್ಸವವು ನಿಮ್ಮ ಜೀವನಕ್ಕೆ ಹೊಸ ಚೈತನ್ಯ ನೀಡಲಿ. ನಿಮ್ಮ ಹಾದಿಯಲ್ಲಿ ಎದುರಾಗುವ ಮುಳ್ಳುಗಳು ಹೂವಾಗಿ ಬದಲಾಗಲಿ, ಕಣ್ಣೀರು ಮಾಯವಾಗಿ ತುಟಿಯ ಮೇಲೆ ನಗು ಸ್ಥಿರವಾಗಿರಲಿ.

ಮಳೆಬಿಲ್ಲಿನ ಏಳು ಬಣ್ಣಗಳಂತೆ ನಿಮ್ಮ ಬದುಕು ರಂಗಿನ ಗೂಡಾಗಿ, ಸುಖ–ಶಾಂತಿ–ಸಮೃದ್ಧಿಯಿಂದ ಕಂಗೊಳಿಸಲಿ.

ನಿಮಗೂ ಮತ್ತು ನಿಮ್ಮ ಕುಟುಂಬಕ್ಕೂ ಹೋಳಿ ಹಬ್ಬದ ಹಾರ್ದಿಕ ಶುಭಾಶಯಗಳು!

**– ಶ್ರೀ ಬಿ. ವಿ. ಹಿರೇಮಠ**
**ಶಿಕ್ಷಕರು ಸಿಂದಗಿ**

# ಭಾರತ ಸೆಮಿಫೈನಲ್‌ಗೆ ದಿಟ್ಟ ಹೆಜ್ಜೆ

## ಸಂಜು ಸ್ಯಾಮ್ಸನ್ ಸಾಹಸ

**ಟಿಟ್ವೆಂಟಿ ವಿಶ್ವಕಪ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ರೋಚಕ ಹೋರಾಟದಲ್ಲಿ ಭಾರತದ ಗೆಲುವಿಗೆ ಪ್ರಮುಖ ಕಾರಣವಾಗಿದ್ದು ಸಂಜು ಸ್ಯಾಮ್ಸನ್ ಅವರ ಅದ್ಭುತ ಹೋರಾಟ. ಒತ್ತಡದ ಕ್ಷಣದಲ್ಲಿ ಅವರು ತೋರಿದ ಶಾಂತ ಮನೋಭಾವ ಮತ್ತು ಆಕ್ರಮಣಕಾರಿ ಶೈಲಿ ಭಾರತವನ್ನು ಸೆಮಿಫೈನಲ್ ದಿಕ್ಕಿನಲ್ಲಿ ಮುನ್ನಡೆಸಿತು.**



ವಿಶ್ವಾಸ್.ಡಿ.ಗೌಡ

ಉದಯವಾಹಿನಿ ವಿಶೇಷ

ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ತಂಡ 20 ಓವರ್‌ಗಳಲ್ಲಿ 195/4 ರನ್‌ಗಳ ಭದ್ರ ಮೊತ್ತ ಕಟ್ಟಿ ಭಾರತಕ್ಕೆ 196 ರನ್‌ಗಳ ಕಠಿಣ ಗುರಿ ನೀಡಿತು. ಪವರ್‌ಪ್ಲೇನಲ್ಲಿ ವೇಗದ ಆರಂಭ, ಮಧ್ಯ ಕ್ರಮಾಂಕದ ಸ್ಫೋಟಕ ಬ್ಯಾಟಿಂಗ್ ಮತ್ತು ಕೊನೆಯ ಓವರ್‌ಗಳಲ್ಲಿ ಬಂದ ಸಿಕ್ಸರ್‌ಗಳು ಭಾರತದ ಬೌಲರ್‌ಗಳಿಗೆ ಸವಾಲು ಎಸೆದವು. ಈ ಭಾರೀ ಗುರಿಯನ್ನು ಬೆನ್ನಟ್ಟಲು ಬಂದ ಭಾರತ ತಂಡಕ್ಕೆ ಆರಂಭ ಸಮತೋಲನವಾಗಿದ್ದರೂ, ಮಧ್ಯ ಓವರ್‌ಗಳಲ್ಲಿ ವಿಕೆಟ್‌ಗಳು ಬೀಳುತ್ತ ಪಂದ್ಯ ಒತ್ತಡಕ್ಕೆ ಒಳಪಟ್ಟಿತು. 12ನೇ ಓವರ್ ವೇಳೆಗೆ ಭಾರತ 92/3 ಸ್ಥಿತಿಯಲ್ಲಿ ಇತ್ತು. ಆಗ ಮೈದಾನಕ್ಕಿಳಿದ ಸಂಜು ಸ್ಯಾಮ್ಸನ್ ತಂಡದ ಹೊಣೆಗಾರಿಕೆಯನ್ನು ಹೊತ್ತುಕೊಂಡರು.

ಸ್ಯಾಮ್ಸನ್ ಅವರ ಇನಿಂಗ್ಸ್ ಸಂಪೂರ್ಣವಾಗಿ ಜವಾಬ್ದಾರಿಯುತ ಮತ್ತು ಲೆಕ್ಕಾಚಾರಪೂರ್ಣವಾಗಿತ್ತು. ಆರಂಭದಲ್ಲಿ ಅವರು ಒಂದೆರಡು ಓವರ್‌ಗಳನ್ನು ಶಾಂತವಾಗಿ ಆಡುತ್ತ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ನಂತರ ಸ್ಪಿನ್ನರ್‌ಗಳ ವಿರುದ್ಧ ಕಾಲಿಗೆ ಬಂದ ಚೆಂಡುಗಳನ್ನು ಲಾಂಗ್ ಆನ್ ಮತ್ತು ಡೀಪ್ ಮಿಡ್‌ವಿಕೆಟ್ ಕಡೆಗೆ ಸಿಕ್ಸರ್‌ಗಳಾಗಿ ಪರಿವರ್ತಿಸಿದರು. ವೇಗದ ಬೌಲರ್‌ಗಳ ವಿರುದ್ಧ ಕವರ್ ಡ್ರೈವ್ ಮತ್ತು ಪುಲ್ ಶಾಟ್‌ಗಳು ಕಣ್ಮನ ಸೆಳೆದವು.

ಅವರು ಕೇವಲ 50 ಚೆಂಡುಗಳಲ್ಲಿ 97 ರನ್‌ಗಳನ್ನು ಕಲೆಹಾಕಿ ನಾಟೌಟ್ ಉಳಿದರು. ಈ ಇನಿಂಗ್ಸ್‌ನಲ್ಲಿ 8 ಬೌಂಡರಿ ಮತ್ತು 6 ಸಿಕ್ಸರ್‌ಗಳು ದಾಖಲಾಗಿದ್ದವು. ಅವರ ಸ್ಟ್ರೈಕ್ ರೇಟ್ 190 ಕ್ಕಿಂತ ಅಧಿಕವಾಗಿತ್ತು. ವಿಶೇಷವಾಗಿ 16ನೇ ಮತ್ತು 18ನೇ ಓವರ್‌ಗಳಲ್ಲಿ ಬಂದ ಎರಡು ಭರ್ಜರಿ ಸಿಕ್ಸರ್‌ಗಳು ಪಂದ್ಯವನ್ನು ಸಂಪೂರ್ಣವಾಗಿ ಭಾರತ ಪರ ಮಾಡಿಸಿದವು.


ಕೊನೆಯ ಓವರ್‌ನಲ್ಲಿ 8 ರನ್ ಅಗತ್ಯವಿದ್ದಾಗ ಸ್ಯಾಮ್ಸನ್ ಶಾಂತವಾಗಿ ಸಿಂಗಲ್ ತೆಗೆದು ನಂತರ ಕವರ್ ಭಾಗದಲ್ಲಿ ಬೌಂಡರಿ ಹೊಡೆದು ಒತ್ತಡವನ್ನು ಕಡಿಮೆ ಮಾಡಿದರು. ಅಂತಿಮವಾಗಿ 19.3 ಓವರ್‌ಗಳಲ್ಲಿ ಭಾರತ 199/5 ರನ್ ಗಳಿಸಿ 5 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. ಭಾರತದ ಇನಿಂಗ್ಸ್‌ನಲ್ಲಿ ಒಟ್ಟು 14 ಬೌಂಡರಿ ಮತ್ತು 9 ಸಿಕ್ಸರ್‌ಗಳು ದಾಖಲಾಗಿದ್ದವು. ಮಧ್ಯ ಕ್ರಮಾಂಕದಲ್ಲಿ ನಿರ್ಮಾಣವಾದ 70 ರನ್‌ಗಳ ಜೊತೆಯಾಟ ಈ ಗೆಲುವಿಗೆ ಪೂರಕವಾಯಿತು. ಬೌಲಿಂಗ್ ಮತ್ತು ಫೀಲ್ಡಿಂಗ್ ವಿಭಾಗದಲ್ಲಿಯೂ ತಂಡ ಉತ್ತಮ ಪ್ರದರ್ಶನ ನೀಡಿತು.

ಈ ಗೆಲುವಿನೊಂದಿಗೆ ಭಾರತ ಸೆಮಿಫೈನಲ್‌ಗೆ ಪ್ರವೇಶಿಸಿದೆ. ಆದರೆ ಈ ಜಯದ ನಿಜವಾದ ಹೀರೋ ಎಂದರೆ ಸಂಜು ಸ್ಯಾಮ್ಸನ್. ಒತ್ತಡದ ಕ್ಷಣದಲ್ಲಿ ಆತ್ಮವಿಶ್ವಾಸ ಕಳೆದುಕೊಳ್ಳದೆ, ತಂಡವನ್ನು ಬೆನ್ನಿಗೆ ಹೊತ್ತುಕೊಂಡು ಜಯದ ತೀರಕ್ಕೆ ತಲುಪಿಸಿದ ಅವರ ಹೋರಾಟ ಅಭಿಮಾನಿಗಳ ಮನದಲ್ಲಿ ದೀರ್ಘಕಾಲ ಉಳಿಯಲಿದೆ.


**ಈ ಪಂದ್ಯ ಕೇವಲ ಗೆಲುವಲ್ಲ;** ಇದು ನಾಯಕತ್ವ, ಧೈರ್ಯ ಮತ್ತು ಒಗ್ಗಟ್ಟಿನ ಪ್ರತೀಕವಾಗಿದೆ. ಈಗ ಭಾರತ ಸೆಮಿಫೈನಲ್‌ನಲ್ಲಿ ಇನ್ನಷ್ಟು ಶಕ್ತಿಯಾಗಿ ಕಣಕ್ಕಿಳಿಯಲು ಸಿದ್ಧವಾಗಿದೆ.

# ದಿನಕ್ಕೊಂದು ಮುಕ್ತಕ: 108

ಸಾಮಾಜಿಕ ಕಳಕಳಿ



**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ



*ದಿನದಲ್ಲಿ ಯೋಗವನು ಮಾಡುತಿರೆ ಚೆಂದವದು*
*ಸನಿಹದಲಿ ನೀರಿರಲು ದಣಿವಿರದಿರೆ*
*ಮುನಿಸದಲೆ ದೇಹಕದು ಬಾಗಿಸುತ ನಡೆದಿರಲು*
*ತನತನವ ತೋರುತಲಿ ಲಕ್ಷ್ಮಿ ದೇವಿ...*

**ಭಾವಾರ್ಥ:** ಈ ಮೇಲಿನ ಮುಕ್ತಕದಂತೆ ದಿನದಲ್ಲಿ ಯೋಗವನ್ನು ಮಾಡುತ್ತಿದ್ದರೆ ಚೆಂದವದುವೆ. ಮನಸ್ಸು ಶಾಂತಿಯಾಗಿರುತ್ತದೆ ಆರೋಗ್ಯ ಉತ್ತಮವಾಗಿರುತ್ತದೆ.ಯೋಗ ಮಾಡುವಾಗ ದಣಿವಿನಲಿ ಜೊತೆಗೆ ನೀರಿರಲು ದಣಿವು ಹೋಗುತ್ತದೆ. ಯಾವುದಕ್ಕೂ ಬೇಸರವಾಗದೆ ತನ್ನ ದೇಹವನ್ನು ಪ್ರೀತಿಯಲ್ಲಿ ಬಾಗಿಸುತ ಆರೋಗ್ಯ ಸರಿಪಡಿಸಿಕೊಳ್ಳುತ್ತಲಿ ಆರೋಗ್ಯ ಸರಿಯಾಗಿ ಇಟ್ಟುಕೊಳ್ಳಬೇಕು. ಎನ್ನುತ ನಡೆಯಬೇಕು.

ಯೋಗವನ್ನು ಮಾಡುತಲಿ ದೇಹಕ್ಕೆ ಆರೋಗ್ಯ ಸರಿಯಾಗಿ ಇಟ್ಟುಕೊಂಡು ಹೋಗಬಹುದು ಪ್ರತಿ ವರ್ಷ ವಿಶ್ವ ಯೋಗ ದಿನವನ್ನು ಜೂನ್ 21 ರಂದು ವಿಶ್ವದಾದ್ಯಂತ ಬಹಳ ಅದ್ದೂರಿಯಾಗಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಿಶ್ವಾದ್ಯಂತ ಹೆಚ್ಚಿನ ಜನರು ತಮ್ಮ ಮಾನಸಿಕ ಒತ್ತಡ ಮತ್ತು ದೈಹಿಕ ಸೌಂದರ್ಯಕ್ಕಾಗಿ ಯೋಗದ ಮೊರೆ ಹೋಗುತ್ತಿದ್ದಾರೆ. ಯೋಗವು ಮನಸ್ಸು ಮತ್ತು ದೇಹವನ್ನು ಸಂಪರ್ಕಿಸುವ ಪ್ರಾಚೀನ ಕಲೆಯಾಗಿದೆ. ಇಂತಹ ಪ್ರಾಚೀನ ಕಲೆಯನ್ನು ಪ್ರತಿಯೊಬ್ಬರು ಪಾಲಿಸುತ್ತಿದ್ದಾರೆ.




# ಹೋಳಿ


ಹೋಳಿಯ ಬಣ್ಣಗಳು
ಹಳದಿ ಸಂಭ್ರಮದ ಬಣ್ಣಗಳು
ಹಸಿರು ಸಮೃದ್ಧಿಯ ಬಣ್ಣಗಳು
ಕೇಸರಿ ನೇರಳೆ ಕೆಂಪು ನೀಲಿ ಬಣ್ಣಗಳು
ಈ ರಂಗು ರಂಗಿನ ಬಣ್ಣಗಳು
ರಂಗು ರಂಗಿನ ರಂಗೋಲಿಯಂತೆ
ರಂಗು ರಂಗಿನ ಕಾಮನಬಿಲ್ಲಿನಂತೆ
ಈ ಎಲ್ಲಾ ಬಣ್ಣ ಬಣ್ಣಗಳ ಹಬ್ಬ ಹೋಳಿ
ಬಣ್ಣ ತುಂಬುವ ಹಬ್ಬ ಹೋಳಿ
ಬಕೇಟ್ ನೀರಲಿ ಬಣ್ಣವು ತುಂಬಿಸಿ
ಬಣ್ಣದ ಹೋಳಿಯ ರಂಗು ಎರಚಿ
ರಂಗು ರಂಗಿನ ಬಣ್ಣಗಳಲ್ಲಿ
ನಮ್ಮ ಜೀವನ ರಂಗಾಗಿರಲ್ಲಿ
ಈ ಬಣ್ಣದ ಹೋಳಿಯ ಹಬ್ಬ
ಹೊಸ ಚೈತನ್ಯ ತುಂಬಿ ಬರಲ್ಲಿ
ಬಣ್ಣ ಬಣ್ಣದ ಕನಸುಗಳು ಹೊತ್ತು ತರಲ್ಲಿ

**– ವಿ.ಎಂ.ಎಸ್.ಗೋಪಿ**
**ಲೇಖಕರು**
**ಬೆಂಗಳೂರು.**



# ಮಿನಿ ಸ್ಟ್ರೋಕ್ ದಾಳಿ





ವಾಸ್ತವದಲ್ಲಿ, ಟಿಐಎ ಮತ್ತು ಪಾರ್ಶ್ವವಾಯು ಮೂಲಭೂತವಾಗಿ ಒಂದೇ ಆಗಿರುತ್ತವೆ – ಮೆದುಳಿನ ಒಂದು ಭಾಗಕ್ಕೆ ರಕ್ತದ ಹರಿವನ್ನು ಅಡ್ಡಿಪಡಿಸುವ ಹೆಪ್ಪುಗಟ್ಟುವಿಕೆ ಅಥವಾ ರಕ್ತಸ್ರಾವ. ಒಂದೇ ವ್ಯತ್ಯಾಸವೆಂದರೆ ಟಿಐಎಯೊಂದಿಗೆ, ಅಡಚಣೆ ಮತ್ತು ಅದು ಉಂಟುಮಾಡುವ ಲಕ್ಷಣಗಳು ತಾತ್ಕಾಲಿಕವಾಗಿರುತ್ತವೆ.

ಆದಾಗ್ಯೂ, ಟಿಐಎ ನಿಜವಾದ ಪಾರ್ಶ್ವವಾಯುವಿಗೆ ದಾರಿ ಮಾಡಿಕೊಡುತ್ತದೆ. ಟಿಐಎ ಅನುಭವಿಸುವ ಸುಮಾರು ಮೂರನೇ ಒಂದು ಭಾಗದಷ್ಟು ಜನರು ಒಂದು ವರ್ಷದೊಳಗೆ ದೊಡ್ಡ ಪಾರ್ಶ್ವವಾಯುವಿಗೆ ಒಳಗಾಗುತ್ತಾರೆ.

ಅಸ್ಥಿರ ಇಸ್ಕೆಮಿಕ್ ದಾಳಿಯು ತಾತ್ಕಾಲಿಕ ಪಾರ್ಶ್ವವಾಯುವಿನಂತಿದೆ. ಇದರರ್ಥ ನಿಮ್ಮ ಮೆದುಳಿನ ಒಂದು ಭಾಗಕ್ಕೆ ತಾತ್ಕಾಲಿಕ (ಅಸ್ಥಿರ) ರಕ್ತದ ಹರಿವಿನ ಕೊರತೆ ಇರುತ್ತದೆ. ರಕ್ತದ ಹರಿವು ಇಲ್ಲದೆ, ಮೆದುಳಿನ ಕೋಶಗಳು ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ಸಾಯಲು ಪ್ರಾರಂಭಿಸುತ್ತವೆ (ಇಸ್ಕೆಮಿಯಾ).

ಸಾಮಾನ್ಯವಾಗಿ TIA ಎಂದು ಸಂಕ್ಷಿಪ್ತವಾಗಿ ಹೇಳುವುದಾದರೆ, ಅಸ್ಥಿರ ಇಸ್ಕೆಮಿಕ್ ದಾಳಿಯು ವೈದ್ಯಕೀಯ ತುರ್ತುಸ್ಥಿತಿಯಾಗಿದ್ದು, ಇದು ಇಸ್ಕೆಮಿಕ್ ಪಾರ್ಶ್ವವಾಯುವಿಗೆ ಹೋಲುತ್ತದೆ. ಎರಡರ ಲಕ್ಷಣಗಳು ಒಂದೇ ಆಗಿರುತ್ತವೆ, ಆದರೆ TIA ಲಕ್ಷಣಗಳು 24 ಗಂಟೆಗಳಲ್ಲಿ ನಿವಾರಣೆಯಾಗುತ್ತವೆ, ಹೆಚ್ಚಿನವು ನಿಮಿಷಗಳಲ್ಲಿ ನಿವಾರಣೆಯಾಗುತ್ತದೆ.

## ಅಸ್ಥಿರ ಇಸ್ಕೆಮಿಕ್ ಅಟ್ಯಾಕ್‌ನ ಲಕ್ಷಣಗಳು

- **ಇದ್ದಕ್ಕಿದ್ದಂತೆ ಮುಖ, ತೋಳು ಅಥವಾ ಕಾಲಿನಲ್ಲಿ ದೌರ್ಬಲ್ಯ, ಮರಗಟ್ಟುವಿಕೆ ಅಥವಾ ಪಾರ್ಶ್ವವಾಯು, ಸಾಮಾನ್ಯವಾಗಿ ದೇಹದ ಒಂದು ಬದಿಯಲ್ಲಿ ಪಾರ್ಶ್ವವಾಯು.**
- **ಮಂದವಾದ ಮಾತು ಅಥವಾ ಇತರರನ್ನು ಅರ್ಥಮಾಡಿಕೊಳ್ಳುವಲ್ಲಿ ತೊಂದರೆ.**
- **ಒಂದು ಅಥವಾ ಎರಡೂ ಕಣ್ಣುಗಳಲ್ಲಿ ಕುರುಡುತನ.**
- **ತಲೆತಿರುಗುವಿಕೆ ಅಥವಾ ಸಮತೋಲನದ ನಷ್ಟ.**
- **ಅಸ್ಥಿರ ಇಸ್ಕೆಮಿಕ್ ಅಟ್ಯಾಕ್ ಅಥವಾ ಮಿನಿ ಸ್ಟ್ರೋಕ್ ಮೆದುಳಿನ ಒಂದು ಭಾಗಕ್ಕೆ ರಕ್ತ ಪೂರೈಕೆಯಲ್ಲಿ ತಾತ್ಕಾಲಿಕ ಅಡಚಣೆಯಿಂದ ಉಂಟಾಗುತ್ತದೆ.**
- **ರಕ್ತ ಪೂರೈಕೆಯಲ್ಲಿನ ಅಡಚಣೆಯು ಮೆದುಳಿಗೆ ಆಮ್ಲಜನಕದ ಕೊರತೆಗೆ ಕಾರಣವಾಗುತ್ತದೆ.**

**ಅಸ್ಥಿರ ರಕ್ತಕೊರತೆಯ ದಾಳಿಗೆ ಕಾರಣಗಳು**

ಅಸ್ಥಿರ ಇಸ್ಕೆಮಿಕ್ ದಾಳಿಗಳು ಮತ್ತು ಇಸ್ಕೆಮಿಕ್ ಪಾರ್ಶ್ವವಾಯುಗಳು ಒಂದೇ ಕಾರಣಗಳಿಗಾಗಿ ಸಂಭವಿಸುತ್ತವೆ.

ನಿಮ್ಮ ಮೆದುಳಿನಲ್ಲಿ ಹೆಪ್ಪುಗಟ್ಟುವಿಕೆಯ ರಚನೆ (ಥ್ರಂಬೋಸಿಸ್).

ನಿಮ್ಮ ದೇಹದಲ್ಲಿ ಬೇರೆಡೆ ರೂಪುಗೊಂಡ ಹೆಪ್ಪುಗಟ್ಟುವಿಕೆಯ ಒಂದು ತುಣುಕು ಮುಕ್ತವಾಗಿ ನಿಮ್ಮ ರಕ್ತನಾಳಗಳ ಮೂಲಕ ಚಲಿಸುತ್ತದೆ, ಅದು ನಿಮ್ಮ ಮೆದುಳಿನಲ್ಲಿ ಸಿಲುಕಿಕೊಳ್ಳುವವರೆಗೆ (ಥ್ರಂಬೋಎಂಬೊಲಿಸಮ್).

ಸಣ್ಣ ನಾಳೀಯ ಅಡಚಣೆ (ಲ್ಯಾಕುನಾರ್ ಸ್ಟ್ರೋಕ್).

ಕ್ರಿಪ್ಟೋಜೆನಿಕ್ TIA ಅಂದರೆ ಇವು ಅಜ್ಞಾತ ಕಾರಣದೊಂದಿಗೆ ಸಂಭವಿಸುವ ಕಾರಣ.

ಕ್ಷಣಿಕ ರಕ್ತಕೊರತೆಯ ದಾಳಿಯ ಸಮಯದಲ್ಲಿ (TIA), ನಿಮ್ಮ ಮೆದುಳಿಗೆ ಆಮ್ಲಜನಕ–ಭರಿತ ರಕ್ತವನ್ನು ಪೂರೈಸುವ ರಕ್ತನಾಳಗಳಲ್ಲಿ ಒಂದು ನಿರ್ಬಂಧಿಸಲ್ಪಡುತ್ತದೆ.

## ಮಿನಿ ಸ್ಟ್ರೋಕ್ ತಡೆಗಟ್ಟುವುದು ಹೇಗೆ?

ಕ್ಷಣಿಕ ರಕ್ತಕೊರತೆಯ ದಾಳಿ ಸಾಮಾನ್ಯವಾಗಿ ಇನ್ನೊಂದನ್ನು ಅನುಸರಿಸಬಹುದಾದ ಸಂಕೇತವಾಗಿದೆ ಮತ್ತು ನೀವು ಮುಂದಿನ ದಿನಗಳಲ್ಲಿ ಪೂರ್ಣ, ಮಾರಣಾಂತಿಕ ಪಾರ್ಶ್ವವಾಯು ಹೊಂದುವ ಹೆಚ್ಚಿನ ಅಪಾಯವನ್ನು ಹೊಂದಿರುತ್ತೀರಿ. ನೀವು ಹಿಂದೆ TIAಅಥವಾ ಪಾರ್ಶ್ವವಾಯು ಹೊಂದಿದ್ದರೂ ಸಹ, ಭವಿಷ್ಯದಲ್ಲಿ ಅವು ಬರುವ ಅಪಾಯವನ್ನು ಕಡಿಮೆ ಮಾಡಲು ಹಾರ್ವರ್ಡ್ ಹೆಲ್ತ್ ಕೆಲವೊಂದು ಉಪಾಯಗಳನ್ನು ತಿಳಿಸಿದೆ.

- **ರಕ್ತದೊತ್ತಡವನ್ನು ಕಂಟ್ರೋಲ್‌ನಲ್ಲಿಡಿ**
- **ಹೃತ್ಕರ್ಣದ ಕಂಪನಕ್ಕೆ ಚಿಕಿತ್ಸೆ ನೀಡಿ**
- **ಮಧುಮೇಹಕ್ಕೆ ಚಿಕಿತ್ಸೆ ಪಡೆಯಿರಿ**
- **ಹೆಚ್ಚು ವ್ಯಾಯಾಮ ಮಾಡಿ**
- **ಧೂಮಪಾನ ತ್ಯಜಿಸಿ**

**ಮಿನಿ ಸ್ಟ್ರೋಕ್ ದಾಳಿಗೆ ಚಿಕಿತ್ಸೆ ಏನು?**

ಕ್ಷಣಿಕ ರಕ್ತಕೊರತೆಯ ದಾಳಿಯ (TIA) ಲಕ್ಷಣಗಳು ಕೆಲವು ನಿಮಿಷಗಳು ಅಥವಾ ಗಂಟೆಗಳಲ್ಲಿ ಪರಿಹರಿಸಿದರೂ, ಭವಿಷ್ಯದಲ್ಲಿ ಮತ್ತೊಂದು TIA ಅಥವಾ ಪೂರ್ಣ ಪಾರ್ಶ್ವವಾಯು ಸಂಭವಿಸುವುದನ್ನು ತಡೆಯಲು ನಿಮಗೆ ಚಿಕಿತ್ಸೆಯ ಅಗತ್ಯವಿರುತ್ತದೆ. ಚಿಕಿತ್ಸೆಯು ನಿಮ್ಮ ವಯಸ್ಸು ಮತ್ತು ವೈದ್ಯಕೀಯ ಇತಿಹಾಸದಂತಹ ನಿಮ್ಮ ವೈಯಕ್ತಿಕ ಸಂದರ್ಭಗಳನ್ನು ಅವಲಂಬಿಸಿರುತ್ತದೆ. ಕ್ಷಣಿಕ ರಕ್ತಕೊರತೆಯ ದಾಳಿಯ ಲಕ್ಷಣಗಳು ಕೆಲವು ನಿಮಿಷಗಳು ಅಥವಾ ಗಂಟೆಗಳಲ್ಲಿ ಪರಿಹರಿಸಿದರೂ, ಭವಿಷ್ಯದಲ್ಲಿ ಮತ್ತೊಂದು TIA ಅಥವಾ ಪೂರ್ಣ ಪಾರ್ಶ್ವವಾಯು ಸಂಭವಿಸುವುದನ್ನು ತಡೆಯಲು ನಿಮಗೆ ಚಿಕಿತ್ಸೆಯ ಅಗತ್ಯವಿರುತ್ತದೆ.

# ಕ್ರ.ಸಂ.74ಕ್ಕೆ ಮತನೀಡಿ ಬಹುಮತದಿಂದ ಗೆಲ್ಲಿಸುವಂತೆ ಮನವಿ

## ರಾಜ್ಯ ವಕೀಲರ ಸಂಘದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸರ್ಕಾರ ವರ್ಷಕ್ಕೆ 20ಕೋಟಿ ಅನುದಾನ ನೀಡಲು: ಎಂ.ಎ.ಮುಲ್ಲಾ ಒತ್ತಾಯ

• ಉದಯವಾಹಿನಿ,ಚಿಂಚೋಳಿ

ರಾಜ್ಯದಲ್ಲಿ ಸಂವಿಧಾನದ 03ನೇ ಅಂಗವಾಗಿರುವ 72ಸಾವಿರ ವಕೀಲರಿದ್ದು ಸರ್ಕಾರದಿಂದ ಯಾವುದೇ ಅನುದಾನ,ಸವಲತ್ತುಗಳಿಲ್ಲದೆ ಬಹಳಷ್ಟು ಸಂಕಷ್ಟದಲ್ಲಿದ್ದಾರೆ ಹಾಗಾಗಿ ನನ್ನನ್ನು ವಕೀಲ ಮತದಾರರು ಗೆಲ್ಲಿಸಿದರೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ವಕೀಲರ ಬೆನ್ನಲುಬಾಗಿ ನಿಲ್ಲುತ್ತೇನೆ ಎಂದು ರಾಜ್ಯ ವಕೀಲರ ಪರಿಷತ್ ಚುನಾವಣೆಗೆ ಸ್ವರ್ಧಿಸಿ ಅಭ್ಯರ್ಥಿ ಮಹ್ಮದಸಾ ಎ.ಮುಲ್ಲಾ ಹೇಳಿದರು.

ಪಟ್ಟಣದ ನ್ಯಾಯಾಲಯದ ತಾಲ್ಲೂಕಾ ವಕೀಲರ ಸಂಘದ ಕಛೇರಿಗೆ ಭೇಟಿಯಾಗಿ ವಕೀಲ ಮತದಾರರಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು,ಈಗಾಗಲೇ 23ಕೋಟಿ ರೂ.ರಾಜ್ಯ ವಕೀಲರ ಪರಿಷತ್‌ನಲ್ಲಿ ಎಫ್‌ಡಿಇದೆ, 30ಕೋಟಿ ರೂ.ಜನರೇಟ್ ಆಗುತ್ತಿದೆ,153ಕೋಟಿ ರೂ.ರಾಜ್ಯ ವಕೀಲರ ಸಂಘದಲ್ಲಿದ್ದು ಇದರಿಂದ ರಾಜ್ಯದ ವಕೀಲರಿಗೆ ಹಾಲಿ ಇರುವ ವಕೀಲ ಸಂಘದ ರಾಜ್ಯಾಧ್ಯಕ್ಷರು ಪದಾಧಿಕಾರಿಗಳು ಯಾವುದೇ ಸೌಲಭ್ಯಗಳನ್ನು ನೀಡದೆ ಇರುವುದು ನೋವಿನ ಸಂಗತಿಯಾಗಿದೆ.

ಈಗಾಗಲೇ ನಾನು ವಕೀಲರ ಪರಿಷತ್ ಚುನಾವಣೆಗೆ ಸ್ವರ್ಧೆ ಮಾಡಿದ್ದು ಕ್ರಮ ಸಂಖ್ಯೆ 74ಇದ್ದು ನನಗೆ ಮೊದಲ ಪ್ರಾಶಸ್ತ್ಯ ಮತನೀಡಿ ಪ್ರಚಂಡ ಬಹುಮತದಿಂದ ಗೆಲ್ಲಿಸಿದರೆ ಮುಂಬರುವ ದಿನಗಳಲ್ಲಿ ರಾಜ್ಯದ ವಕೀಲರಿಗೆ ಯಾವುದೇ ಅನಾಹುತವಾದರೆ ಕನಿಷ್ಠ 10ಲಕ್ಷ ವಿಮೆ,10ಲಕ್ಷ ಪರಿಹಾರ ರೂಪದಲ್ಲಿ ನೀಡುವಂತೆ ಯೋಜನೆ ರೂಪಿಸಲಾಗುವುದು, ಸರ್ಕಾರದಿಂದ ರಾಜ್ಯ ಸಂಘಕ್ಕೆ ವರ್ಷಕ್ಕೆ 20ಕೋಟಿ ರೂ.ಅನುದಾನ ನೀಡುವಂತೆ ಒತ್ತಾಯಿಸಲಾಗುವುದು. ಬೆಂಗಳೂರು ಸುತ್ತಮುತ್ತಲಿನ ನ್ಯಾಯಾಲಯಗಳ ವಕೀಲರ ಪರಿಸ್ಥಿತಿ ಚನ್ನಾಗಿದೆ ಆದರೆ ತಾಲ್ಲೂಕಾ ಮಟ್ಟದ ವಕೀಲರ ಪರಿಸ್ಥಿತಿ ಬಹಳಷ್ಟು ಸಂಕಷ್ಟದಲ್ಲಿದೆ ಹಾಗಾಗಿ ತಾಲ್ಲೂಕಾ ವಕೀಲರ ಸಂಘದ ಸದಸ್ಯರಿಗೆ ಮೂಲಭೂತ ಸೌಕರ್ಯ ದೊರಕಿಸಿಕೊಡುವುದು ಮತ್ತು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ದೊರಕಿಸಿಕೊಡು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ. ವಕೀಲರಿಗೆ ಯಾವುದೇ ಅನಾಹುತವಾದರೆ ವಕೀಲರಿಗೆ ಮತ್ತು ಅವರ ಕುಟುಂಬಕ್ಕೆ ವಕೀಲರ ಸಂಘದಿಂದಾಗಲಿ ಸರ್ಕಾರದಿಂದಾಗಲಿ ಯಾವುದೇ ಒಂದು ರೂ.ಸಹಾಯಧನ ಸೌಲಭ್ಯ ವಿಲ್ಲ,ವಕೀಲರ ಸ್ಥಿತಿ ಗಂಭೀರ ಸ್ಥಿತಿಯಲ್ಲಿದೆ ಹಾಗಾಗಿ ನನ್ನನ್ನು ವಕೀಲ ಮತದಾರ ಪ್ರಭುಗಳು ಪ್ರಚಂಡ ಬಹುತದಿಂದ ಗೆಲ್ಲಿಸಿದರೆ ವಕೀಲ ಧ್ವನಿಯಾಗಿ ಕೆಲಸ ಮಾಡಿ ಸೌಲಭ್ಯಗಳನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಹಿರಿಯ ವಕೀಲರು ಶಿವಶರಣಪ್ಪ ಜಾಪಟ್ಟಿ,ಶ್ರೀಮಂತ ಕಟ್ಟಿಮನಿ,ಚಂದ್ರಶೇಖರ ಮಾಲಸಾ,ಸೂರ್ಯಕಾಂತ ಚಿಂಚೋಳಿಕರ್ ಮಾತನಾಡಿದರು.

ಈ ಸಂದರ್ಭದಲ್ಲಿ ವಕೀಲರಾದ ಮಲ್ಲಿಕಾರ್ಜುನ ಕೋಟಪಳ್ಳಿ, ಸೂರ್ಯಕಾಂತ ಗಾರಂಪಳ್ಳಿ, ಮಲ್ಲಿಕಾರ್ಜುನ ರಾಮತೀರ್ಥ, ಮಲ್ಲಿಕಾರ್ಜುನ ಅಲ್ಲಾಪೂರ, ಸಾಯಬಣ್ಣ, ರಾಮಲಿಂಗ, ಸೂರ್ಯಕಾಂತ ಕುಡ್ಡಳ್ಳಿ, ಉಮೇಶ ಪಾಟೀಲ, ಸಂಜೀವಕುಮಾರ, ಜಗನ್ನಾಥ ಕಳಸ್ಕರ, ಜಗನ್ನಾಥ ಗಂಜಗಿರಿ, ಜಿಕೆ ಗೋಖಲೆ, ಶಾಮರಾವ, ಕೆಎಂಬಾರಿ ಅನೇಕರಿದ್ದರು.

ಉದಯವಾಹಿನಿ ಚಿತ್ರ



**ನನಗೆ ಮೊದಲ ಪ್ರಾಶಸ್ತ್ಯ ಮತನೀಡಿ**

### ಶಾಸಕರಾಗಿ ನೇಮಿಸುವಂತೆ ಒತ್ತಡ

**ರಾಜ್ಯ ಸರ್ಕಾರರವು ಶಿಕ್ಷಕರ ಕ್ಷೇತ್ರದ ಎಂಎಲ್ಸಿ ಆಯ್ಕೆ ಮಾಡುವಂತೆ ವಕೀಲರ ಪರಿಷತ್ತುಗೂ ಒಬ್ಬ ಎಂಎಲ್ಸಿ ನೇಮಿಸಿದರೆ ವಕೀಲರ ಸಮಸ್ಯೆ ವಿಧಾನಸೌಧದಲ್ಲಿ ಚರ್ಚೆ ಮಾಡುತ್ತಾರೆ ಹಾಗಾಗಿ ವಕೀಲರ ಪರಿಷತ್ತು ಸ್ಥಾಪಿಸಿ ಚುನಾವಣೆ ನಡೆಸಿ ಶಾಸಕರಾಗಿ ನೇಮಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕುತ್ತೇನೆ.**

# ವಿಜ್ಞಾನ ವಸ್ತು ಪ್ರದರ್ಶನ

• ಉದಯವಾಹಿನಿ, ಬಾದಾಮಿ

ವಿಜ್ಞಾನದ ವಿಸ್ಮಯಗಳು ನಮ್ಮ ಜಗತ್ತನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ. ವಿಜ್ಞಾನಿಗಳನ್ನು ಬೆಂಬಲಿಸಿ, ವೈಜ್ಞಾನಿಕ ಅನ್ವೇಷಣೆಯ ಜಗತ್ತನ್ನು ಅರಿಯಲು ಅವರಿಗೆ ಅವಕಾಶ ಒದಗಿಸಬೇಕು. ವೈಜ್ಞಾನಿಕ ಮನೋಭಾವ ಬೆಳೆಸುವ ಮೂಲಕ ಆವಿಷ್ಕಾರಗಳು ಜ್ಞಾನ ಕೇಂದ್ರಿತ ಭವ್ಯ ಭವಿಷ್ಯ ನಿರ್ಮಿಸಲು ಸಾಧ್ಯವಿದೆ ಎಂದು ಬಿಇಒ ಕಚೇರಿಯ ಶಿಕ್ಷಣ ಸಂಯೋಜಕ ಬಿ.ಟಿ.ಹಳ್ಳಿ ಹೇಳಿದರು. ಅವರು ತಾಲ್ಲೂಕಿನ ಖ್ಯಾಡ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ಭಾರತೀಯ ವಿಜ್ಞಾನ ದಿನದ ಸಂದರ್ಭದಲ್ಲಿ ಎಲ್ಲರೂ ಒಂದಾಗಿ ವಿಜ್ಞಾನವನ್ನು ಸಂಭ್ರಮಿಸಿ, ಜಗತ್ತಿನ ವಿಸ್ಮಯಗಳನ್ನು ಅರಿತುಕೊಳ್ಳಲು ಮಾನವ ಜನಾಂಗಕ್ಕೆ ನೆರವಾಗಬಲ್ಲ ಹೊಸ ಅನ್ವೇಷಣೆಗಳನ್ನು ನಡೆಸಲು ಮುಂದಿನ ತಲೆಮಾರುಗಳಿಗೆ ಸ್ಫೂರ್ತಿ ನೀಡುವ ಅಗತ್ಯತೆಯಿದೆ. ಸರ್ ಸಿ.ವಿ.ರಾಮನ್ ಅವರು ಸಂಶೋಧಿಸಿದ ರಾಮನ್ ಪರಿಣಾಮ ಒಂದು ಅಸಾಧಾರಣ ವೈಜ್ಞಾನಿಕ ಅನ್ವೇಷಣೆಯಾಗಿದ್ದು, ಭೌತಶಾಸ್ತ್ರದ ಕ್ಷೇತ್ರದಲ್ಲಿ ಅತ್ಯಂತ ಮಹತ್ತರವಾದ ಪ್ರಭಾವವನ್ನು ಬೀರಿದೆ. ವಿಜ್ಞಾನ ಕ್ಷೇತ್ರಕ್ಕೆ ಸರ್ ಸಿ.ವಿ.ರಾಮನ್ ಅವರ ಕೊಡುಗೆಯನ್ನು ಗುರುತಿಸಿ, ಈ ಅನ್ವೇಷಣೆಗೆ ಅವರ ಹೆಸರನ್ನಿಟ್ಟು ಗೌರವಿಸಲಾಗಿದೆ. ರಾಮನ್ ಪರಿಣಾಮ ಹೇಗೆ ಬೆಳಕು ಯಾವುದಾದರೂ ವಸ್ತುವಿನೊಡನೆ ಪ್ರತಿಕ್ರಿಯಿಸಿದಾಗ ಚದುರುತ್ತದೆ ಎಂಬುದನ್ನು ವಿವರಿಸುತ್ತದೆ.

ಸರ್ ಸಿವಿ ರಾಮನ್ ಅವರು 1928ರಲ್ಲಿ ರಾಮನ್ ಪರಿಣಾಮ ಪ್ರಸ್ತುತ ಪಡಿಸಿದ ಸವಿ ನೆನಪಿಗಾಗಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸುತ್ತಾರೆ. ಎಂದು ಹೇಳಿದರು. ಶಾಲೆಯ ಸಹ ಶಿಕ್ಷಕ ಎಚ್. ಎಂ.ತಾಳಿಕೋಟಿ ಇವರು ಮಾತನಾಡಿ ಮಕ್ಕಳು ವಿಜ್ಞಾನದ ಉಪಯೋಗಗಳನ್ನು ತಿಳಿದುಕೊಳ್ಳಬೇಕು ಹಾಗೂ ವಿಜ್ಞಾನವು ವ್ಯವಸ್ಥಿತವಾಗಿರುವ ಒಂದು ಅಧ್ಯಯನದ ಸ್ವರೂಪವಾಗಿದೆ ಹಿಂದಿನ ಕಾಲದಲ್ಲಿ ಅನುಸರಿಸುತ್ತಾ ಬಂದ ಸಂಪ್ರದಾಯಗಳೇ ಇಂದು ಮೂಢನಂಬಿಕೆಗಳಾಗಿವೆ. ಅಂತಹುಗಳನ್ನು ತೊಲಗಿಸಿ ವೈಜ್ಞಾನಿಕ ನೆಲೆಗಟ್ಟಿನಲ್ಲಿ ವಿಚಾರವನ್ನು ಅಳವಡಿಸಿಕೊಂಡಾಗ ಮಾತ್ರ ಉತ್ತಮ ಸಮಾಜವನ್ನು ನಿರ್ಮಿಸಬಹುದು ಎಂದು ತಿಳಿಸಿದರು. ಶಾಲೆಯ ವಿದ್ಯಾರ್ಥಿಗಳು ವಿಜ್ಞಾನ ದಿನಾಚರಣೆಯ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಮುಖ್ಯ ಶಿಕ್ಷಕ ಎ.ಎಂ ಗೌಡರ ಸ್ವಾಗತಿಸಿದರು. ಸಹಶಿಕ್ಷಕ ಅರವಿಂದ್ ಅಣ್ಣಿಗೇರಿ ನಿರೂಪಿಸಿ, ವಂದಿಸಿದರು. ಈ ಸಂದರ್ಭದಲ್ಲಿ ಎಲ್ಲಾ ಶಿಕ್ಷಕ ಬಂಧುಗಳು ಉಪಸ್ಥಿತರಿದ್ದರು ವಿದ್ಯಾರ್ಥಿಗಳು ವಿವಿಧ ಪ್ರಾಯೋಗಿಕ ಮಾದರಿಗಳನ್ನು ಪ್ರದರ್ಶನ ಮಾಡಿದರು.



ಉದಯವಾಹಿನಿ ಚಿತ್ರ

# ಮಧ್ಯ ಪೂರ್ವದಲ್ಲಿ ಯುದ್ಧ ಪರಿಸ್ಥಿತಿ ಸಹಾಯವಾಣಿ ಸಂಪರ್ಕಿಸಿ

• ಉದಯವಾಹಿನಿ, ಕಲಬುರಗಿ

ಮಧ್ಯ ಪ್ರಾಚ್ಯ, ಕೊಲ್ಲಿ ದೇಶಗಳಲ್ಲಿ ಯುದ್ಧ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸಿರುವ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಆರಂಭಿಸಿರುವ ಸಹಾಯವಾಣಿಗಳ ಸಹಾಯ ಪಡೆಯುವಂತೆ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ. ಈ ಕುರಿತಂತೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು ಕರ್ನಾಟಕ ಸೇರಿಂದತೆ ಕಲಬುರಗಿಯ ಹಲವರು ಸಿಲುಕಿಕೊಂಡಿರುವ ಮಾಹಿತಿಯಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಪ್ರಸ್ತುತ ನೆಲೆಸಿರುವ ಕಲಬುರಗಿ ಜಿಲ್ಲೆಯ ನಿವಾಸಿಗಳು, ಸಹಾಯದ ಅಗತ್ಯವಿರುವವರು ಆಯಾ ಭಾರತೀಯ ರಾಯಭಾರ ಕಚೇರಿಗಳ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ರಾಯಭಾರ ಕಚೇರಿ ಅವರೊಂದಿಗೆ ಸಂಪರ್ಕದಲ್ಲಿರಲು, ಸಾರಥಿ ಸಹಾಯತಾ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಅನುಸರಿಸಲು ವಿನಂತಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿಕೊಂಡಿದಲ್ಲಿ ಅಂತಹವರುಗಳ ಮಾಹಿತಿಯನ್ನು ಸಂಬಂಧಿಸಿದವರು ಜಿಲ್ಲಾ ವಿಪತ್ತು ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ 08472-278677 ಹಾಗೂ ಪೊಲೀಸ್ ಕಂಟ್ರೋಲ್ ಸಂಖ್ಯೆ 94808 05500, 9480803500, 08472-263604, 228 112ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಮಟ್ಕಾ ಬರೆಯುತ್ತಿದ್ದವನನ್ನು ಹಿಡಿದುಕೊಟ್ಟ ಶಾಸಕ ರುದ್ರಪ್ಪ ಲಮಾಣಿ: ಪಿಎಸ್‌ಐ ಮೇಲೆ ಗರಂ

• ಉದಯವಾಹಿನಿ, ಗುತ್ತಲ

ಪಟ್ಟಣದ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯ ಸಮೀಪದಲ್ಲಿಯೇ ಕೊಠಡಿಯೊಂದರಲ್ಲಿ ಮಟ್ಕಾ ಬರೆಯುತ್ತಿದ್ದಾರೆ. ಇದನ್ನು ಯಾರೊಬ್ಬರೂ ತಡೆಯುತ್ತಿಲ್ಲ' ಎಂದು ಆರೋಪಿಸಿ ಸ್ಥಳೀಯ ಮಹಿಳೆಯರು ಶಾಸಕ ರುದ್ರಪ್ಪ ಲಮಾಣಿ ಅವರಿಗೆ ಸೋಮವಾರ ಮುತ್ತಿಗೆ ಹಾಕಿದರು. ಇದರಿಂದ ಎಚ್ಚೆತ್ತ ರುದ್ರಪ್ಪ ಲಮಾಣಿ, ಕೊಠಡಿ ಮೇಲೆ ದಾಳಿ ಮಾಡಿ ಮಟ್ಕಾ ಬರೆಯುತ್ತಿದ್ದ ವ್ಯಕ್ತಿಯೊಬ್ಬನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಟ್ಟಣದಲ್ಲಿರುವ ನಾಡ ಕಚೇರಿ ಉದ್ಘಾಟನೆ, ಪಟ್ಟಣ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ರುದ್ರಪ್ಪ ಲಮಾಣಿ ಮತ್ತು ತಹಶೀಲ್ದಾರ ಶರಣಮ್ಮ ಬಂದಿದ್ದರು. ಅವರನ್ನು ಅಡ್ಡಗಟ್ಟಿದ್ದ ಮಹಿಳೆಯರು, ಮೀನು, ಮಾಂಸದಂಗಡಿಯವರು ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ದುರ್ವಾಸನೆ ಬರುತ್ತಿದೆ. ಅದನ್ನು ತಿನ್ನಲು ಬರುವ ನಾಯಿಗಳು ಮಕ್ಕಳ ಮೇಲೆ ದಾಳಿ ಮಾಡುತ್ತಿವೆ. ಇದರ ನಡುವೆಯೇ ಮಟ್ಕಾ ಹಾವಳಿ ಹೆಚ್ಚಾಗಿದೆ ಎಂದು ಅಳಲು ತೋಡಿಕೊಂಡಿದ್ದರು. ಮಹಿಳೆಯರನ್ನು ಸಮಾಧಾನಪಡಿಸಿದ ಶಾಸಕ, ಕೊಠಡಿಗೆ ಲಗ್ಗೆ ಇಟ್ಟರು. ಅವರ ಎದುರೇ ವ್ಯಕ್ತಿ ರಾಜಾರೋಷವಾಗಿ ಮಟ್ಕಾ (ಒ.ಸಿ.) ಬರೆದುಕೊಳ್ಳುತ್ತಿದ್ದ. ಅದನ್ನು ಕಂಡು ಗರಂ ಆದ ಶಾಸಕ, ಪಿಎಸ್‌ಐಗೆ ಕರೆ ಮಾಡಿ ಕರೆಸಿಕೊಂಡರು. ಅವರನ್ನೂ ತರಾಟೆಗೆ ತೆಗೆದುಕೊಂಡು, ವ್ಯಕ್ತಿಯನ್ನು ವಶಕ್ಕೆ ಒಪ್ಪಿಸಿದರು.



ಉದಯವಾಹಿನಿ ಚಿತ್ರ

# ಚನ್ನಮ್ಮ ಸಮಾಧಿ ಉದ್ಘಾಟನೆ ವಿವಾದ: ಮಾ.9ರಂದು ಬೈಲಹೊಂಗಲ ಬಂದ್

• ಉದಯವಾಹಿನಿ, ಬೈಲಹೊಂಗಲ

ವೀರರಾಣಿ ಕಿತ್ತೂರು ಚನ್ನಮ್ಮ ನವಿಕೃತ ಸಮಾಧಿ ಸ್ಥಳ ಹಾಗೂ ಉದ್ಯಾನವನ್ನು ಯಾರಿಗೂ ತಿಳಿಸದೆ ತರಾತುರಿಯಲ್ಲಿ ಉದ್ಘಾಟನೆ ಮಾಡಿರುವ ಶಾಸಕ ಮಹಾಂತೇಶ ಕೌಜಲಗಿ ಅವರ ನಡೆ ಖಂಡಿಸಿ ವಿವಿಧ ಕನ್ನಡಪರ ಸಂಘಟನೆ, ರೈತ ಸಂಘಟನೆಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ನಾಡಿನ ಹಿರಿಯರು, ಮುಖಂಡರ ನೇತೃತ್ವದಲ್ಲಿ ಮಾ.9ರಂದು ಬೈಲಹೊಂಗಲ ಸಂಪೂರ್ಣ ಬಂದ್ ಕರೆ ನೀಡಲಾಗಿದೆ ಎಂದು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಹೇಳಿದರು.

ನಗರದ ವಿದ್ಯಾನಗರದ ಅವರ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು. ಚನ್ನಮ್ಮ ಸಮಾಧಿ ಸ್ಥಳ ಅಭಿವೃದ್ಧಿಗೆ ಸರ್ಕಾರದಿಂದ 5 ಕೋಟಿ ಅನುದಾನ ಒದಗಿಸಲಾಗಿದೆ ಆದರೆ ಅದರಲ್ಲಿ ಒಂದು ಕೋಟಿಯೂ ಖರ್ಚು ಮಾಡಿಲ್ಲ. ದುಡ್ಡು ಹೊಡೆದ ವಿಷಯ ಜನರಿಗೆ ಗೊತ್ತಾಗಬಾರದು ಎಂಬ ದುರುದ್ದೇಶದಿಂದ 50 ಹಾಸಿಗೆಗಳ ತೀವ್ರ ನಿಗಾ ಘಟಕ ನಿರ್ಮಾಣ ಕಾಮಗಾರಿ ಶಂಕುಸ್ಥಾಪನೆ ಸಮಾರಂಭಕ್ಕೆ ಆಗಮಿಸಿದ್ದ ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅವರಿಂದ ನವೀಕೃತ ಚನ್ನಮ್ಮನ ಸಮಾಧಿ ಸ್ಥಳ, ಉದ್ಯಾನ ಉದ್ಘಾಟನೆ ಮಾಡಿಸಿದ್ದಾರೆ. ಸರ್ಕಾರಿ ನಿಯಮಾನುಸಾರ ಆಮಂತ್ರಣ ಪತ್ರಿಕೆ ಮುದ್ರಣ ಮಾಡಿಲ್ಲ. ಭವ್ಯ ವೇದಿಕೆ ಹಾಕಿಲ್ಲ. ನಂದಗಡದಲ್ಲಿ ಹೇಗೆ ಸಿಎಂ ಸಿದ್ದರಾಮಯ್ಯ ಅವರಿಂದ ರಾಯಣ್ಣ ಮ್ಯೂಸಿಯಂ ಅದ್ದೂರಿಯಾಗಿ ಉದ್ಘಾಟನೆ ಮಾಡಿದರೂ, ಅದೇ ಮಾದರಿಯಲ್ಲಿ ಚನ್ನಮ್ಮನ ಸಮಾಧಿ ಸ್ಥಳದಲ್ಲಿ ಭವ್ಯ ರಾಕ್ ಗಾರ್ಡನ್ ನಿರ್ಮಿಸಿ ಸಮಾಜದ ಜನತೆ, ಪೂಜ್ಯರನ್ನು ಆಹ್ವಾನಿಸಿ ಅದ್ದೂರಿ ಕಾರ್ಯಕ್ರಮ ನಡೆಸಿ ಉದ್ಘಾಟನೆ ಮಾಡಬೇಕಿತ್ತು. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಚನ್ನಮ್ಮನ ಸೈನಿಕ ಶಾಲೆ ನಿರ್ಮಾಣಕ್ಕೆ 200 ಕೋಟಿ ರೂ ಮೀಸಲು ಇಡಬೇಕು. ಶೀಘ್ರ, ಚನ್ನಮ್ಮನ ರಾಕ್ ಗಾರ್ಡನ್ ಉದ್ಘಾಟನಾ ಸಮಾರಂಭ ಏರ್ಪಡಿಸಬೇಕು ಇಲ್ಲದಿದ್ದರೆ ನಿರಂತರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.



### ಬಸ್ ಬಂದ್ ಇಲ್ಲ

**ಪಿಯುಸಿ ಪರೀಕ್ಷೆ ಹಿನ್ನೆಲೆಯಲ್ಲಿ ಬಸ್‌ಗಳು ಬಂದ್ ಇರಲ್ಲ. ಅಂಗಡಿ ಮುಂಗಟ್ಟುಗಳು, ಸರ್ಕಾರಿ ಕಚೇರಿಗಳು, ಸಂಘಸಂಸ್ಥೆಗಳು ಸಂಪೂರ್ಣ ಬಂದ್ ಆಗಲಿದ್ದು, ನಾಡಿನ ಸರ್ವಜನಾಂಗದ ನಾಗರಿಕರು, ಚನ್ನಮ್ಮ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬೈಲಹೊಂಗಲ ಬಂದ್‌ನಲ್ಲಿ ಭಾಗವಹಿಸಬೇಕು ಎಂದು ಆಗ್ರಹಿಸಿದರು.**

# ಕಲ್ಯಾಣ ಜನರ ಜೀವ ಸಂಜೀವಿನಿ

• ಉದಯವಾಹಿನಿ, ಕಲಬುರಗಿ


ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವ ಬಡರೋಗಿಗಳಿಗೆ ಆರೋಗ್ಯ ದಾಸೋಹ ಮಾಡುತ್ತಿರುವುದು ಅತ್ಯಂತ ಶ್ರೇಷ್ಠ ಕಾರ್ಯವಾಗಿದೆ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಾತೋಶ್ರೀ ಡಾ.ದಾಕ್ಷಾಯಿಣಿ ಎಸ್.ಅಪ್ಪ ಹೇಳಿದರು.

ನಗರದ ಎಂಆರೆಂಸಿ ಕಾಲೇಜಿನ ಸ್ಯಾಕ್ ಬಿಲ್ಡಿಂಗ್‌ನಲ್ಲಿ ಆಯೋಜಿಸಿದ್ದ ಪೂರ್ಣಿಮಾ ಪಿ.ಎಂ.ಬಿರಾದಾರ ಚಾರಿಟಬಲ್ ಡಯಾಲಿಸಿಸ್ ಸೆಂಟರ್‌ನ 5ನೇ ವಾರ್ಷಿಕೋತ್ಸವ ಮತ್ತು ವೈದ್ಯ ರತ್ನ ಮತ್ತುಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸೇವೆಯೇ ದೇವರು ಎಂದು ನಂಬಿಕೊಂಡು ಶರಣು ಪಪ್ಪಾ ಮತ್ತು ತಂಡದವರು ಉಚಿತವಾಗಿ ಡಯಾಲಿಸಿಸ್ ಮಾಡುವ ಮತ್ತು ಸಮಾಜಮುಖಿ ಕೆಲಸಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಶ್ಲಾಘಿಸಿದರು. ಐದು ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚಿನ ಡಯಾಲಿಸಿಸ್‌ಗಳನ್ನು ಉಚಿತವಾಗಿ ಬಡರೋಗಿಗಳಿಗೆ ಮಾಡುವ ಮೂಲಕ ಈ ಕೇಂದ್ರ, ಕಲ್ಯಾಣ ಕರ್ನಾಟಕದ ಜನರ ಅದರಲ್ಲೂ ರೋಗಿಗಳ ಪಾಲಿಗೆ ಜೀವಸಂಜೀವಿನಿಯಾಗಿ ಕೆಲಸ ಮಾಡುತ್ತಿದೆ ಇಂತಹ ಕಾರ್ಯಕ್ಕೆ ಎಲ್ಲರು ಕೈಜೋಡಿಸುವ ಮೂಲಕ ಸೇವೆ ವಿಸ್ತಾರಗೊಳಿಸುವಂತಾಗಬೇಕು ಎಂದು ಅಭಿಪ್ರಾಯಿಸಿದರು.

ಮಾನವೀಯ ಸೇವೆಯೇ ದೇವರ ಸೇವೆ ಎನ್ನುವ ಮೂಲಕ ಸಮಾಜಮುಖಿ ಕೆಲಸಗಳಲ್ಲಿ ದೇವರನ್ನು ಕಾಣುವ ಕಾಯಕ ಮಾಡುತ್ತಿರುವುದು ಇತರಿಗೆ ಮಾದರಿಯಾಗಿದೆ. ಬದಲಾದ ಜೀವನಶೈಲಿಯಿಂದ ಹಲವು ರೋಗಗಳ ಜತೆಗೆ ಹೊಸ ಕಾಯಿಲೆ ಕಂಡುಬರುತ್ತಿವೆ. ಹೀಗಾಗಿ ಆರೋಗ್ಯದ ಬಗ್ಗೆ ಎಲ್ಲರು ಎಚ್ಚರಿಕೆ ವಹಿಸಬೇಕು ಎಂದು ಅವ್ವಾಜಿ ಕಿವಿಮಾತು ಹೇಳಿದರು.

ಕೇಂದ್ರದ ಐದು ವರ್ಷ ನಡೆದು ಬಂದ ಹಾದಿ ಕುರಿತ ಸಾಕ್ಷ್ಯಚಿತ್ರವನ್ನು ಮುಖ್ಯ ಅತಿಥಿಗಳಾಗಿದ್ದ ವೈದ್ಯಕೀಯ ಶಿಕ್ಷಣ ಸಚಿವ ಡಾ ಶರಣಪ್ರಕಾಶ ಪಾಟೀಲ್ ಬಿಡುಗಡೆಗೊಳಿಸಿ, ಇದೊಂದು ಮಾದರಿಯ ಸೇವೆಯಾಗಿದೆ ಎಂದು ಶ್ಲಾಘಿಸಿದರು.

ಉದಯವಾಹಿನಿ ಚಿತ್ರ



**ರೋಗಿಗಳ ತೊಂದರೆ ತಪ್ಪಿಸಲು ಸ್ನೇಹಿತರ ಸಹಕಾರದೊಂದಿಗೆ ಆರಂಭಿಸಿದ ಪೂರ್ಣಿಮಾ ಬಿರಾದಾರ ಚಾರಿಟೇಬಲ್ ಡಯಾಲಿಸಿಸ್ ಕೇಂದ್ರ ಕಳೆದ ಐದು ವರ್ಷಗಳಿಂದ ಬಡವರಿಗೆ ನೆರವು ನೀಡುವ ಮೂಲಕ ಉತ್ತಮ ಕೆಲಸ ಮಾಡುತ್ತಿದೆ. ಅನೇಕರು ಸಹಾಯ ಹಸ್ತ ನೀಡಿದ್ದಾರೆ. ಹೀಗೆ ಬಡವರ ಮತ್ತು ರೋಗಿಗಳ ಸೇವೆ ಮುಂದುವರೆಸಲಾಗುವುದು.**

**- ಶರಣಬಸಪ್ಪ ಪಪ್ಪಾ, ಅಧ್ಯಕ್ಷ**

# ಕೆರೆ, ಉದ್ಯಾನವನಗಳ ಪುನಃಶ್ಚೇತನಕ್ಕೆ ಆದ್ಯತೆ

## ಅಧಿಕಾರವಧಿಯ ಅಭಿವೃದ್ಧಿ ಕಾರ್ಯಗಳು ತೃಪ್ತಿ ತಂದಿವೆ, ಕೆರೆ ಏರಿಯ ಮೇಲೆ ರೂ.75 ಲಕ್ಷ ವೆಚ್ಚದಲ್ಲಿ ಬಯಲು ಜಿಮ್, ಆಟಿಕೆಗಳನ್ನು ಅಳವಡಿಸಲಾಗಿದೆ

• ಉದಯವಾಹಿನಿ, ಚಿತ್ರದುರ್ಗ

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ತರುವಾಯ ವಿವಿಧ ಬಡಾವಣೆಗಳ ಉದ್ಯಾನವನಗಳ ಮೂಲಸೌಕರ್ಯ ಅಭಿವೃದ್ಧಿ, ಮಕ್ಕಳ ಆಟಿಕೆ ಸಾಮಗ್ರಿಗಳ ಅಳವಡಿಕೆ, ಕೆರೆಗಳ ಪುನಶ್ಚೇತನಕ್ಕೆ ಆದ್ಯತೆ ನೀಡಿ ಕೆಲಸ ನಿರ್ವಹಿಸಿದ್ದೇನೆ. ಅಧಿಕಾರವಧಿಯ ಅಭಿವೃದ್ಧಿ ಕಾರ್ಯಗಳು ತೃಪ್ತಿ ತಂದಿವೆ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್ ಹೇಳಿದರು.

ಎರಡು ವರ್ಷಗಳು ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಧಿಕಾರದಿಂದ ನಿರ್ಗಮಿಸುತ್ತಿರುವ ಪ್ರಯುಕ್ತ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೈಗೊಂಡ ಪ್ರಮುಖ ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಾಧಿಕಾರದ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಎಂ.ಕೆ. ತಾಜ್‌ಪೀರ್ ಮಾತನಾಡಿದರು. ನಗರದ ಸೌಂದರ್ಯೀಕರಣಕ್ಕೆ ಆದ್ಯತೆ ನೀಡಲಾಗಿದ್ದು, ರೂ. 1.75 ಕೋಟಿ ವೆಚ್ಚದಲ್ಲಿ ಕೆಳಗೋಟೆಯ ಚನ್ನಕೇಶವ ಉದ್ಯಾನವನ, ಗಾಂಧಿನಗರ, ಪಿಳ್ಳೆಕೆರೆನಹಳ್ಳಿ ಗ್ರಾಮ, ವಿದ್ಯಾನಗರ, ಓ.ಎಂ.ಸಿ ಬಡಾವಣೆಗಳಲ್ಲಿ ಉದ್ಯಾನವನ ಅಭಿವೃದ್ಧಿ, ಕಾಂಕ್ರೀಟ್ ರಸ್ತೆ, ಅಲಂಕಾರಿಕ ದೀಪಗಳ ಅಳವಡಿಕೆ ಪೂರ್ಣಗೊಳಿಸಲಾಗಿದೆ ಐತಿಹಾಸಿಕ ತಿಮ್ಮಣ್ಣನಾಯಕನ ಕೆರೆಯ ಏರಿಯ ಮೇಲೆ ಪಾದಚಾರಿ ಮಾರ್ಗ, ದೀಪಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಕೋಟೆ ಈಶ್ವರ ದೇವಸ್ಥಾನ ಹಾಗೂ ರಾಮದೇವರ ವಡ್ಡು ಬಳಿ ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯಗೊಂಡಿವೆ. ನಾಗರಿಕರ ಆರೋಗ್ಯ ಮತ್ತು ಮಕ್ಕಳ ಮನರಂಜನೆಗಾಗಿ ವಿಶೇಷ ಒತ್ತು ನೀಡಲಾಗಿದ್ದು, ಗಾಂಧಿನಗರ, ರಾಮದೇವರ ವಡ್ಡು, ತಿಮ್ಮಣ್ಣನಾಯಕನ ಕೆರೆ ಏರಿಯ ಮೇಲೆ ರೂ.75 ಲಕ್ಷ ವೆಚ್ಚದಲ್ಲಿ ಬಯಲು ಜಿಮ್, ಆಟಿಕೆಗಳನ್ನು ಅಳವಡಿಸಲಾಗಿದೆ. ಕೆಂಚಪ್ಪ ಸ್ವಾಮಿ ದೇವಸ್ಥಾನದ ಪುಷ್ಕರಣಿ ಅಭಿವೃದ್ಧಿ, ಹಳೇ ಮಾಧ್ಯಮಿಕ ಶಾಲೆಯ ಆವರಣದಲ್ಲಿ ಪೆವಿಲಿಯನ್ ನಿರ್ಮಾಣಕ್ಕೆ ಒಟ್ಟು 45 ಲಕ್ಷ ವ್ಯಯಿಸಲಾಗಿದೆ.ಮೊದಲ ಹಂತದಲ್ಲಿ ಪ್ರಾಧಿಕಾರದಿಂದ ಸುಮಾರು 500 ಜನರು ಕುಳಿತು ವೀಕ್ಷಿಸಬಹುದಾದ ಪೆವಿಲಿಯನ್ ಹಳೇ ಮಾಧ್ಯಮ ಶಾಲೆಯ ಆವರಣದಲ್ಲಿ ನಿರ್ಮಿಸಲಾಗಿದೆ ಎರಡನೇ ಹಂತದಲ್ಲಿ ಈ ಪೆವಿಲಿಯನ್‌ಗೆ ಕೆನೋಪಿ ಅಳವಡಿಸುವ ಯೋಜನೆಗೆ ಅನುಮೋದನೆ ದೊರೆತಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. 2025-2026ನೇ ಸಾಲಿನಲ್ಲಿ ಸುಮಾರು ರೂ.2.50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಮೆದೇಹಳ್ಳಿ ಪಂಚಾಯಿತಿ ವ್ಯಾಪ್ತಿ, ಕೆಳಗೋಟೆ, ಪಿಳ್ಳೆಕೆರೆನಹಳ್ಳಿ ಹಾಗೂ ಎಂ.ಕೆ.ಹಟ್ಟಿ ಗ್ರಾಮಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಬಿ.ವಿ.ಕೆ.ಎಸ್, ನಿಜಲಿಂಗಪ್ಪ ಉದ್ಯಾನವನ, ಹೌಸಿಂಗ್ ಬೋರ್ಡ್ ಕಾಲೋನಿ ಸೇರಿದಂತೆ ವಿವಿಧೆಡೆ ಜಿಮ್ ಉಪಕರಣಗಳ ಅಳವಡಿಕೆಗೆ ರೂ. 01 ಕೋಟಿ ಮೀಸಲಿಡಲಾಗಿದೆ. ಕಿರುಬನಕಲ್ಲು ಹಾಗೂ ಮೆದೇಹಳ್ಳಿಯಲ್ಲಿ ಎರಡು ಹೊಸ ಉದ್ಯಾನವನಗಳ ನಿರ್ಮಾಣಕ್ಕೆ ರೂ. 1.10 ಕೋಟಿ ಅನುದಾನದ ಆರ್ಥಿಕ ಅನುಮೋದನೆ ದೊರೆತಿದೆ ಎಂದರು. ತುರುವನೂರು ರಸ್ತೆಯ ಮೇಲೆ ವಾಕಿಂಗ್ ಮಾಡುತ್ತಿದ್ದ ಪಾದಚಾರಿಗೆ ಅಪಘಾತವಾದ ಹಿನ್ನಲೆಯಲ್ಲಿ ಜನರು ರಸ್ತೆಯ ಮೇಲೆ ನಡೆಯುವುದನ್ನು ತಪ್ಪಿಸಲು ರೈಲ್ವೆ ಅಂಡರ್‌ಪಾಸ್ ಸಮೀಪದ ಪಾರ್ಕ್ ಅಲ್ಲಿ ವಾಕಿಂಗ್ ಪಾಥ್ ವ್ಯವಸ್ಥೆ ಮಾಡಲಾಗಿದೆ. ರಾಮದೇವ್ ಬಡಾವಣೆ, ತಾಜ್‌ಪೀರ್ ಬಡಾವಣೆ, ಬಿವಿಕೆ ಲೇಔಟ್‌ನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಪ್ರಾಧಿಕಾರವು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತದೆ, ಆದರೆ ಅವುಗಳನ್ನು ಉಳಿಸುವ, ನಿರ್ವಹಿಸುವ ಜವಾಬ್ದಾರಿ ಸಾರ್ವಜನಿಕರ ಮೇಲಿದೆ. ಪಾರ್ಕ್‌ಗಳಲ್ಲಿ ಸ್ವಚ್ಛತೆ ಕಾಪಾಡುವುದು, ಗಿಡಗಳನ್ನು ಬೆಳೆಸುವ ಮೂಲಕ ಸಾರ್ವಜನಿಕರು ಸಹಕರಿಸಬೇಕು ಎಂದು ಎಂ.ಕೆ.ತಾಜ್‌ಪೀರ್ ಕೋರಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ನಾನು ಬಯಸದೆ ಬಂದ ಭಾಗ್ಯವಾಗಿದೆ, ಅನಿರೀಕ್ಷಿತವಾಗಿ ಒದಗಿ ಬಂದ ಅಧಿಕಾರವನ್ನು ಬಳಸಿಕೊಂಡು ಪ್ರಾಧಿಕಾರ ಎಂದರೆ ಕೇವಲ ಲೇಔಟ್ ಅನುಮೋದನೆ, ಎನ್‌ಒಸಿ ನೀಡುವುದಕ್ಕೆ ಸೀಮಿತ ಎಂಬ ಕಲ್ಪನೆಯನ್ನು ಬದಲಿಸಿ, ಅನೇಕ ಸಾರ್ವಜನಿಕ ಸ್ನೇಹಿ ಯೋಜನೆಗಳನ್ನು ಜಾರಿಗೆ ತಂದಿದ್ದೇನೆ. ಅಧ್ಯಕ್ಷನಾಗಿ 24 ತಿಂಗಳ ಅಧಿಕಾರಾವಧಿಯಲ್ಲಿ ಕನಿಷ್ಠ 24 ಯೋಜನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಿದ್ದೆ. ನಿರೀಕ್ಷೆಗಿಂತಲೂ ಹೆಚ್ಚಿನ ಕಾಮಗಾರಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದಾಗಿ ಎಂ.ಕೆ. ತಾಜ್‌ಪೀರ್ ತೃಪ್ತಿ ವ್ಯಕ್ತಪಡಿಸಿದರು. ಪ್ರಾಧಿಕಾರದ ಸದಸ್ಯರಾದ ದೇವರಾಜ್, ಅಂಜನಪ್ಪ, ಸುರೇಶ್, ಮೀನಾಕ್ಷಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಸೋಮಶೇಖರ್ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ



**ಮುರುಘಾಮಠದ ಮುಂಭಾಗದ ಕೆರೆಯ ಅಭಿವೃದ್ಧಿ ಕಾರ್ಯಕ್ಕೆ ನ್ಯಾಯಾಲಯದಲ್ಲಿದ್ದ ತಡೆಯಾಜ್ಞೆ ತೆರವುಗೊಂಡಿದ್ದು, ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸಲಾಗಿದೆ. ಮೊದಲ ಹಂತದ ರೂ. 5.00 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದರೆ, ಎರಡನೇ ಹಂತದ ರೂ. 2.27 ಕೋಟಿ ವೆಚ್ಚದ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದೆ. ತಿಮ್ಮಣ್ಣನಾಯಕ ಕೆರೆಯ ಸೌಂದರ್ಯೀಕರಣದ ಅಡಿಯಲ್ಲಿ ಪಾದಚಾರಿ ಮಾರ್ಗ ಮತ್ತು ಎಲ್‌ಇಡಿ ದೀಪಗಳ ಅಳವಡಿಕೆಗೆ ಚಾಲನೆ ನೀಡಲಾಗಿದೆ. ಚಿತ್ರದುರ್ಗ ನಗರಸಭೆ ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯ ಸುಮಾರು 15 ರಿಂದ 20 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ಗಾಂಧಿನಗರ ಹಾಗೂ ಮೆದೇಹಳ್ಳಿ ವ್ಯಾಪ್ತಿಯ ಪಾರ್ಕ್‌ಗಳು ಸೇರಿವೆ.**

**- ಎಂ.ಕೆ.ತಾಜ್‌ಪೀರ್**

### ನಗರದ ಅಭಿವೃದ್ಧಿಗೆ ಹೊಸ ಮಾಸ್ಟರ್ ಪ್ಲಾನ್

**ಚಿತ್ರದುರ್ಗ ನಗರದ ಹೊಸ ಮಾಸ್ಟರ್ ಪ್ಲಾನ್ ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಲಾಗಿದೆ. ಅಧಿಕಾರಿಗಳ ಹಂತದಲ್ಲಿ ಮಾಸ್ಟರ್ ಪ್ಲಾನ್‌ಗೆ ಒಪ್ಪಿಗೆ ದೊರೆತಿದೆ. ಅಂತಿಮವಾಗಿ ನಗರಾಭಿವೃದ್ಧಿ ಸಚಿವರಾದ ಬಿ.ಎ. ಸುರೇಶ್ ಅವರ ಅನುಮೋದನೆ ದೊರೆಯಬೇಕಿದೆ. ಈ ಕುರಿತು ಶಾಸಕರು ಹಾಗೂ ನಗರಸಭೆ ಸದಸ್ಯರ ನಿಯೋಗ ಸಚಿವರನ್ನು ಭೇಟಿ ಮಾಡಿ ಚರ್ಚಿಸಿದೆ. ಜನಪ್ರತಿನಿಧಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡಿರುವ ಸಚಿವರು, ಅನುಮೋದನೆ ನೀಡುವ ಭರವಸೆ ನೀಡಿದ್ದಾರೆ. ಹೊಸ ಮಾಸ್ಟರ್ ಪ್ಲಾನ್‌ಗೆ ಅನುಮೋದನೆ ದೊರತರೆ ಐತಿಹಾಸಿಕ ಕೋಟೆ ಸಂಪರ್ಕಿಸುವ ರಿಂಗ್ ರೋಡ್ ಸಂಪರ್ಕ ದೊರಕಲಿದೆ. ಸದ್ಯ ನಗರದಲ್ಲಿ ಪ್ರಾಧಿಕಾರದಿಂದ ಯಾವುದೇ ಲೇಔಟ್ ಅಭಿವೃದ್ಧಿ ಪಡಿಸಿಲ್ಲ. ಪ್ರಾಧಿಕಾರದೊಂದಿಗೆ 50:50 ಅನುಪಾತದಲ್ಲಿ ಅಭಿವೃದ್ಧಿ ಪಡಿಸಲು ಖಾಸಗಿ ಜಮೀನಿನ ರೈತರು ಮುಂದೆ ಬರುತ್ತಿಲ್ಲ. ಸದ್ಯ 70:30 ಅನುಪಾತದಲ್ಲಿ ಖಾಸಗಿ ಡೇವಲಪರ್ಸ್ ಬಡಾವಣೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ ಎಂದು ಎಂ.ಕೆ.ತಾಜ್‌ಪೀರ್ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.**

**24 ಯೋಜನೆಗಳನ್ನು ಪೂರ್ಣಗೊಳಿಸುವ ಗುರಿ**

# ಮಿನಿ ನ್ಯೂಸ್

## ದುರ್ನಾತ ಬೀರುವ ರಾಜಕಾಲುವೆ

• ಉದಯವಾಹಿನಿ, ಲಕ್ಷ್ಮೇಶ್ವರ

ಭರದಿಂದ ಬೆಳೆಯುತ್ತಿರುವ ಲಕ್ಷ್ಮೇಶ್ವರ ಪಟ್ಟಣದಲ್ಲಿ ಪ್ರತಿನಿತ್ಯವೂ ನೀರು ಮತ್ತು ಸ್ವಚ್ಛತೆಯ ಸಮಸ್ಯೆ ಜನರನ್ನು ಕಾಡುತ್ತಿದೆ. ಇರುವ ಕೆಲವೇ ಪೌರಕಾರ್ಮಿಕರೊಂದಿಗೆ ಇಡೀ ಪಟ್ಟಣದಾದ್ಯಂತ ಸ್ವಚ್ಛತೆಯನ್ನು ಕಾಪಾಡುವುದು ಪುರಸಭೆಗೆ ಒಂದು ಸವಾಲಾಗಿದ್ದರೆ ಪ್ರಮುಖ ರಸ್ತೆಗಳು ಮತ್ತು ಆಯಕಟ್ಟಿನ ಸ್ವಚ್ಛತೆಯನ್ನು ಕಾಪಾಡುವುದು ಪುರಸಭೆಯ ಆದ್ಯ ಕರ್ತವ್ಯ ಎನ್ನಲೇಬೇಕು. ಪಟ್ಟಣದ ಶಿಗ್ಲಿ ನಾಕಾದಲ್ಲಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತೆ ರಾಜ ಕಾಲವೆ ಇದ್ದು ಇಡೀ ಕಾಲುವೆ ಘನ ತ್ಯಾಜ್ಯಗಳಿಂದ ತುಂಬಿ ತುಳುಕುತ್ತಿದ್ದರೆ ಕಾಲುವೆಯ ಅಂಚಿಗೆ ಎದೆ ಮಟ್ಟದವರೆಗೆ ಘನತ್ಯಾಜ್ಯ ತುಂಬಿಕೊಂಡು ದುರ್ನಾತ ಬೀರುತ್ತಿದೆ. ಇದರ ಪಕ್ಕದಲ್ಲಿಯೇ 2 ಸಾರ್ವಜನಿಕ ಶೌಚಾಲಯಗಳು ಇದ್ದು ಇಡೀ ಪ್ರದೇಶ ರಾಶಿ ರಾಶಿ ಪ್ಲಾಸ್ಟಿಕ್ ಮಯವಾಗಿದ್ದು ಇದೇ ರಸ್ತೆಯ ಮೇಲೆ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಪುರಸಭೆಯವರು ಅಡ್ಡಾಡುತ್ತಿದ್ದರು ಯಾರ ಕಣ್ಣಿಗೂ ಬೀಳದಿರುವುದು ಪವಾಡವೇ ಅನ್ನಬೇಕು. ಈ ಘನ ತ್ಯಾಜ್ಯದ ಪಕ್ಕದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರಿಕ್ಷಾ ನಿಲ್ದಾಣ ಇದ್ದು ಚಾಲಕರು ಮೂಗು ಮುಚ್ಚಿ ಕುಳಿತುಕೊಳ್ಳುವ ಸ್ಥಿತಿಯಿದೆ ಪುರಸಭೆಯವರು ಸ್ವಚ್ಛಗೊಳಿಸದಿದ್ದರೆ ಹೋರಾಟಕ್ಕೆ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

## ಕಳೆದು ಹೋದ ಸಮಯ ಎಂದೂ ಮರಳಿ ಸಿಗುವುದಿಲ್ಲ: ಡಾ.ಶಾಂತಾ

• ಉದಯವಾಹಿನಿ, ಜೇವರ್ಗಿ

ಕಳೆದ ಸಂಪತ್ತು, ಕಳೆದ ಆಸ್ತಿ ಮತ್ತೆ ಮರಳಿ ಗಳಿಸಬಹುದು ಆದರೆ ಕಳೆದು ಹೋದ ಸಮಯ ಎಂದೂ ಮರಳಿ ಸಿಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಸಮಯಕ್ಕೆ ಹೆಚ್ಚಿನ ಬೆಲೆ ಕೊಡಬೇಕು, ಮಾನವೀಯ ಸಂಬಂಧಗಳನ್ನು ಉಳಿಸಿಕೊಳ್ಳಬೇಕು ಎಂದು ಪ್ರಾಂಶುಪಾಲರಾದ ಡಾ. ಶಾಂತಾ ಬಿ. ಅಸ್ತಿಗೆ ಅಭಿಪ್ರಾಯ ಪಟ್ಟರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ಎಂ.ಕಾಂ. ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಅಧ್ಯಕ್ಷ ಸ್ಥಾನವಹಿಸಿ ಅವರು ಮಾತನಾಡಿದರು. ವಾಣಿಜ್ಯ ಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಕಲ್ಲಿನಾಥ ಪಾಟೀಲ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ಎಂ.ಕಾಂ ಉತ್ತಮ ಕೋರ್ಸಾಗಿದೆ. ಚೆನ್ನಾಗಿ ಅಧ್ಯಯನ ಮಾಡಿ ಒಳ್ಳೆಯ ಜ್ಞಾನ, ಕೌಶಲ್ಯ ಸಂಪಾದಿಸಿ ನಿಮ್ಮ ಗುರಿ ತಲುಪುವ ಕಡೆಗೆ ಲಕ್ಷವಿರಲಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

## ಖಡ್ಗ ಹಿಡಿದು ಕೇಕ್ ಕಟ್: ಪ್ರಕರಣ ದಾಖಲು

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ಜನ್ಮದಿನದ ಪ್ರಯುಕ್ತ ಸಾರ್ವಜನಿಕ ಸ್ಥಳಗಳಲ್ಲಿ ಗೆಳೆಯರೊಂದಿಗೆ ಖಡ್ಗದಿಂದ ಕೇಕ್ ಕಟ್ ಮಾಡುವವರು ಮತ್ತು ಆಯುಧ ಪ್ರದರ್ಶಿಸಿ ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ ಹಾಕಿಕೊಳ್ಳುವ ಹವ್ಯಾಸ ಬೆಳೆಸಿಕೊಂಡಿರುವ ಯುವಕರ ಮೈ ಚಳಿ ಬಿಡಿಸಲು ಚನ್ನಮ್ಮನ ಕಿತ್ತೂರು ಪೊಲೀಸರು ಮುಂದಾಗಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಈ ರೀತಿ ವರ್ತನೆ ತೋರಿ ಸಾಮಾಜಿಕ ಜಾಲತಾಣದಲ್ಲಿ ಚಿತ್ರಗಳ ಹರಿಬಿಟ್ಟಿದ್ದ ಆರು ಯುವಕರ ವಿರುದ್ಧ ಪೊಲೀಸರು ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಿಸಿದ್ದಾರೆ. ಎಂ.ಕೆ.ಹುಬ್ಬಳ್ಳಿಯ ಆನಂದ ಚನಬಸಯ್ಯ ಕಲ್ಮಠ (37), ಜೈದ್ ನೂರ ಅಹಮ್ಮದ ಸನದಿ (19), ತರಬೇಜ್ ಹನೀಫ್ ಖಾದ್ರಿ (18), ರೆಹನ್ ಮುಸ್ತಾಕಅಹಮ್ಮದ್ ಬಡೇಘರ್ (19), ಕಿತ್ತೂರಿನ ಸಾಗರ ಯಲ್ಲಪ್ಪ ಗುಂಜಿ (22), ಚಿಕ್ಕನಂದಿಹಳ್ಳಿಯ ನಾಗರಾಜ ಫಕ್ಕೀರಪ್ಪ ಮೊಕಾಶಿ (25) ವಿರುದ್ಧ ಯುವ ವ್ಯಕ್ತಿಗಳ ಮನಸ್ಸಿನಲ್ಲಿ ಕಾನೂನು ಬಾಹಿರ ಕೃತ್ಯ ಎಸಗಲು ಪ್ರೇರೇಪಿಸಿದ್ದಕಾಗಿ ಪ್ರಕರಣ ದಾಖಲಿಸಲಾಗಿದೆ ಪೊಲೀಸ್ ಮೂಲಗಳು ತಿಳಿಸಿವೆ.

## ಅಬುದಾಬಿಯಲ್ಲಿ ಸಿಲುಕಿದ ಬಾಗಲಕೋಟೆಯ ಸಾಫ್ಟ್‌ವೇರ್ ಇಂಜಿನಿಯರ್

• ಉದಯವಾಹಿನಿ, ಬಾಗಲಕೋಟೆ

ಬೆಂಗಳೂರಿನಿಂದ ಪ್ಯಾರಿಸ್‌ಗೆ ಹೊರಟಿದ್ದ ಜಿಲ್ಲೆಯ ಗಿರೀಶ ಕೆರೂರು ಎಂಬುವವರು ಇರಾನ್-ಇಸ್ರೇಲ್, ಅಮೆರಿಕ ಯುದ್ಧದಿಂದಾಗಿ ಅಬುದಾಬಿಯಲ್ಲೇ ಸಿಲುಕಿದ್ದಾರೆ. ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವರು, ಕಂಪನಿ ಕೆಲಸದ ಮೇಲೆ ಪ್ಯಾರಿಸ್‌ಗೆ ಹೊರಟಿದ್ದರು. ಅಬುದಾಬಿಯಲ್ಲಿ ಇಳಿದು, ಅಲ್ಲಿಂದ ಪ್ಯಾರಿಸ್‌ಗೆ ವಿಮಾನದಲ್ಲಿ ಹೋಗಬೇಕಿತ್ತು. ಅಬುದಾಬಿಯಲ್ಲಿ ಇಳಿದು ವಿಮಾನಕ್ಕೆ ಕಾಯುತ್ತಿದ್ದಾಗ ಯುದ್ಧ ವಿಷಯ ತಿಳಿದಿದೆ. ಸದ್ಯ ವಿಮಾನ ಹಾರಾಟ ಸ್ಥಗಿತವಾಗಿದ್ದು, ಅಲ್ಲಿಯೇ ಉಳಿದುಕೊಂಡಿದ್ದಾರೆ' ಎಂದು ಗಿರೀಶ ಅವರ ಸಹೋದರ ತಿಳಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿಮ್ಮ ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ಒಂದು ದಿನ. ದೊಡ್ಡ ಗುಂಪಿನಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವುದು ಅತ್ಯಂತ ಮನರಂಜನಾತ್ಮಕವಾಗಿರುತ್ತದೆ– ಆದರೆ ನಿಮ್ಮ ವೆಚ್ಚಗಳು ಹೆಚ್ಚಾಗುತ್ತವೆ. ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ.

**ವೃಷಭ** ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ಇಂದು ಯಾರಾದರೂ ನಿಮ್ಮ ಪ್ರೀತಿಯ ನಡುವೆ ಬರಬಹುದು.

**ಮಿಥುನ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ ಮತ್ತು ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ. ನಿಮ್ಮ ಸಂಬಂಧಿಕರ ಭೇಟಿ ನೀವು ಆಲೋಚಿಸಿದ್ದಕ್ಕಿಂತಲೂ ಹೆಚ್ಚು ಒಳ್ಳೆಯವಾಗಿರುತ್ತದೆ.

**ಕರ್ಕಾಟಕ** ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ. ಸ್ನೇಹಿತರು, ಹತ್ತಿರದವರು ನಿಮಗೆ ತಮ್ಮ ಸಹಾಯ ಹಸ್ತ ಚಾಚುತ್ತಾರೆ. ಭಾವನಾತ್ಮಕ ತೊಂದರೆಗಳು ಕಾಡುತ್ತವೆ. ಇಂದು, ನೀವು ಪ್ರೀತಿ ಎಲ್ಲದಕ್ಕೂ ಪರ್ಯಾಯವಾಗಿದೆ.

**ಸಿಂಹ** ಧ್ಯಾನ, ಯೋಗ ಆಧ್ಯಾತ್ಮಿಕ, ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿ ಆಗುತ್ತದೆ. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ನಿಮ್ಮ ಮಕ್ಕಳಿಂದ ನೀವು ಕೆಲವು ಪಾಠಗಳನ್ನು ಕಲಿಯಲಿದ್ದೀರಿ.

**ಕನ್ಯಾ** ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ, ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು ಪ್ರೀತಿಸುವವರಿಂದ ಉಡುಗೊರೆ ಪಡೆಯಲು, ನೀಡಲು ಪವಿತ್ರವಾದ ದಿನ.

**ತುಲಾ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ, ಆರಾಮವನ್ನು ಒದಗಿಸುತ್ತದೆ. ಎಲ್ಲಾ ಬದ್ಧತೆಗಳು, ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಸ್ನೇಹಿತರೊಡನೆ ಒಂದು ಸಂಜೆ– ಅಥವಾ ಶಾಪಿಂಗ್ ಅತ್ಯಂತ ಸಂತೋಷಕರ ಮತ್ತು ಅತ್ಯಾಕರ್ಷಕವಾಗಿರುತ್ತದೆ.

**ವೃಶ್ಚಿಕ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ.

**ಧನಸ್ಸು** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ.

**ಮಕರ** ಧಾರ್ಮಿಕ ಭಾವನೆಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನವನ್ನು ಪಡೆಯಲು ನೀವು ಒಂದು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು.

**ಕುಂಭ** ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ಸಂಬಂಧಿಕರು, ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು. ನಿಮ್ಮ ಪ್ರೀತಿ ಸಂಗಾತಿಯ ಒಂದು ಹೊಸ ಅದ್ಭುತ ಭಾಗವನ್ನು ನೀವಿಂದು ನೋಡಬಹುದು.

**ಮೀನ** ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು ಆದ್ದರಿಂದ ದೃಢವಾಗಿರಿ, ಧೈರ್ಯಶಾಲಿಗಳಾಗಿರಿ, ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ, ಫಲಿತಾಂಶಗಳಿಗೆ ಸಿದ್ಧವಾಗಿರಿ. ನಿಮ್ಮ ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸುವ ಅಗತ್ಯವಿದೆ ಇಲ್ಲದಿದ್ದರೆ ಮುಂಬರುವ ಸಮಯದಲ್ಲಿ ನೀವು ತೊಂದರೆಗೊಳಗಾಗಬಹುದು.

### ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ: ಡಾ.ಬಸವಲಿಂಗ ಅವಧೂತ

# ಯುವಕರು ದುಶ್ಚಟಗಳಿಂದ ದೂರವಿರಬೇಕು

• ಉದಯವಾಹಿನಿ,ಚಿಂಚೋಳಿ

ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಹಾಗೂ ಯುವಕರು ದುಶ್ಚಟಗಳಿಂದ ದೂರವಿರಬೇಕು ಎಂದು ಮಲ್ಲಯ್ಯಗಿರಿ, ದೇಗಲಮಡಿ ಮಠದ ಪೀಠಾಧಿಪತಿ ಪರಮಪೂಜ್ಯ, ಡಾ.ಬಸವಲಿಂಗ ಅವಧೂತರು ಹೇಳಿದರು. ತಾಲ್ಲೂಕಿನ ಗಾರಂಪಳ್ಳಿ ಗ್ರಾಮದ ಬಸವೇಶ್ವರ ಪ್ರಾಥಮಿಕ ಶಾಲೆಯ 15ನೇ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಜ್ಞಾನದ ಜೋತೆ ಮಾನವೀಯ ಮೌಲ್ಯಗಳು ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು.

ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಜೋತೆ ಸಿಸ್ತು,ಸಂಯಮ,ಉತ್ತಮ ಸಂಸ್ಕಾರ ಸಂಸ್ಕೃತಿ ಕಲಿಸಬೇಕು,ಆಗ ಮಕ್ಕಳು ದೇಶದ ಮುಂದಿನ ನಾಗರೀಕರಾಗಿ ಬೆಳೆಯುತ್ತಾರೆ,ಮಕ್ಕಳಿಗೆ ಮೊಬೈಲ್ ಫೋನ್ ದಿಂದ ದೂರವಿಡಬೇಕು,ಯುವಕರು ಮಠ ಮಂದಿರಕಡೆ ಆಧ್ಯಾತ್ಮಿಕ ಕಡೆ ಒಲವು ತೋರಬೇಕು, ಶಾಲೆಯ ಮಕ್ಕಳಿಗೆ ಶಾಲೆಯಲ್ಲಿ ಬೆಳಿಗ್ಗೆ ವ್ಯಾಯಾಮ ಮಾಡಿಸಿ ಮಹಾಪುರುಷರ ವಾಣಿಗಳು ತಿಳಿಸಬೇಕು.

ಜಾತಿವಾಧಿ ಮಾಡಬೇಡಿ ಮನೆಯಲ್ಲಿ ಮಾತ್ರ ಜಾತಿಗೆ ಅನುಗುಣವಾಗಿ ಜಾತಿಪದ್ದತಿ ಅನುಸರಿಸಿ ಮನೆಯ ಹೊರಗಡೆ ಬಂದಮೇಲೆ ನಾವೆಲ್ಲರೂ ಭಾರತ ದೇಶದ ಒಂದೇ ಮಕ್ಕಳು ಎಂದು ಭಾವಿಸಿ ದೇಶದಲ್ಲಿ ವಾಸ ಮಾಡಿದರೆ ಮಾತ್ರ ದೇಶ ಉದ್ದಾರವಾಗುತ್ತದೆ, ಚಿಂಚೋಳಿ ಮತಕ್ಷೇತ್ರದಲ್ಲಿ ಶಿಕ್ಷಣ ಕೊರತೆ ಎದ್ದುಕಾಣುತ್ತಿದೆ ಇನಷ್ಟು ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಬೇಕು ಆದರೆ ಶಿಕ್ಷಣ ಸಂಸ್ಥೆಗಳು ವ್ಯಾಪಾರಿಕರಣ ಆಗಬಾರದು ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ವಿವಿಧ ಸಾಧಕರಿಗೆ ಸನ್ಮಾನ ಪ್ರಶಸ್ತಿ ಪ್ರಧಾನ**

ಉದಯವಾಹಿನಿ ಚಿತ್ರ


**ಸಂಗೀತ ಸೇವೆಯ ಗಣೆಯ ಸೇವೆಯನ್ನು ಪರಿಗಣಿಸಿ ರೇವಣಸಿದ್ದಯ್ಯ ಹಿರೇಮಠ,ವಿದ್ಯಾಸಾಗರ ದೇಶಮುಖ,ಸಮಾಜ ಸೇವೆಯನ್ನು ಪರಿಗಣಿಸಿ ಗೌತಮ್ ಬೋಮ್ನಳ್ಳಿ,ಅನೀಲ ಡಾಂಗೆ ಅವರಿಗೆ ಸನ್ಮಾನಿಸಿ ಗೌರವಿಸಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.**

ಕಲಬುರ್ಗಿ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ ಮಾತನಾಡಿ ಪಾಲಕರು ಎಷ್ಟೆ ಸಂಕಷ್ಟದಲ್ಲಿದರೂ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ, ಶಿಕ್ಷಣ ಪಡೆದುಕೊಂಡರೆ ಮಾತ್ರ ಮಕ್ಕಳು ಪ್ರಗತಿ ಹೊಂದಲು ಸಾಧ್ಯ, ಶಿಕ್ಷಕರು ಮಕ್ಕಳಿಗೆ ಎಲ್ಲಾ ಮಹಾನೀಯರ ಆದರ್ಶ ತತ್ವಗಳನ್ನು ಬೋಧಿಸಿ ಉತ್ತಮ ನಾಗರೀಕರಾಗಿ ಬೆಳೆಸಬೇಕು,ಜ್ಞಾನದ ಸರಿಸಮಾನವಾದ ಯಾವುದೇ ಇಲ್ಲ ಎಂದರು. ಮಣ್ಣೂರ ಮಲ್ಟಿಸ್ಪೇಷಾಲೀಟಿ ಆಸ್ಪತ್ರೆಯ ಸಂಸ್ಥಾಪಕ ನಿರ್ದೇಶಕ ಡಾ.ಫಾರೂಕ್‌ಮಣ್ಣೂರ, ಮಾತನಾಡಿದರು, ಜಗದೇವಿ ಬಾಬುರಾವ ಬುಳ್ಳಾ ಅಧ್ಯಕ್ಷತೆ ವಹಿಸಿದ್ದರು,ಬಾಬುರಾವ ಬುಳ್ಳಾ ಸ್ವಾಗತಿಸಿದರು,ಅಬ್ದುಲ್ ಸಲೀಂ ನಿರೂಪಿಸಿದರು,ವಿಜಯಲಕ್ಷ್ಮಿ ಪಾಕಿನ ವಂದಿಸಿದರು.

**ಪ್ರಮುಖರು:** ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ.ವಿ.ಟಿ.ಕಾಂಬ್ಳೆ, ಆನಂದ ಟೈಗರ್, ಪವನಕುಮಾರ ಪಾಟೀಲ, ಅಶೋಕ ಪಾಟೀಲ, ಆಕ್ರಂಪಾಷ ಮೋಮೀನ, ಕೆಎಂಬಾರಿ, ಗೌತಮ್ ಬೋಮ್ನಳ್ಳಿ, ತ್ರೀರತ್ನ ಬಾಬುರಾವ ಬುಳ್ಳಾ, ಪಂಚಶೀಲ ಬಾಬುರಾವ ಬುಳ್ಳಾ,ತ್ರಿವೇಣಿ ಮರಪಳ್ಳಿ, ಚಂದ್ರಕಾಂತ,ನವೀನರೆಡ್ಡಿ, ಅರುಣಕುಮಾರ ಪೋಚಾಲಿ, ಶಾಮರಾವ, ನಾಗವೇಣಿ, ನಾಜೀಯಾಬೇಗಂ, ಸೌಮ್ಯರಾಣಿ, ಪ್ರೀತಿ, ಐಶ್ವರ್ಯಾ, ಮೀನಾಕ್ಷಿ, ಅಶೋಕ, ಬಕ್ಕಪ್ಪ, ಅಂಬರೀಷ್, ಹಣಮಂತ ಭೋವಿ,ಶರಣಮ್ಮ, ನಾಗಮ್ಮ, ಅನೇಕರಿದ್ದರು.

## ರಾಷ್ಟ್ರಧ್ವಜ ಸಂಹಿತೆ ಅರಿವು ಅತ್ಯವಶ್ಯಕ

• ಉದಯವಾಹಿನಿ, ಕಲಬುರಗಿ

ಪ್ರತಿಯೊಬ್ಬರೂ ರಾಷ್ಟ್ರಗೀತೆ ಹಾಗೂ ರಾಷ್ಟ್ರಧ್ವಜ ಸೇರಿದಂತೆ ರಾಷ್ಟ್ರ ಲಾಂಛನಗಳಿಗೆ ಗೌರವ ನೀಡುವ ಜತೆಗೆ ಅವುಗಳ ಬಳಕೆಯ ಬಗ್ಗೆಯೂ ತಿಳಿದುಕೊಂಡಿರಬೇಕು, ದೇಶದ ಪ್ರಜೆಯು ರಾಷ್ಟ್ರಧ್ವಜ ಸಂಹಿತೆಯನ್ನು ಅರಿಯುವುದು ಅತ್ಯವಶ್ಯಕ' ಎಂದು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಉದಯಕುಮಾರ್ ಚಿಂಚೋಳಿ ಹೇಳಿದರು. ಅವರು ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪಿಡಿಎ ಇಂಜಿನಿಯರಿಂಗ್ ಕಾಲೇಜಿನ ಪ್ರೊ.ಎಸ್.ವಿ ಮಲ್ಲಾಪೂರ ಯಾಂತ್ರಿಕ ತಂತ್ರಜ್ಞಾನ ವಿಭಾಗದಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಹಾಗೂ ಭಾರತ ಸೇವಾದಳ ತಾಲ್ಲೂಕು ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರಧ್ವಜ, ರಾಷ್ಟ್ರಗೀತೆ ಕುರಿತು ಮಾಹಿತಿ ತರಬೇತಿ ಶಿಬಿರದಲ್ಲಿ ಮಾತನಾಡುತ್ತಿದ್ದರು. ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಯಾವುದೇ ರೀತಿಯಲ್ಲಿ ಅಪಮಾನವಾದರೂ ಅದು ಅಪರಾಧವಾಗುತ್ತದೆ ಎಂದು ಅವರು ಎಚ್ಚರಿಸಿದರು. ರಾಷ್ಟ್ರಧ್ವಜವನ್ನು ಖಾದಿ ಭಂಡಾರಗಳಲ್ಲಿ ಅದರಲ್ಲಿಯೂ ಐಎಸ್‌ಐ ಚಿಹ್ನೆ ಇರುವ ಧ್ವಜವನ್ನೇ ಖರೀದಿಸಬೇಕು. ನಿರ್ದಿಷ್ಟ ಅಳತೆ ಧ್ವಜವನ್ನೇ ಬಳಸಬೇಕು. ಮಾರುಕಟ್ಟೆಯಲ್ಲಿ ಸಿಗುವ ಧ್ವಜಗಳನ್ನು ಎಂದೂ ಬಳಸಬಾರದು. ಅಲ್ಲದೆ ಮಕ್ಕಳಿಗೂ ಸಹಾ ರಾಷ್ಟ್ರಧ್ವಜದ ಮಹತ್ವ ಹಾಗೂ ಅದರ ಆರೋಹಣ ಮತ್ತು ಅವರೋಹಣದ ಬಗ್ಗೆ ಅರಿವು ಮೂಡಿಸಬೇಕು ಎಂದರು.


ಉದಯವಾಹಿನಿ ಚಿತ್ರ

ರಾಷ್ಟ್ರಗೀತೆಯನ್ನು ಹಾಡುವಾಗ ಅನೇಕ ನಿಯಮಗಳಿದ್ದು, ಸ್ಪಷ್ಟ ಮತ್ತು ತಪ್ಪಿಲ್ಲದಂತೆ ರಾಷ್ಟ್ರಗೀತೆಯನ್ನು ಹಾಡ ಬೇಕು. ಅಲ್ಲದೇ ರಾಷ್ಟ್ರಧ್ವಜವನ್ನು ಹಾರಿಸಿದ ಸಂದರ್ಭದಲ್ಲಿ ವಂದೇ ಮಾತರಂ, ರಾಷ್ಟ್ರಗೀತೆ, ಧ್ವಜಗೀತೆಗಳನ್ನು ಕಡ್ಡಾಯವಾಗಿ ಹಾಡಬೇಕು. ಧ್ವಜಸ್ತಂಭವು ನಿರ್ದಿಷ್ಟ ಅಳತೆಯಲ್ಲಿರಬೇಕೆಂದೇನು ಇಲ್ಲ. ಆದರೆ ಧ್ವಜಸ್ತಂಭ, ಧ್ವಜದ ಕಂಬ ಬಿಳಿ ಬಣ್ಣದಿಂದ ಕೂಡಿರಬೇಕು. ಧ್ವಜಾರೋಹಣ ಹಾಗೂ ಧ್ವಜ ಅರೋಹಣದ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಪ್ರತಿಯೊಂದು ಹಂತವನ್ನು, ಧ್ವಜಕ್ಕೆ ಕಟ್ಟುವ ನೂಲಿನ ದಾರ, ಧ್ವಜ ಕಂಬದ ಸುತ್ತಳತೆ, ಧ್ವಜ ರಕ್ಷಕರ ಪಾತ್ರ ಮತ್ತಿತರ ವಿಚಾರಗಳ ಬಗ್ಗೆ ಮಾಹಿತಿ ನೀಡಿದರು.

## ಶಾಂತಿಯುತವಾಗಿ ಹೋಳಿ ಆಚರಿಸಲು ಸಲಹೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕಮಲನಗರ

ಹೋಳಿ ಸ್ನೇಹದ ಬಾಂಧವ್ಯ ತೋರುವ ಹಬ್ಬ. ಅದು ವಿಜಯದ ಸಂಕೇತ ಸಾರ್ವಜನಿಕರು ಶಾಂತಿಯುತವಾಗಿ ಹೋಳಿ ಹಬ್ಬವನ್ನು ಆಚರಣೆ ಮಾಡಬೇಕು ಎಂದು ಪಿಎಸ್‌ಐ ರಾಠೋಡ್ ಹೇಳಿದರು. ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಹಮ್ಮಿಕೊಂಡಿದ್ದ ಹೋಳಿ ಮತ್ತು ರಂಜಾನ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿದರು. ಇದೇ ಸಮಯದಲ್ಲಿ ರಂಜಾನ್ ಕೂಡ ಇದ್ದು, ಎಲ್ಲಾ ಹಬ್ಬವನ್ನೂ ಶಾಂತಿಯುತವಾಗಿ ಆಚರಿಸಬೇಕು. ಗಲಾಟೆ, ಅಹಿತಕರ ಘಟನೆ ಕಂಡು ಬಂದಲ್ಲಿ ಅಂತವರ ಮೇಲೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು ಎಂದರು. ತಹಶೀಲ್ದಾರ ಅಮಿತಕುಮಾರ ಕುಲಕರ್ಣಿ ಮಾತನಾಡಿ, ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಅವಶ್ಯ. ಸಮಸ್ಯೆಗಳಿದ್ದರೆ ಮೇಡಂಅವರಿಗೆ ತಕ್ಷಣೆ ಗಮನಕ್ಕೆ ತನ್ನಿ, ಸರಿಪಡಿಸುತ್ತಾರೆ. ಆದಷ್ಟು ರಾಸಾಯನಿಕ ಬಣ್ಣಗಳನ್ನು ತ್ಯಜಿಸಿ, ಕೆನಾಲ್, ಕೆರೆ, ಬಾವಿಯಲ್ಲಿ ಸ್ನಾನ ಮಾಡುವಾಗ ಎಚ್ಚರವಿರಲಿ. ಪಿಯುಸಿ ಪರೀಕ್ಷೆ ಆರಂಭವಾಗಿದ್ದು ವಿದ್ಯಾರ್ಥಿಗಳಿಗೆ ಅಡಚಣೆ ಆಗದಂತೆ ಆಚರಿಸಿ. ಬಡಾವಣೆಯಲ್ಲಿ ಹಲಿಗೆ, ಡಿಜಿ ಸಣ್ಣದು ಬಾರಿಸುವುದಕ್ಕೆ ನಿಯಂತ್ರಣವಿರಲಿ ಎಂದರು.

## ಕೇವಲ ರಾಜಕೀಯಕ್ಕೊಸ್ಕರ ಹಿಂದೂ ಧರ್ಮ ತೆಗಳಬೇಡಿ

• ಉದಯವಾಹಿನಿ, ಅಫಜಲಪುರ


ಉದಯವಾಹಿನಿ ಚಿತ್ರ

ಚುನಾವಣೆಯ ನಾಮಪತ್ರದಲ್ಲಿ ಹಿಂದೂ ಎಂದು ಬರೆದಿರುವ ಕಾರಣಕ್ಕೆ ಪಂಚಾಯತ್ ರಾಜ್ ಮತ್ತು ಐಟಿಬಿಟಿ ಇಲಾಖೆ ಸಚಿವರಾಗಲು ಕಾರಣವಾಗಿದೆ ಎಂದು ಶ್ರೀ ಸಿದ್ಧಲಿಂಗ ಮಹಾಸ್ವಾಮಿ ಆಂದೋಲಾ ಹೇಳಿದರು. ಪಟ್ಟಣದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಪ್ರವಚನ ಮೈದಾನದಲ್ಲಿ ವಿರಾಟ ಹಿಂದೂ ಸಮಾವೇಶದ ದಿಕ್ಸೂಚಿ ಭಾಷಣ ನೀಡಿದ ಅವರು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಲು ಮುಲ್ಲಾ, ಮೌಲ್ವಿಗಳಿಂದಲೇ ಈ ಸರ್ಕಾರ ಬಂದಿದೆ ಎಂದು ತಿಳಿದುಕೊಂಡು ಇವರನ್ನು ಬಂಧಿಸುವುದಿಲ್ಲ ಇದು ನಮ್ಮ ದುರ್ದೈವ,ನಮ್ಮ ವಿರೋಧಿಗಳು ಭಾರತದಲ್ಲಿ ಬಾಂಬ್ ಇಟ್ಟಿದ್ದರೂ, ದಾಳಿ ನಡೆಸಿದ್ದರೂ ಸಹ ಅಲುಗಾಡಿಸಲು ಆಗಿಲ್ಲ, ಇದು ಭಾರತದ ಶಕ್ತಿಯಾಗಿದೆ. 800 ವರ್ಷಗಳ ಕಾಲ ಮೊಘಲರು, ಬ್ರಿಟಿಷರು ಈ ದೇಶದಲ್ಲಿ ಆಳ್ವಿಕೆ ನಡೆಸಿದ್ದರೂ ಹಿಂದುತ್ವವನ್ನು ಅಳಿಸಲು ಆಗಿಲ್ಲ,ಕೆಲವರಿಗೆ ಹಿಂದೂ ಸಮ್ಮೇಳನ ಅಂದಾಗ ಮೆಣಸಿನಕಾಯಿ ಇಟ್ಟಂತೆ ಆಗುತ್ತೆ,ಆದರೆ ಇಫ್ತಾರ್ ಕೂಟ ಅಂದಾಗ ಮಾತ್ರ ಸಂತೋಷ ಪಡುತ್ತಾರೆ.

ಇಸ್ರೇಲ್, ಅಮೇರಿಕ ಜಂಟಿ ಕಾರ್ಯಾಚರಣೆ ನಡೆಸಿ ಇರಾನ್ ದೇಶದ ಅಲಿ ಖಮೇನಿ ಭೀಕರವಾಗಿ ಹತ್ಯೆ ಮಾಡಿ ತಕ್ಕಪಾಠ ಕಲಿಸಿದ್ದಾರೆ. ಆದರೆ ಕರ್ನಾಟಕದ ಕೆಲವು ಜನ ಮುಸ್ಲಿಂರು ಮಸೀದಿಯ ಮೈಕ್ ಮುಂದೆ ಗೋಳೋ ಎಂದು ಅಳುತ್ತಿದ್ದಾರೆ ಎಂದು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಆಗ್ರಹಿಸಿದರು. ವಂದೇ ಮಾತರಂ ಗೀತೆಯನ್ನು ಕಾಂಗ್ರೇಸ್ ನವರು ಮುಸ್ಲಿಂರ ಓಲೈಸಲು ಮಹಾತ್ಮಾಗಾಂಧಿ, ಪಂಡಿತ್ ಜವಾಹರಲಾಲ್ ನೆಹರು ಬ್ಯಾನ್ ಮಾಡಿದರು. ಆದರೆ ಈಗ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ ಅವರು ಈಗ ಕಡ್ಡಾಯವಾಗಿ ವಂದೇ ಮಾತರಂ ಗೀತೆ ಹಾಡಬೇಕು ಎಂದು ಆದೇಶ ಹೊರಡಿಸಿದ್ದಾರೆ. ಆದರೆ, ಅಸಾವುದ್ದೀನ್ ಓವೈಸಿ ಸೇರಿದಂತೆ ಮುಸ್ಲಿಂ ಸಂಘಟನೆಗಳ ನಾವು ಯಾವುದೇ ಕಾರಣಕ್ಕೂ ವಂದೇ ಮಾತರಂ ಹಾಡುವುದಿಲ್ಲ,ಬೇಕಾದರೆ ನೋವು ನಮ್ಮ ಕುತ್ತಿಗೆ ಕಟ್ ಮಾಡಿಕೊಡುತ್ತವೆ ಎಂದು ಹೇಳುವವರಿಗೆ ಕೆಳಗೆಯಿಂದ ಮೇಲಿನವರೆಗೆ ಕಟ್ ಮಾಡಿಕೊಂಡಿರುವ ಅಭ್ಯಾಸ ಇದೆ.ಒಂದು ವೇಳೆ ಹಾಡದಿದ್ದರೆ ನಿಮಗೆ ಪಾಕಿಸ್ತಾನಕ್ಕೆ ಕಳುಹಿಸುತ್ತೇವೆ ಎಂದು ಗುಡುಗಿದರು.

ಶ್ರೀ ಮರುಳಾರಾಧ್ಯ ಶಿವಾಚಾರ್ಯರು ಮಾತನಾಡಿ, ಹಿಂದೂ ಸಮಾಜದವರು ಧರ್ಮವನ್ನು ಮರೆಯುತ್ತಿದ್ದಾರೆ. ಈ ದೇಶದಲ್ಲಿ ಕೆಲವರು ಬದುಕಬೇಕಾದರೆ ಎ.ಪಿ.ಜೆ ಅಬ್ದುಲ್ ಕಲಾಂ ರೀತಿಯಲ್ಲಿ ಇರಬೇಕು, ಇಲ್ಲದಿದ್ದರೆ ನಿಮಗೆ ಪಾಕಿಸ್ತಾನಕ್ಕೆ ಕಳುಹಿಸುತ್ತೇವೆ. ಪುಲ್ವಾಮಾ ದಾಳಿಯಾದ ಸಂದರ್ಭದಲ್ಲಿ ಸೌಜನ್ಯಕ್ಕೂ ಶ್ರದ್ಧಾಂಜಲಿ ಸಲ್ಲಿಸಿದ ಅವಿವೇಕಿಗಳು ಈಗ ಇರಾನ್ ದೇಶದ ನಾಯಕ ಮೃತಪಟ್ಟಾಗ ಶ್ರದ್ಧಾಂಜಲಿ ಸಲ್ಲಿಸುತ್ತಾರೆ. ಗೋಹತ್ಯೆ, ಅಕ್ರಮವಾಗಿ ಚೌಕ್ ನಿರ್ಮಾಣ ಮಾಡುತ್ತಿದ್ದು,ಇದಕ್ಕೆ ಪೊಲೀಸ್ ಇಲಾಖೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

## ವಿದ್ಯುತ ಶಾರ್ಟ್ ಸರ್ಕಿಟ್‌ನಿಂದ ಮನೆ ಭಸ್ಮ: ಡಾ.ಫಾರುಕ್ ಮಣ್ಣೂರ ನೆರವು

• ಉದಯವಾಹಿನಿ, ಚಿಂಚೋಳಿ

ಇತ್ತೀಚೆಗೆ ವಿದ್ಯುತ ಶಾರ್ಟ್ ಸರ್ಕಿಟ್‌ನಿಂದ ಸೈಯದ ಇಬ್ರಾಹಿಂ ಎಂಬುವವರಿಗೆ ಸೇರಿದ ಮನೆ ಸಂಪೂರ್ಣವಾಗಿ ಸುಟ್ಟು ಹೋಗಿದ್ದು ಬಡ ಕುಟುಂಬ ತುಂಬ ಕಷ್ಟದಲ್ಲಿರುವುದನ್ನು ಅರಿತು ಕಲಬುರಗಿಯ ಮಣ್ಣೂರ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಹಾಗೂ ಸಮಾಜ ಸೇವಕ ಡಾ.ಫಾರುಕ್ ಮಣ್ಣೂರ ಭೇಟಿ ನೀಡಿ ವೈಯಕ್ತಿಕ ಧನ ಸಹಾಯ ಮಾಡಿದರು. ಚಿಂಚೋಳಿ ತಾಲ್ಲೂಕಿನ ಪ್ರೊಲಕಪಲ್ಲಿ ಗ್ರಾಮದಲ್ಲಿ ಸೈಯದ ಇಬ್ರಾಹಿಂ ಎಂಬುವವರಿಗೆ ಸೇರಿದ ಮನೆ ಸಂಪೂರ್ಣವಾಗಿ ಸುಟ್ಟುಹೋಗಿದ್ದು ಮನೆಯಲ್ಲಿರುವ ಒಡವೆ, ಬಟ್ಟೆ, ಮನೆ ಸಮಾಗ್ರಿ, ದಿನಸಿಗಳು ಸೇರಿದಂತೆ ಮನೆ ಸಂಪೂರ್ಣ ಸುಟ್ಟು ಭಸ್ಮವಾಗಿದ್ದು ಬಡ ಕುಟುಂಬ ತುಂಬಾ ಕಷ್ಟದಲ್ಲಿರುವುದನ್ನು ಅರಿತು ಪ್ರೊಲಕಪಲ್ಲಿ ಗ್ರಾಮದ ಸೈಯದ ಇಬ್ರಾಹಿಂ ಅವರ ಮನೆಗೆ ಭೇಟಿ ನೀಡಿ ಮನೆ ಪರಿಶಿಲಿಸಿ ವಯಕ್ತಿಕ ಧನ ಸಮಾಯಮಾಡಿದರು. ನಿಮ್ಮ ಸುತ್ತಮುತ್ತಲು ಯಾರೇ ಕಷ್ಟದಲ್ಲಿದರೆ ಸಹಾಯಕ್ಕೆ ಪ್ರತಿಯೊಬ್ಬರು ತಮ್ಮಿಂದ ಆದಷ್ಟು ಸಹಾಯಮಾಡುವುದರ ಮೂಲಕ ನೆರವಿಗೆ ಬರಬೇಕು ಎಂದು ಮನವಿ ಮಾಡಿದ್ದರು.

## ರೇಣುಕರ ಇತಿಹಾಸ ಯುವ ಪೀಳಿಗೆಗೆ ಪರಿಚಯಿಸಿ

**ಮಠಗಳನ್ನು ಕಟ್ಟಿ ಭಾವೈಕ್ಯತೆಗೆ ಅಡಿಪಾಯ**

**ಔರಾದ್:** ಮನು ಕುಲದ ಉದ್ಧಾರಕ ಧರ್ಮದಿಂದಲೆ ವಿಶ್ವಕ್ಕೆ ಶಾಂತಿ ಎಂದು ಸಾರಿದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರರ ತತ್ವಸಿದ್ಧಾಂತಗಳನ್ನು ಸಮಾಜಕ್ಕೆ ಪರಿಚಯಿಸುವ ಕಾರ್ಯ ನಾವೆಲ್ಲರೂ ಮಾಡಬೇಕಾಗಿದೆ ಎಂದು ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನಗರಾಧ್ಯಕ್ಷ ಅಮರಸ್ವಾಮಿ ಸ್ಥಾವರಮಠ ಹೇಳಿದರು. ಪಟ್ಟಣದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ನಡೆದ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವದಲ್ಲಿ ಮಾತನಾಡಿದ ಅವರು ಜಗತ್ತಿನಲ್ಲಿ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಬೋಧಿಸಿದ ಏಕೈಕ ಧರ್ಮ ಅದು ಆದಿ ಜಗದ್ಗುರು ರೇಣುಕಾಚಾರ್ಯರು ಸ್ಥಾಪಿತವಾದ ವೀರಶೈವ ಧರ್ಮ ಹದಿನೇಳು ಮಠಗಳನ್ನು ಕಟ್ಟಿ ಭಾವೈಕ್ಯತೆಗೆ ಅಡಿಪಾಯ ಹಾಕಿದರು ಅವರು ಜಗತ್ಕಲ್ಯಾಣಕ್ಕಾಗಿ ಮತ್ತು ಜನಕಲ್ಯಾಣಕ್ಕಾಗಿ ಪರಶಿವನ ಆದೇಶಾನುಸಾರ ಕೊಲನುಪಾಕ ಕ್ಷೇತ್ರದ


ಉದಯವಾಹಿನಿ ಚಿತ್ರ

ಸ್ವಯಂಭು ಶ್ರೀಸೋಮೇಶ್ವರ ಮಹಾಲಿಂಗದಿಂದ ಆವಿರ್ಭವಿಸಿದ ದಿನವೇ ಪಾಲ್ಗುಣ ಶುದ್ದತ್ರಯೋದಶಿ, ಕೆಲವು ಮಠಾಧೀಶರು ರೇಣುಕಾಚಾರ್ಯರ ಇತಿಹಾಸ ಮರೆಮಾಚಿ ವ್ಯಕ್ತಿ ಪ್ರಧಾನವಾಗಿ ನಡೆದುಕೊಳ್ಳುತ್ತಿದ್ದಾರೆ ಎಲ್ಲವೂ ಮಠಗಳು ಸಹ ರೇಣುಕಾಚಾರ್ಯರು ಸ್ಥಾಪಿಸಿದ ಪಂಚಪೀಠಗಳ ಶಾಖಾ ಮಠಗಳೆ, ಈ ಸತ್ಯವನ್ನು ನಾವು ಸಮಾಜಕ್ಕೆ ತಿಳಿಸುವ ಕಾರ್ಯ ಮಾಡಬೇಕು ಎಂದು ತಿಳಿಸಿದರು. ವೀರಶೈವ ಮಹಾಸಭಾ ಅಧ್ಯಕ್ಷ ಬಸವರಾಜ ದೇಶಮುಖ ಮಾತನಾಡಿ ತಾಲ್ಲೂಕು ವೀರಶೈವ ಲಿಂಗಾಯತ ಸಮಾಜ ಒಗ್ಗೂಡಿಸುವ ಕಾರ್ಯ, ರೇಣುಕಾಚಾರ್ಯರ ಇತಿಹಾಸ ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮುಂಬರುವ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜಯಂತಿ ಯುಗಮಾನೋತ್ಸವ ಆಚರಣೆ ಮಾಡೋಣ ಎಂದರು.

## ಪರಸ್ಪರ ಗೌರವದಿಂದ ಹೋಳಿ ರಂಜಾನ್ ಆಚರಿಸೋಣ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕರಜಗಿ

ಹೋಳಿ ಹಾಗೂ ರಂಜಾನ್ ಹಬ್ಬಗಳ ಹಿನ್ನೆಲೆ ಅಫಜಲಪುರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ ನಡೆಯಿತು. ಡಿವೈಎಸ್ಪಿ ತಮ್ಮ ರಾಯಗೌಡ ಪಾಟೀಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಬ್ಬಗಳ ಸಂದರ್ಭದಲ್ಲಿ ಯಾವುದೇ ಅತಿರೇಕದ ವರ್ತನೆ ತೋರಬಾರದು. ಶಾಂತಿ ಭಂಗ ಮಾಡುವ ಕೃತ್ಯಗಳಿಗೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಭಾರತ ಭಾವೈಕ್ಯತೆಯ ರಾಷ್ಟ್ರವಾಗಿದ್ದು, ಎಲ್ಲಾ ಸಮುದಾಯದವರು ಪರಸ್ಪರ ಗೌರವ, ಸಹೋದರಭಾವದಿಂದ ಹಬ್ಬಗಳನ್ನು ಆಚರಿಸಬೇಕು ಎಂದು ಅವರು ತಿಳಿಸಿದರು. ಸಿಪಿಐ ಲಖನ್ ಮಸಗುಪ್ಪಿ ಮಾತನಾಡಿ, ಮಾರ್ಚ್ 3ರಂದು ತಾಲ್ಲೂಕಿನಲ್ಲಿ ಹೋಳಿ ಹಬ್ಬ ಆಚರಿಸಲಾಗುತ್ತಿದೆ. ಇದೇ ಸಮಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಹಬ್ಬಗಳನ್ನು ಸಂಯಮದಿಂದ ಆಚರಿಸಬೇಕು ಎಂದು ಮನವಿ ಮಾಡಿದರು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿಯುತವಾಗಿ ಹಬ್ಬಗಳನ್ನು ಆಚರಿಸಲು ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಹಕರಿಸಬೇಕು ಎಂದರು. ಕಾನೂನು–ಸುವ್ಯವಸ್ಥೆ ಕಾಪಾಡುವಲ್ಲಿ ಸಾರ್ವಜನಿಕರ ಪಾತ್ರ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.


## ಖಾಸಗಿ ಶಿಕ್ಷಣ ಸಂಸ್ಥೆಗಳ ಸಮಸ್ಯೆ ಪರಿಹಾರಕ್ಕೆ ಕ್ರಮ

• ಉದಯವಾಹಿನಿ, ಬೀದರ್

ಮಾನ್ಯತೆ ನವೀಕರಣ ಪ್ರಕ್ರಿಯೆ ಸರಳಗೊಳಿಸುವುದು ಸೇರಿದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಭರವಸೆ ನೀಡಿದರು. ಬೆಂಗಳೂರಿನಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ನಿಯೋಗಕ್ಕೆ ಈ ಆಶ್ವಾಸನೆ ನೀಡಿದರು.

ಮಾನ್ಯತೆ ನವೀಕರಣಕ್ಕೆ ಹಲವು ಷರತ್ತು ವಿಧಿಸಿದ ಕಾರಣ ಸಂಸ್ಥೆಗಳು ತೊಂದರೆ ಅನುಭವಿಸಬೇಕಾಗಿದೆ. ಶಾಲಾ ಭೂ ಪರಿವರ್ತನೆ, 1 ಎಕರೆ ಆಟದ ಮೈದಾನ, 6 ವರ್ಷ ಪೂರೈಸಿದ ಮಕ್ಕಳಿಗಷ್ಟೇ 1ನೇ ತರಗತಿಗೆ ಪ್ರವೇಶ ಮೊದಲಾದ ನಿಯಮಗಳಿಂದ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಕಷ್ಟಕರವಾಗಿದೆ ಎಂದು ನಿಯೋಗದ ನೇತೃತ್ವ ವಹಿಸಿದ್ದ ಸಂಘದ ರಾಜ್ಯ ಅಧ್ಯಕ್ಷ ರೇವಣಸಿದ್ದಪ್ಪ ಜಲಾದೆ ತಿಳಿಸಿದರು.

ಆರ್.ಟಿ.ಇ. ಮರು ಜಾರಿಗೊಳಿಸಬೇಕು ಎಂದು ಬೇಡಿಕೆ ಮಂಡಿಸುತ್ತಲೇ ಬರಲಾಗಿದೆ. ಈವರೆಗೆ ಈ ದಿಸೆಯಲ್ಲಿ


ಉದಯವಾಹಿನಿ ಚಿತ್ರ

ಕ್ರಮ ಕೈಗೊಂಡಿಲ್ಲ. ಖಾಸಗಿ ಶಾಲಾ, ಕಾಲೇಜುಗಳ ಹಲವು ವರ್ಷಗಳ ಅನುದಾನದ ಬೇಡಿಕೆಯೂ ಈಡೇರಿಲ್ಲ ಎಂದು ಹೇಳಿದರು. ಇದಕ್ಕೆ ಸ್ಪಂದಿಸಿದ ರಶ್ಮಿ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳ ಸಮಸ್ಯೆ ಮನವರಿಕೆಯಾಗಿದೆ. 1 ಎಕರೆ ಆಟದ ಮೈದಾನ ನಿಯಮದಿಂದ ವಿನಾಯಿತಿ ಕಲ್ಪಿಸಲಾಗುವುದು. ಪಂಚಾಯಿತಿ ಮಟ್ಟದಲ್ಲೇ ಎ, ಬಿ ಖಾತೆ ಕೊಡುತ್ತಿರುವ ಕಾರಣ ಭೂ ಪರಿವರ್ತನೆ ಸಮಸ್ಯೆ ಬಾಧಿಸುವುದಿಲ್ಲ. 1ನೇ ತರಗತಿ ಪ್ರವೇಶಕ್ಕೆ ವಯೋಮಿತಿಯಲ್ಲಿ ಎರಡರಿಂದ ಮೂರು ತಿಂಗಳು ಸಡಿಲಿಕೆ ಕೊಡಲಾಗುವುದು. ಇತರ ಸಮಸ್ಯೆಗಳನ್ನೂ ಬಗೆಹರಿಸಲಾಗುವುದೆಂದು ಭರವಸೆ ನೀಡಿದ್ದಾರೆಂದು ರೇವಣಸಿದ್ದಪ್ಪ ಜಲಾದೆ ಹೇಳಿದ್ದಾರೆ.

## ರಾಜ್ಯ ಹೆದ್ದಾರಿ ಅಭಿವೃದ್ಧಿಗೆ ಹೊಸ ಚೈತನ್ಯ : ಅಂತಿಮ ಡಾಂಬರೀಕರಣಕ್ಕೆ ಚಾಲನೆ

• ಉದಯವಾಹಿನಿ, ಯಾದಗಿರಿ

ಬಹುಕಾಲದಿಂದ ನಿರೀಕ್ಷಿತವಾಗಿದ್ದ ರಾಜ್ಯ ಹೆದ್ದಾರಿ ಸುಧಾರಣಾ ಕಾಮಗಾರಿಗೆ ಮತ್ತೊಂದು ಮಹತ್ವದ ಹಂತ ಸೇರ್ಪಡೆಯಾಗಿ, ಫೈನಲ್ ಕೋಟ್ ಡಾಂಬರೀಕರಣ ಕಾರ್ಯಕ್ಕೆ ಅಧಿಕೃತ ಚಾಲನೆ ದೊರೆತಿದೆ. ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿರುವ ಈ ಯೋಜನೆ ನಗರ ಸಂಚಾರ ವ್ಯವಸ್ಥೆಗೆ ದೀರ್ಘಕಾಲಿಕ ಪರಿಹಾರ ನೀಡುವ ನಿರೀಕ್ಷೆ ಮೂಡಿಸಿದೆ.

ಹಳೆಯ ಬಸ್ ನಿಲ್ದಾಣದಿಂದ ವಡಗೇರಾ ಕ್ರಾಸ್ ವರೆಗೆ ರಸ್ತೆ ತೀವ್ರವಾಗಿ ಹದಗೆಟ್ಟು, ಗುಂಡಿಗಳು, ಅಸಮತೋಲನದಿಂದ ವಾಹನ ಸವಾರರು ಸಂಕಷ್ಟ ಅನುಭವಿಸುತ್ತಿದ್ದರು. ವಿಶೇಷವಾಗಿ ಮಳೆಗಾಲದಲ್ಲಿ ಅಪಘಾತಗಳ ಭೀತಿ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಹೋರಾಟಗಾರ ಉಮೇಶ್ ಕೆ. ಮುದ್ನಾಳ್ ಸಮಸ್ಯೆಯನ್ನು ಸಾರ್ವಜನಿಕವಾಗಿ ಎತ್ತಿಹಿಡಿದು, ತ್ವರಿತ ಕ್ರಮಕ್ಕೆ ಒತ್ತಾಯಿಸಿದ್ದರು.

ಈ ಸಂದರ್ಭದಲ್ಲಿ ಉಮೇಶ್ ಕೆ. ಮುದ್ನಾಳ್ ಮಾತನಾಡಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕೈಗೊಂಡ ಹೋರಾಟಕ್ಕೆ ಸ್ಪಂದಿಸಿ ಕಾಮಗಾರಿ ಪ್ರಾರಂಭಿಸಿರುವುದು ಸ್ವಾಗತಾರ್ಹ. ಆದರೆ ರಸ್ತೆ ಪೂರ್ಣಗೊಂಡ ನಂತರ ತಡೆಗೋಡೆ ನಿರ್ಮಾಣ, ಸ್ಪಷ್ಟ ಸೂಚಕ ಫಲಕಗಳ ಅಳವಡಿಕೆ, ಝೀಬ್ರಾ ಕ್ರಾಸ್ ಗುರುತುಗಳು ಹಾಗೂ ರಸ್ತೆ ವಿಭಜಕಗಳನ್ನು ತುರ್ತಾಗಿ ಅಳವಡಿಸಬೇಕು. ಸುರಕ್ಷತಾ ಕ್ರಮಗಳಿಲ್ಲದೆ ಅಭಿವೃದ್ಧಿ ಅಪೂರ್ಣ ಆಗುತ್ತದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಕಾಮಗಾರಿ ಕೈಗೊಳ್ಳಲಾಗಿದೆ**

**ಇದೀಗ ರೈಲ್ವೆ ಬ್ರಿಡ್ಜ್ ಮೇಲ್ಭಾಗದಿಂದ ಆರಂಭವಾಗಿ ಪ್ರಮುಖ ಭಾಗಗಳಲ್ಲಿ ಅಂತಿಮ ಡಾಂಬರಿಕರಣ ಕಾರ್ಯ ನಡೆಯುತ್ತಿದೆ. ರಸ್ತೆ ಸಮತೋಲನಗೊಳಿಸಿ, ಗುಣಮಟ್ಟದ ಡಾಂಬರಿಕರಣದ ಮೂಲಕ ದೀರ್ಘಾಯುಷ್ಯ ನೀಡುವಂತೆ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

ರಸ್ತೆ ಅಭಿವೃದ್ಧಿಯಿಂದ ನಗರ, ಸುತ್ತಮುತ್ತಲಿನ ಗ್ರಾಮಗಳ ಸಂಪರ್ಕ ಸುಗಮವಾಗಲಿದ್ದು, ವ್ಯಾಪಾರ-ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಸಾರ್ವಜನಿಕರು, ವಾಹನ ಸವಾರರು ಕಾಮಗಾರಿಯನ್ನು ಸ್ವಾಗತಿಸಿ, ಗುಣಮಟ್ಟ ಕಾಪಾಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದಾರೆ.

### ಗ್ರಾಮೀಣ ಭಾಗದ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ: ಎಸ್.ಎನ್.ಡಿ. ಶಾಲೆಯ ಸಾಧನೆಗೆ ಶ್ಲಾಘನೆ

# ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆಯುವವರಿಗೆ 25,000 ರೂ. ಬಹುಮಾನ

• ಉದಯವಾಹಿನಿ, ಮುದ್ದೇಬಿಹಾಳ

ಹಳ್ಳಿಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬ ಮಹತ್ವ ಆಕಾಂಕ್ಷೆಯೊಂದಿಗೆ ಆರಂಭವಾದ ಸಂಸ್ಥೆಗಳು ಇಂದು ಬಡವರ ಪಾಲಿನ ಆಶಾಕಿರಣವಾಗಿವೆ. ಮುದ್ದೇಬಿಹಾಳ ತಾಲ್ಲೂಕಿನ ಶೈಕ್ಷಣಿಕ ನಕ್ಷೆಯಲ್ಲಿ ಎಸ್‌ಎನ್‌ಡಿ ನ್ಯಾಷನಲ್ ಪಬ್ಲಿಕ್ ಶಾಲೆಯು ತನ್ನದೇ ಆದ ವಿಶಿಷ್ಟ ಛಾಪು ಮೂಡಿಸುತ್ತಿದೆ ಎಂದು ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ. ಅಸ್ಕಿ ಅವರು ಅಭಿಪ್ರಾಯಪಟ್ಟರು.

ಇತ್ತೀಚೆಗೆ ನಡೆದ ಶಾಲಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಭಾಗದ ನಾಗರಬೆಟ್ಟದಂತಹ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡುತ್ತಿವೆ. ಇದರ ಮುಂದುವರಿದ ಭಾಗವಾಗಿ, ಎಸ್.ಎನ್.ಡಿ. ಶಾಲೆಯ ಈ ವರ್ಷದ ಮೊದಲ ಎಸ್‌ಎಸ್‌ಎಲ್‌ಸಿ ಬ್ಯಾಚ್‌ನಲ್ಲಿ ಅತೀ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗೆ ಅಸ್ಕಿ ಫೌಂಡೇಶನ್ ವತಿಯಿಂದ 25,000 ರೂ. ನಗದು ಬಹುಮಾನ ನೀಡುವುದಾಗಿ ಘೋಷಿಸಿದರು.ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಸವಜ್ಯೋತಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಬಸವರಾಜ ಇಸ್ಲಾಂಪೂರ ಅವರು ಮಾತನಾಡಿ, ಕಷ್ಟದ ಹಾದಿಯಲ್ಲಿ ಬೆಳೆದು ಬಂದವರು ಮಾತ್ರ ಇಂತಹ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಲು ಸಾಧ್ಯ. ಸಾಧನೆ ಮಾಡುವ ಹಂಬಲವಿರುವ ಮಕ್ಕಳಿಗೆ ಪ್ರೋತ್ಸಾಹ ನೀಡಲು ತಾವು ಸದಾ ಸಿದ್ಧ ಎಂದ ಅವರು, ದ್ವಿತೀಯ ಸ್ಥಾನ ಪಡೆಯುವ ವಿದ್ಯಾರ್ಥಿಗೆ 11,000 ಬಹುಮಾನ ಪ್ರಕಟಿಸಿದರು.ಅಲ್ಲದೆ, ತೃತೀಯ, ನಾಲ್ಕು ಮತ್ತು ಐದನೇ ಸ್ಥಾನ ಪಡೆಯುವ ವಿದ್ಯಾರ್ಥಿಗಳಿಗೂ ವೇದಿಕೆಯಲ್ಲಿದ್ದ ಗಣ್ಯರಾದ ಕರಿಯಪ್ಪ ಆಸಂಗಿ, ನಾನಪ್ಪ ಲಮಾಣಿ, ಬಸವರಾಜ ಸಂಕನಾಳ ಅವರು ಬಹುಮಾನ ನೀಡುವುದಾಗಿ ಭರವಸೆ ನೀಡಿದರು. ಯರಝರಿ ಯಲ್ಲಾಲಿಂಗೇಶ್ವರ ಮಠದ ಮಲ್ಲಾರಲಿಂಗ ಸ್ವಾಮೀಜಿ ಅವರು ಆಶೀರ್ವಚನ ನೀಡಿ, ಎಂ.ಎಸ್. ಕೊಪ್ಪ ಅವರ ಶ್ರಮಕ್ಕೆ ಮಠವು ಸದಾ ಬೆನ್ನೆಲುಬಾಗಿ ಇರಲಿದೆ ಎಂದು ಹರಸಿದರು. ಕಾರ್ಯಕ್ರಮದಲ್ಲಿ ಮಹಾದೇವಪ್ಪ ವಿಶ್ವಕರ್ಮ, ವಿರೇಶ ಗುರುಮಠ, ಶಾಲೆಯ ಮುಖ್ಯಗುರುಮಾತೆ ರೇಖಾ ಎಂ.ಎಸ್, ಈರಣ್ಣ ಬಡಿಗೇರ, ಪಿಡಿಒ ಎಸ್.ಎ. ಲೋನಾರಮಠ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅಶೋಕ ಗುಂಡಿನಮನಿ ನಿರೂಪಿಸಿದರೆ, ಎಚ್.ಆರ್. ಬಾಗಲಕೋಟ ಸ್ವಾಗತಿಸಿದರು ಮತ್ತು ನಂದಿನಿ ಪವಾರ ಅವರು ವರದಿ ವಾಚಿಸಿದರು.


ಉದಯವಾಹಿನಿ ಚಿತ್ರ

**ಬಡವರ ಪಾಲಿನ ಆಶಾಕಿರಣ**

**ನಾನು ಒಬ್ಬ ಕೂಲಿಯಾಳಾಗಿ, ಗಾರೆ ಕೆಲಸಗಾರನಾಗಿ ಹಾಗೂ ಹೊಲದಲ್ಲಿ ಕೃಷಿ ಕಾರ್ಮಿಕನಾಗಿ ದುಡಿದಿದ್ದೇನೆ. ಬಡತನದ ನೋವು ನನಗೆ ಗೊತ್ತು. ಹಾಗಾಗಿಯೇ ಗ್ರಾಮೀಣ ಭಾಗದ ಮಕ್ಕಳು ಶಿಕ್ಷಣಕ್ಕಾಗಿ ಕಷ್ಟಪಡಬಾರದು ಎಂಬ ಏಕೈಕ ಉದ್ದೇಶದಿಂದ ಈ ಸಂಸ್ಥೆ ಕಟ್ಟಿದ್ದೇನೆ.**

**– ಎಂ.ಎಸ್. ಕೊಪ್ಪ, ಸಂಸ್ಥೆಯ ಅಧ್ಯಕ್ಷ**

# ಕುವೈತ್ ವಾಯುಪ್ರದೇಶದ ಮೇಲೆ ಅಮೆರಿಕದ ಎಫ್-15 ಯುದ್ಧ ವಿಮಾನ ಪತನ

**ಟೆಹರಾನ್ :** ಅಮೆರಿಕ - ಇರಾನ್ ಯುದ್ಧವು 3ನೇ ದಿನಕ್ಕೆ ಕಾಲಿಟ್ಟಿದೆ. ಸೋಮವಾರ ಕುವೈತ್‌ವಾಯು ಪ್ರದೇಶದ ಮೇಲೆ ಅಮೆರಿಕದ ಎಫ್-15 ಯುದ್ಧ ವಿಮಾನ ಪತನಗೊಂಡಿರುವುದಾಗಿ ವರದಿಯಾಗಿದೆ. ಮಧ್ಯ ಪ್ರಾಚ್ಯದಾದ್ಯಂತ ದಾಳಿಗಳು ವರದಿಯಾಗಿವೆ. ಪೈಲಟ್ ಸುರಕ್ಷಿತವಾಗಿ ವಿಮಾನದಿಂದ ಹೊರಜಿಗಿದಿದ್ದು, ಅವರು ಸುರಕ್ಷಿತರಾಗಿದ್ದಾರೆ ಎಂದು ದೃಢಪಡಿಸಲಾಗಿದೆ. ನೆಲದ ಮೇಲೆ ಬಿದ್ದಿರುವ ವಿಡಿಯೋಗಳು ಹರಿದಾಡುತ್ತಿವೆ.

ಪೇಟ್ರಿಯಾಟ್ ವಾಯು ರಕ್ಷಣಾ ಬ್ಯಾಟರಿಯಿಂದ ಜೆಟ್ ಬೆಂಕಿಗೆ ಬಲಿಯಾಗಿರಬಹುದು ಎಂದು ವರದಿಗಳು ಸೂಚಿಸಿವೆ.



ಪೇಟ್ರಿಯಾಟ್ ವ್ಯವಸ್ಥೆಯು ಅಮೆರಿಕ ವಿನ್ಯಾಸಗೊಳಿಸಿದ ವಾಯು ರಕ್ಷಣಾ ಬ್ಯಾಟರಿಯಾಗಿದ್ದು, ಇದು ಅತ್ಯಂತ ಮುಂದುವರಿದ ಮೇಲ್ಮೈಯಿಂದ ಕ್ಷಿಪಣಿ ವ್ಯವಸ್ಥೆಗಳಲ್ಲಿ ಒಂದಾಗಿದೆ. ಮೊಬೈಲ್ ಇಂಟರ್‌ಸೆಪ್ಟರ್ ಅನ್ನು ಬ್ಯಾಲಿಸ್ಟಿಕ್ ಕ್ಷಿಪಣಿಗಳು ಪ್ರತಿಕೂಲ ವಿಮಾನಗಳಂತಹ ಒಳಬರುವ ಬೆದರಿಕೆಗಳನ್ನು ಪ್ರತಿಬಂಧಿಸಲು ವಿನ್ಯಾಸಗೊಳಿಸಲಾಗಿದೆ.


ವಿಮಾನ ಪತನಗೊಳ್ಳುವ ಮೊದಲು ಪೈಲಟ್ ಯಶಸ್ವಿಯಾಗಿ ಹೊರಜಿಗಿದಿದ್ದಾರೆ, ಅವರು ಸುರಕ್ಷಿತ ಆಗಿದ್ದಾರೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಕುವೈತ್ ಇಂಟಿಗ್ರೇಟೆಡ್ ಪೆಟ್ರೋಲಿಯಂ ಇಂಡಸ್ಟ್ರೀಸ್ ಕಂಪನಿ ಮಿನಾ ಅಲ್ ಅಹ್ಮದಿ ಸಂಸ್ಕರಣಾಗಾರದೊಳಗೆ ವಿಮಾನದ ಅವಶೇಷಗಳು ಬಿದ್ದಿದ್ದು, ಇಬ್ಬರು ಕಾರ್ಮಿಕರು ಗಾಯಗೊಂಡಿದ್ದಾರೆ ಎಂದು ತಿಳಿಸಿದೆ. ಘಟನೆಯ ನಂತರ ಸ್ಥಳದಲ್ಲಿ ತುರ್ತು ತಂಡಗಳನ್ನು ನಿಯೋಜಿಸಲಾಗಿದೆ. ಸಂಘರ್ಷ ಉಲ್ಬಣಗೊಳ್ಳುತ್ತಿದ್ದು, ಜಾಗತಿಕ ವಾಯುಯಾನವನ್ನು ಅಸ್ತವ್ಯಸ್ತಗೊಳಿಸಿದೆ.

ಮಧ್ಯಪ್ರಾಚ್ಯದ ಪ್ರಮುಖ ವಿಮಾನ ನಿಲ್ದಾಣಗಳು ಮುಚ್ಚಲ್ಪಟ್ಟಿವೆ. ಅಂತರರಾಷ್ಟ್ರೀಯ ವಿಮಾನ ಪ್ರಯಾಣ ಅಡಚಣೆಗಳನ್ನು ಎದುರಿಸುತ್ತಿದೆ. ಇರಾನ್, ಇಸ್ರೇಲ್, ಲೆಬನಾನ್, ಯುಎಇ, ಸೌದಿ ಅರೇಬಿಯಾ, ಬಹರೇನ್, ಒಮನ್, ಇರಾಕ್, ಜೋರ್ಡಾನ್, ಕುವೈತ್. ಕತಾರ್‌ನಲ್ಲಿನ ವಾಯು ಪ್ರದೇಶವನ್ನು ಬಳಸದಂತೆ ಸೂಚಿಸಲಾಗಿದೆ. ಈ ಮಧ್ಯೆ, ಏರ್ ಇಂಡಿಯಾ ಭಾನುವಾರ ಇನ್ನೂ 22 ಅಂತಾರಾಷ್ಟ್ರೀಯ ವಿಮಾನ ಹಾರಾಟ ರದ್ದುಗೊಳಿಸಿದ್ದು, ಇದವರೆಗೂ 50 ವಿಮಾನಗಳ ಹಾರಾಟ ರದ್ದುಗೊಂಡಂತಾಗಿದೆ.

### 11 ರಾಷ್ಟ್ರಗಳ ಏರ್‌ಸ್ಪೇಸ್ ಬಳಸದಂತೆ ಸೂಚನೆ

**ಇರಾನ್, ಸೌದಿ ಅರೇಬಿಯಾ, ಯುಎಇ ಸೇರಿ 11 ದೇಶಗಳ ವಾಯು ಪ್ರದೇಶವನ್ನು ಮಾರ್ಚ್ 2ರವರೆಗೆ ಬಳಸದಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಭಾರತದ ವಿಮಾನಯಾನ ಸಂಸ್ಥೆಗಳಿಗೆ ಸಲಹೆ ನೀಡಿದೆ.**

## ವಯನಾಡ್ ಸಂತ್ರಸ್ತರಿಗೆ ಸರ್ಕಾರ ನೀಡಿದ ಮನೆಯಲ್ಲಿ ಇವೆ ಆಧುನಿಕ ಸೌಲಭ್ಯಗಳು



**ತಿರುವನಂತಪುರ:** ವಯನಾಡ್ ಭೂಕುಸಿತ ದುರಂತದ ಸಂತ್ರಸ್ತರಿಗೆ ಪುನರ್ವಸತಿ ಯೋಜನೆಯಡಿ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಮೊದಲನೇ ಹಂತವಾಗಿ ಮಾರ್ಚ್ 1ರಂದು 178 ಮನೆಗಳನ್ನು ಸರ್ಕಾರ ಹಸ್ತಾಂತರ ಮಾಡಿದೆ. 2024ರ ಜುಲೈನಲ್ಲಿ ವಯನಾಡ್‌ನ ಮೇಲ್ಪಾಡಿ ಪಂಚಾಯತ್‌ನ ಮುಂಡಕ್ಕೆ ಮತ್ತು ಚೂರಲ್‌ಲ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದ್ದರಿಂದ 350ಕ್ಕೂ ಅಧಿಕ ಮನೆಗಳು ಕೊಚ್ಚಿಹೋಗಿದ್ದವು. ಸಂತ್ರಸ್ತ ಕುಟುಂಬಗಳಿಗೆ ಕಟ್ಟ ಬೈಪಾಸ್ ಬಳಿಯ ಎಲ್‌ಸ್ಟನ್ ಎಸ್ಟೇಟ್ ಪ್ರದೇಶದಲ್ಲಿ 'ಟೌನ್‌ಶಿಪ್' ನಿರ್ಮಿಸಲಾಗುತ್ತಿದೆ.

64.4 ಎಕರೆ ಪ್ರದೇಶದಲ್ಲಿ 351 ಕೋಟಿ ವೆಚ್ಚದಲ್ಲಿ 400ಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಲಾಗುತ್ತಿದೆ. ಮಾರ್ಚ್ 1ರಂದು 178 ಮನೆಗಳನ್ನು ಹಸ್ತಾಂತರಿಸಲಾಗಿದ್ದು, ಶೀಘ್ರವೇ ಉಳಿದ ಮನೆಗಳು ಸಿದ್ಧವಾಗಲಿವೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಈ ಟೌನ್‌ಶಿಪ್‌ನಲ್ಲಿ 410 ಮನೆಗಳು ಬರಲಿದ್ದು, ಸಂತ್ರಸ್ತರಿಗೆ ಗೌರವಯುತ ಜೀವನ ನಡೆಸಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುತ್ತವೆ ಎಂದು ಅವರು ತಿಳಿಸಿದ್ದಾರೆ.

**ಮೊದಲ ಹಂತ: 178 ಮನೆಗಳ ಹಸ್ತಾಂತರ** ಮೊದಲ ಹಂತದಲ್ಲಿ 178 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು. ಅವುಗಳನ್ನು ಹಂಚಿಕೆ ಮಾಡಲಾಗಿದೆ. ಪ್ರತಿ ಮನೆಯು 1,000 ಚದರ ಅಡಿ ವಿಸ್ತೀರ್ಣ ಹೊಂದಿದ್ದು, 7 ಸೆಂಟ್ ಜಮೀನಿನಲ್ಲಿ ನಿರ್ಮಿಸಲಾಗಿದೆ. ಈ ಮನೆ ಮತ್ತು ಜಮೀನಿನ ಮಾಲೀಕತ್ವವನ್ನು ಫಲಾನುಭವಿಗಳಿಗೆ ನೀಡಲಾಗಿದೆ. ಪ್ರತಿ ಮನೆಗಳಲ್ಲಿ ಒಂದು ಮಾಸ್ಟರ್ ಸಹಿತ 3 ಬೆಡ್‌ರೂಂಗಳು, ಒಂದು ಹಾಲ್, ಅಡುಗೆ ಕೋಣೆ ಅದಕ್ಕೆ ಹೊಂದಿಕೊಂಡಂತೆ ಸ್ಟೋರ್ ರೂಂ, ಶೌಚಾಲಯ, ಸಿಟ್‌ಔಟ್ ಒಳಗೊಂಡಿದೆ. ಭವಿಷ್ಯದಲ್ಲಿ ಎರಡನೇ ಮಹಡಿ ನಿರ್ಮಿಸಲು ಅನುಕೂಲವಾಗುವಂತೆ ಈ ಮನೆಗಳ ಅಡಿಪಾಯವನ್ನು ಬಲಪಡಿಸಲಾಗಿದೆ. ಪ್ರತಿ ಮನೆಯಲ್ಲಿ ಹಾಸಿಗೆಗಳು, ಕಬೋರ್ಡ್‌ಗಳು, ಡೈನಿಂಗ್ ಟೇಬಲ್, ಕುರ್ಚಿಗಳು, ಎಲ್‌ಇಡಿ ಲೈಟಿಂಗ್ ಮತ್ತು ಇಂಧನ ದಕ್ಷತೆಯ ಬಿಎಲ್‌ಡಿಸಿ ಸೀಲಿಂಗ್ ಫ್ಯಾನ್‌ಗಳಿವೆ. ಅಲ್ಲದೆ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಡಿವೈಎಫ್‌ಐನಿಂದ ಎಲ್‌ಇಡಿ ಟಿವಿಗಳನ್ನು ವಿತರಿಸಲಾಗಿದೆ. ಪ್ರತಿ ಮನೆಯ ಮೇಲಾವಣಿಯಲ್ಲಿ ನೆಟ್-ಮೀಟರಿಂಗ್ ವ್ಯವಸ್ಥೆಯಡಿ 2 ಕಿಲೋವ್ಯಾಟ್ ಸೌರ ವಿದ್ಯುತ್ ಘಟಕವನ್ನು ಅಳವಡಿಸಲಾಗಿದೆ. ಇದರಿಂದ ವಿದ್ಯುತ್ ವೆಚ್ಚ ಕಡಿಮೆಯಾಗಲಿದೆ.

# ದೆಹಲಿಯಲ್ಲಿ ಭಾರತ-ಕೆನಡಾ ಪ್ರಧಾನಿ ಭೇಟಿ

### ದ್ವಿಪಕ್ಷೀಯ ಆರ್ಥಿಕ ಸಂಬಂಧಕ್ಕೆ ವೇಗ ನೀಡಲು 2030ರ ವೇಳೆಗೆ 50 ಬಿಲಿಯನ್ ವ್ಯಾಪಾರದ ಗುರಿ

**ಹೊಸದಿಲ್ಲಿ:** ಕಳೆದ ಕೆಲ ವರ್ಷಗಳಲ್ಲಿ ಹಳಿ ತಪ್ಪಿದ್ದ ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಸರಿದಾರಿಗೆ ತರಲು ಭಾರತ ಹಾಗೂ ಕೆನಡಾ ಪ್ರಯತ್ನಗಳನ್ನು ನಡೆಸುತ್ತಿದ್ದು, ಇದರ ಭಾಗವಾಗಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಭಾರತ ಪ್ರವಾಸ ಕೈಗೊಂಡಿದ್ದಾರೆ. ಈ ಪ್ರವಾಸದ ಭಾಗವಾಗಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, ಭಾರತದ ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯಲ್ಲಿ ಭೇಟಿಯಾಗಿದ್ದು, ಹಲವು ಮಹತ್ವದ ಒಪ್ಪಂದಗಳ ಕುರಿತು ಚರ್ಚೆ ಮಾಡಿದ್ದು, ಜಂಟಿ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಈ ಜಂಟಿ ಪತ್ರಿಕಾಗೋಷ್ಠಿಗೂ ಮುನ್ನ ಉಭಯ ನಾಯಕರು ಸಭೆ ನಡೆಸಿದ್ದು, ಇದರಲ್ಲಿ ತಂತ್ರಜ್ಞಾನದಿಂದ ಹಿಡಿದು ಸಾಂಸ್ಕೃತಿಕ ಸಹಕಾರದವರೆಗೆ ಹಲವು ಕ್ಷೇತ್ರಗಳ ತಿಳುವಳಿಕೆ ಒಪ್ಪಂದವನ್ನು ವಿನಿಮಯ ಮಾಡಿಕೊಂಡಿದ್ದಾರೆ.

- **ದೆಹಲಿಯಲ್ಲಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿ ಭೇಟಿ ಹಾಗೂ ಸಭೆ**
- **ಹಲವು ಮಹತ್ತರ ಒಪ್ಪಂದಗಳ ಮೂಲಕ ಕೆನಡಾ-ಭಾರತ ದ್ವಿಪಕ್ಷೀಯ ಸಂಬಂಧವನ್ನು ಪುನಶ್ಚೇತನಗೊಳಿಸುವ ಪ್ರಯತ್ನ**
- **2030ರ ವೇಳೆಗೆ 50ಬಿಲಿಯನ್ ದ್ವಿಪಕ್ಷೀಯ ವ್ಯಾಪಾರದ ಗುರಿಯೊಂದಿಗೆ ಅಇಕಂಕ್ಕೆ ಸಿದ್ಧತೆ**
- **ಜಂಟಿ ಸುದ್ದಿಗೋಷ್ಠಿಯಲ್ಲಿ ಸ್ವಾಮಿ ವಿವೇಕಾನಂದರ ಘೋಷವಾಕ್ಯ ಉಲ್ಲೇಖಿಸಿ ಗಮನ ಸೆಳೆದ ಕೆನಡಾ ಪ್ರಧಾನಿ**

ಇದಾದ ಬಳಿಕ ಜಂಟಿ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು ಮಾರ್ಕ್ ಕಾರ್ನಿಯವರ ಭಾರತ ಪ್ರವಾಸವನ್ನು ಮಹತ್ವಪೂರ್ಣ ಮೈಲಿಗಲ್ಲು ಎಂದು ಕರೆದಿದ್ದಾರೆ. ಈ ಬಗ್ಗೆ ಮಾತನಾಡುತ್ತಾ ಪ್ರಧಾನಿ ಕಾರ್ನಿ ಅವರನ್ನು ಭಾರತಕ್ಕೆ ಸ್ವಾಗತಿಸಲು ನನಗೆ ಸಂತೋಷವಾಗಿದೆ. ಪ್ರಧಾನಿಯಾಗಿ ಇದು ಅವರ ಮೊದಲ ಭಾರತ ಭೇಟಿಯಾಗಿದ್ದು, ಇದನ್ನು ನಾವು ಮಹತ್ವಪೂರ್ಣ ಮೈಲಿಗಲ್ಲು ಎಂದು ಪರಿಗಣಿಸುತ್ತೇವೆ.

**ಸರಿದಾರಿಗೆ ತರಲು ಪ್ರಯತ್ನ**



**ಒಪ್ಪಂದಕ್ಕೆ ಸಹಿ ಹಾಕಿದೆ**

### ಸ್ವಾಮಿ ವಿವೇಕಾನಂದರ ಘೋಷವಾಕ್ಯವನ್ನು ಉಲ್ಲೇಖಿಸಿ ಗಮನ ಸೆಳೆದಿದ್ದಾರೆ

**ಇತ್ತೀಚಿನ ವರ್ಷಗಳಲ್ಲಿ ಹಳಿ ತಪ್ಪಿದ್ದ ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಪುನಶ್ಚೇತನಗೊಳಿಸಲು ಉಭಯದೇಶಗಳು ಮುಂದಾಗಿದ್ದು,ಈ ಹಿನ್ನಲೆಯಲ್ಲಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಭಾರತ ಪ್ರವಾಸ ಕೈಗೊಂಡು ಭಾರತ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿದ್ದಾರೆ. ಇದಾದ ಬಳಿಕ ಉಭಯ ನಾಯಕರು ಜಂಟಿ ಸುದ್ದಿಗೋಷ್ಠಿ ನಡೆಸಿದ್ದು, 2030ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವನ್ನು 50ಬಿಲಿಯನ್ ತಲುಪಿಸಲು ಗುರಿಹೊಂದಿದ್ದು,ಈ ನಿಟ್ಟನಲ್ಲಿ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಶೀಘ್ರವೇ ಅಂತಿಮಗೊಳಿಸುವುದಾಗಿ ತಿಳಿಸಿದ್ದಾರೆ. ಇನ್ನು, ಈ ಸುದ್ದಿಗೋಷ್ಠಿಯಲ್ಲಿ ಕೆನಡಾ ಪ್ರಧಾನಿ ಕಾರ್ನಿ ಸ್ವಾಮಿ ವಿವೇಕಾನಂದರ ಘೋಷವಾಕ್ಯವನ್ನು ಉಲ್ಲೇಖಿಸಿ ಗಮನ ಸೆಳೆದಿದ್ದಾರೆ.**

ಈ ವೇಳೆ, ಕೆನಡಾದೊಂದಿಗೆ ಭಾರತ ಮಾಡಿಕೊಳ್ಳಲು ಯೋಜಿಸುತ್ತಿರುವ ಹಲವು ಉಪಕ್ರಮಗಳನ್ನು ಕುರಿತು ತಿಳಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಭಾರತ-ಕೆನಡಾ ನಡುವೆ 2030ರ ವೇಳೆಗೆ 50 ಬಿಲಿಯನ್ ಡಾಲರ್ ವ್ಯಾಪಾರವನ್ನು ಮಾಡುವ ಗುರಿಯನ್ನು ಹೊಂದಿದ್ದು, ಈ ವ್ಯಾಪಾರ ಸಂಬಂಧಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಯೋಜಿಸಲಾಗಿರುವ ಸಮಗ್ರ, ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಶೀಘ್ರವೇ ಅಂತಿಮಗೊಳಿಸಲು ನಿರ್ಧರಿಸಲಾಗಿದೆ ಎಂದಿದ್ದಾರೆ. ಇದರ ಜೊತೆಗೆ ಬಾಹ್ಯಾಕಾಶ, ತಂತ್ರಜ್ಞಾನ ಮತ್ತು ಖನಿಜಗಳಂತಹ ಕ್ಷೇತ್ರಗಳಲ್ಲಿ ಸಮನ್ವಯ ಸಾಧಿಸಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ ಎಂದು ತಿಳಿಸಿದ್ದಾರೆ.

**ಭಾರತದ ಇಂಧನ ಅಗತ್ಯ ಪೂರೈಸಲು ಕೆನಡಾ ಸಿದ್ಧ ಎಂದ ಕಾರ್ನಿ:** ಇದಾದ ಬಳಿಕ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಕಾರ್ನಿಯವರ ಮೊದಲ ಭೇಟಿಯಿಂದಲೇ ನಮ್ಮ ಸಂಬಂಧ ಚೈತನ್ಯಗೊಂಡಿದೆ ಹಾಗೂ ಪರಸ್ಪರ ನಂಬಿಕೆ ಮತ್ತು ಸಕಾರಾತ್ಮಕತೆ ಬೆಳೆದಿದೆ ಎಂದು ತಿಳಿಸಿದ್ದಾರೆ.

ಸದ್ಯದ ಭಾರತ-ಕೆನಡಾ ಸಂಬಂಧವನ್ನು ಪಾಲುದಾರಿಕೆಯ ಹೊಸ ಯುಗ ಎಂದು ಬಣ್ಣಿಸಿದ್ದಾರೆ. ಕೆನಡಾದ ಸುಮಾರು 2 ಮಿಲಿಯನ್ ಜನ ಭಾರತದ ಬೇರುಗಳನ್ನು ಹೊಂದಿದ್ದಾರೆ. ಇನ್ನು, ಉಭಯ ದೇಶಗಳು ರಕ್ಷಣಾ ಒಪ್ಪಂಗಳನ್ನು ನವೀಕರಿಸುತ್ತಿದೆ. ಅಲ್ಲದೆ, ಭಾರತದ ಇಂಧನ ಅಗತ್ಯಗಳನ್ನು ಪೂರೈಸಲು ಕೆನಡಾ ಉತ್ತಮ ಸ್ಥಾನದಲ್ಲಿದ್ದು, ಇದಕ್ಕಾಗಿ ಕೆನಡಾದ ಕಂಪನಿ ಕ್ಯಾಮೆಕೊ ಭಾರತಕ್ಕೆ ಯುರೇನಿಯಂ ಪೂರೈಸುವ ದೀರ್ಘಾವಧಿಯ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ತಿಳಿಸಿದ್ದಾರೆ. ಇನ್ನು, CEPA ಒಪ್ಪಂದವನ್ನು ಈ ವರ್ಷದ ಅಂತ್ಯದೊಳಗೆ ಅಂತಿಮಗೊಳಿಸುವ ಗುರಿಯೊಂದಿಗೆ ಉಭಯ ದೇಶಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ. ಇನ್ನು, ತಮ್ಮ ಭಾಷಣದ ಅಂತ್ಯದಲ್ಲಿ ಸ್ವಾಮಿ ವಿವೇಕಾನಂದರನ್ನು ಉಲ್ಲೇಖಿಸಿದ್ದು, ವಿವೇಕಾನಂದರು ತಮ್ಮ ವಿಶ್ವಪ್ರವಾಸದ ಸಮಯದಲ್ಲಿ ಕೆನಡಾದ ವ್ಯಾಂಕೋವರ್, ವಿನ್ನಿಪೆಗ್ ನಲ್ಲಿಯೂ ಸಮಯ ಕಳೆದಿದ್ದಾರೆ.

ಇನ್ನು ಅವರ ಧ್ಯೇಯವಾಕ್ಯವಾಗಿರುವ ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿ ತಲುಪುವವರೆಗೆ ನಿಲ್ಲಬೇಡಿ ಎಂಬುದನ್ನು ಭಾರತ-ಕೆನಡಾ ಅಳವಡಿಸಿಕೊಳ್ಳಲಿದ್ದು, ಗುರಿಗಳನ್ನು ತಲುಪುವವರೆಗೆ ತಮ್ಮ ಪಾಲುದಾರಿಕೆಯನ್ನು ನಿಲ್ಲಿಸುವುದಿಲ್ಲ ಎಂದು ಭಾಷಣವನ್ನು ಮುಕ್ತಾಯಗೊಳಿಸಿದ್ದಾರೆ.

# ಕೇರಳವನ್ನು ಕೇರಳಂ ಮಾಡಿದಂತೆ ಆಂಧ್ರವನ್ನು ತೆಲುಗು ನಾಡು ಎಂದು ಘೋಷಿಸಿ: ರಾವ್

**ಅಮರಾವತಿ:** ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸಲು ಒಪ್ಪಿಗೆ ನೀಡಿದಂತೆ ಆಂಧ್ರಪ್ರದೇಶವನ್ನು 'ತೆಲುಗು ನಾಡು' ಎಂದು ಮರುನಾಮಕರಣ ಮಾಡಬೇಕು ಎಂದು ಖ್ಯಾತ ತೆಲುಗು ವಿದ್ವಾಂಸ ಗರಿಕಾಪತಿ ನರಸಿಂಹ ರಾವ್ ಒತ್ತಾಯಿಸಿದ್ದಾರೆ. ಅಮಲಪುರಂನಲ್ಲಿ ನಡೆಯುತ್ತಿರುವ ವಿಶ್ವ ತೆಲುಗು ಸಮ್ಮೇಳನದಲ್ಲಿ ಮಾತನಾಡಿದ ಅವರು, 'ತಮಿಳುನಾಡು, ಕೇರಳಂ ಮುಂತಾದ ಹೆಸರುಗಳಲ್ಲಿ ಪ್ರತಿಫಲಿಸುವ ಗುರುತು, ಸಾಂಸ್ಕೃತಿಕ ಹೆಮ್ಮೆಯಿಂದ ಪ್ರೇರಿತರಾಗಿ ಆಂಧ್ರಪ್ರದೇಶವನ್ನು 'ತೆಲುಗು ನಾಡು' ಎಂದು ಮರುನಾಮಕರಣ ಮಾಡಬೇಕೆಂದು ಕರೆ ನೀಡಿದ್ದಾರೆ. ಈ ಮೂಲಕ ತೆಲುಗು ಭಾಷೆಯ ಶ್ರೀಮಂತ ಪರಂಪರೆಯನ್ನು ಎತ್ತಿ ಹಿಡಿಯಬೇಕು' ಅವರು ಆಗ್ರಹಿಸಿದ್ದಾರೆ.



ಆಂಧ್ರಪ್ರದೇಶ ಎಂಬುದು ತೆಲುಗು ಹೆಸರಲ್ಲ. ಇದು ಹಿಂದಿ ಬೆಂಬಲಿತ ಮಧ್ಯಪ್ರದೇಶ ಮತ್ತು ಅರುಣಾಚಲ ಪ್ರದೇಶದಂತಹ ಉತ್ತರ ಭಾರತದ ರಾಜ್ಯಗಳಿಗೆ ಹೋಲುವಂತಿದೆ.

ನಮ್ಮ ರಾಜ್ಯ (ಆಂಧ್ರಪ್ರದೇಶ) ಮತ್ತಷ್ಟು ಸಾಂಸ್ಕೃತಿಕ ಮಹತ್ವ ಹೊಂದಬೇಕಾದರೆ ತಮಿಳುನಾಡಿನಂತೆಯೇ 'ತೆಲುಗು ನಾಡು' ಎಂದು ಮರುನಾಮಕರಣ ಮಾಡುವುದು ಅತ್ಯಗತ್ಯ ಎಂದು ಅವರು ಹೇಳಿದ್ದಾರೆ.

ಹಿರಿಯ ನಟ, ರಾಜಕಾರಣಿ ಎನ್.ಟಿ. ರಾಮರಾವ್ ಅವರು ಆಂಧ್ರ ಪ್ರದೇಶವನ್ನು 'ತೆಲುಗು ನಾಡು' ಎಂದು ಘೋಷಿಸುವಂತೆ ಒತ್ತಾಯಿಸಿ ಚಳವಳಿಯನ್ನು ನಡೆಸಿದ್ದರು. ತೆಲುಗು ನಾಡು ಎಂಬುದಕ್ಕೆ ಸರಿಯಾದ ತೆಲುಗು ಉಚ್ಚಾರಣೆ ಇದೆ, ಇದು ಈ ರಾಜ್ಯಕ್ಕೆ ಸೂಕ್ತ ಹೆಸರು ಎಂದು ನರಸಿಂಹ ರಾವ್ ಅವರು ಅಭಿಪ್ರಾಯಪಟ್ಟಿದ್ದಾರೆ.

**ಜಿಬಿಎ ಚುನಾವಣೆ:** ಜೆಡಿಎಸ್ ಉನ್ನತ ಮಟ್ಟದ ಸಮಿತಿಗೆ ಸದಸ್ಯರಾಗಿ ಟಿ.ಎ.ಶರವಣ ನೇಮಕ ತಮಿಳುನಾಡು, ಕೇರಳದ ಜನರು ಭಾಷೆಯ ಬಗ್ಗೆ ಹೊಂದಿರುವ'ಷ್ಟು ಪ್ರೀತಿಯನ್ನು ನಮ್ಮ ರಾಜ್ಯದ ಜನರು ಹೊಂದಿಲ್ಲ. ಭಾಷೆಯ ವಿಷಯವಾಗಿ ರಾಜ್ಯದ ಜನರ ಮನಸ್ಥಿತಿ ಬದಲಾಗಬೇಕು. ಹಾಗೆಯೇ ಭವಿಷ್ಯದ ಪೀಳಿಗೆಗೆ ನಮ್ಮ ಭಾಷಾ , ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವಂತಹ ಕೆಲಸ ಮಾಡಬೇಕು ಎಂದೂ ಅವರು ತಿಳಿಸಿದ್ದಾರೆ.

ಗರಿಕಾಪತಿ ನರಸಿಂಹ ರಾವ್ ಅವರ ಪ್ರಸ್ತಾಪವು ಗುರುತು, ಪರಂಪರೆ, ಭಾಷೆ ಮತ್ತು ಪ್ರಾದೇಶಿಕ ಭಾವನೆಗಳ ಕುರಿತು ರಾಜಕೀಯ, ಸಾಂಸ್ಕೃತಿಕ ವಲಯದಲ್ಲಿ ವ್ಯಾಪಕ ಚರ್ಚೆ ಹುಟ್ಟುಹಾಕಿದೆ.

'ತೆಲುಗು ನಾಡು' ಎಂಬ ಹೆಸರು ತೆಲುಗು ಜನರ ಭಾಷೆ ಮತ್ತು ಸಾಂಸ್ಕೃತಿಕ ಗುರುತನ್ನು ಪ್ರತಿಬಿಂಬಿಸುತ್ತದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆಂಧ್ರಪ್ರದೇಶವನ್ನು 'ತೆಲುಗು ನಾಡು' ಎಂದು ಘೋಷಣೆ ಮಾಡಿದ್ದೆ ಆದಲ್ಲಿ ರಾಜಕೀಯ, ಆಡಳಿತಾತ್ಮಕ ಪರಿಣಾಮಗಳು ಬೀರಬಹುದು ಎಂದು ವಿಮರ್ಶಕರು ಹೇಳಿದ್ದಾರೆ.

# ನಾಗುರ ಕಾರ್ಖಾನೆ ಸ್ಫೋಟ ಪ್ರಕರಣ: ಕಂಪನಿಯ ಒಂಬತ್ತು ನಿರ್ದೇಶಕರ ಬಂಧನ



**ನಾಗುರ:** ಮಹಾರಾಷ್ಟ್ರದ ನಾಗುರ ಜಿಲ್ಲೆಯ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟ ಪ್ರಕರಣ ಸಂಬಂಧ, ಸ್ಫೋಟಕ ತಯಾರಿಕಾ ಕಂಪನಿಯ ಒಂಬತ್ತು ಮಂದಿ ನಿರ್ದೇಶಕರನ್ನು ಪೊಲೀಸರು ಬಂಧಿಸಿದ್ದಾರೆ.'ಎಸ್‌ಬಿಎಲ್ ಎನರ್ಜಿ ಲಿಮಿಟೆಡ್'ನ 21 ಮಂದಿ ನಿರ್ದೇಶಕರು, ಷೇರುದಾರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 105ರ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಈವರೆಗೆ ಒಂಬತ್ತು ಮಂದಿ ನಿರ್ದೇಶಕರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಟೋಲ್ ತಾಲ್ಲೂಕಿನ ಗಣಿಗಾರಿಕೆ ಮತ್ತು ಕೈಗಾರಿಕಾ ಸ್ಫೋಟಕ ತಯಾರಿಕಾ ಕಾರ್ಖಾನೆ 'ಎಸ್‌ಬಿಎಲ್ ಎನರ್ಜಿ ಲಿಮಿಟೆಡ್'ನಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ಕನಿಷ್ಠ 18 ಕಾರ್ಮಿಕರು ಸುಟ್ಟು ಕರಕಲಾಗಿದ್ದು, 24 ಮಂದಿ ಗಾಯಗೊಂಡಿದ್ದಾರೆ ಅವರಲ್ಲಿ ಹೆಚ್ಚಿನವರ ಸ್ಥಿತಿ ಗಂಭೀರವಾಗಿದೆ.

ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ, ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ನಿರ್ದೇಶನಾಲಯ ನೀಡಿದ ಪ್ರಾಥಮಿಕ ವರದಿಯಲ್ಲಿ ಸುರಕ್ಷತಾ ದೋಷಗಳು ಪತ್ತೆಯಾಗಿವೆ ಎಂದು ನಾಗುರ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಹರ್ಷ ಪೊದ್ದಾರ್ ತಿಳಿಸಿದ್ದಾರೆ.

ಈ ವರದಿಯನ್ನಾಧರಿಸಿ ಪೊಲೀಸರು ಕಂಪನಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಬಂಧಿತರನ್ನು ವಿಚಾರಣೆಗೆ ಒಳಪಡಿಲಾಗಿದ್ದು, ಉಳಿದ ಆರೋಪಿಗಳನ್ನು ಬಂಧಿಸಲು ಪ್ರಯತ್ನ ನಡೆಯುತ್ತಿವೆ ಎಂದೂ ಅವರು ಹೇಳಿದ್ದಾರೆ.

# ಇಸ್ರೇಲ್-ಇರಾನ್ ಯುದ್ಧ ಭೀತಿಗೆ ಕುಸಿದ ಷೇರು ಮಾರುಕಟ್ಟೆ

**ಮುಂಬೈ:** ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವಿನ ಹೆಚ್ಚುತ್ತಿರುವ ಉದ್ವಿಗ್ನತೆಗಳು ದಲಾಲ್ ಸ್ಟ್ರೀಟ್‌ನಲ್ಲಿ ವ್ಯಾಪಕ ಮಾರಾಟಕ್ಕೆ ಕಾರಣವಾಗಿ ಸೋಮವಾರ ಭಾರತೀಯ ಮಾರುಕಟ್ಟೆಗಳು ಭಾರಿ ಹಿನ್ನೆಡೆಗೆ ಒಳಗಾಗಿವೆ. ಮಾತ್ರವಲ್ಲ 7.8 ಲಕ್ಷ ಕೋಟಿ ರೂ.ಗಳ ನಷ್ಟ ಕಂಡಿದೆ. 30 ಷೇರುಗಳ ಸೆನ್ಸೆಕ್ಸ್ ಆರಂಭಿಕ ವಹಿವಾಟಿನಲ್ಲಿ 2,743 ಪಾಯಿಂಟ್‌ಗಳಷ್ಟು ಕುಸಿದು ದಿನದ ಕನಿಷ್ಠ 78,543.73 ಕ್ಕೆ ತಲುಪಿತು, ಆದರೆ ನಿಫ್ಟಿ 50 519 ಪಾಯಿಂಟ್‌ಗಳ ಕುಸಿತದೊಂದಿಗೆ 24,659.25 ಕ್ಕೆ ತಲುಪಿತು. ಸೆಷನ್‌ನ ಮಧ್ಯದ ವೇಳೆಗೆ, ಸೆನ್ಸೆಕ್ಸ್ ತನ್ನ ನಷ್ಟದ ಭಾಗವನ್ನು ಹಿಮ್ಮೆಟ್ಟಿಸಿಕೊಂಡಿತ್ತು ಆದರೆ ಇನ್ನೂ 1,087.65 ಪಾಯಿಂಟ್‌ಗಳು ಅಥವಾ 1.34 ಶೇಕಡಾ ಕುಸಿದು 80,199.54 ಕ್ಕೆ ತಲುಪಿತ್ತು ಮತ್ತು ನಿಫ್ಟಿ 323.60 ಪಾಯಿಂಟ್ ಅಥವಾ 1.29 ಶೇಕಡಾ ಕುಸಿದು 24,855.05 ಕ್ಕೆ ತಲುಪಿತ್ತು. ಈ ಕ್ರೂರ ಕುಸಿತವು



ಹೂಡಿಕೆದಾರರ ಸಂಪತ್ತಿನಲ್ಲಿ ಸುಮಾರು 7.8 ಲಕ್ಷ ಕೋಟಿ ರೂ.ಗಳನ್ನು ನಾಶಮಾಡಿತು, ಬಿಎಸ್‌ಇಯ ಮಾರುಕಟ್ಟೆ ಬಂಡವಾಳೀಕರಣವನ್ನು ಹಿಂದಿನ ವಹಿವಾಟಿನಲ್ಲಿ ರೂ. 463.50 ಲಕ್ಷ ಕೋಟಿಗಳಿಂದ ರೂ. 455.70 ಲಕ್ಷ ಕೋಟಿಗೆ ಇಳಿಸಿತು.ಹೆವಿವೇಯ್ಟ್‌ಗಳು ಹೆಚ್ಚಿನ ಹಾನಿಯನ್ನುಂಟುಮಾಡಿದವು. ಲಾರ್ಸೆನ್ ಟೂಬ್ರೊ, ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್, ಮಹೀಂದ್ರಾ, ಭಾರ್ತಿ ಏರ್‌ಟೆಲ್, ಎಚ್‌ಡಿಎಫ್‌ಸಿ ಬ್ಯಾಂಕ್, ಎಟರ್ನಲ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾನದಂಡಗಳಲ್ಲಿ ಪ್ರಮುಖ ಕುಸಿತಗಳಲ್ಲಿ ಸೇರಿವೆ. ಬಿಎಸ್‌ಇಯಲ್ಲಿ 677 ಷೇರುಗಳು 52 ವಾರಗಳ ಕನಿಷ್ಠ ಮಟ್ಟವನ್ನು ತಲುಪಿದವು, ಇದರಲ್ಲಿ ಆವಾಸ್ ಫೈನಾನ್ಸಿಯರ್ಸ್, ಅಬಾಟ್ ಇಂಡಿಯಾ, ಆದಿತ್ಯ ಬಿರ್ಲಾ ಲೈಫ್ ಸ್ಟೈಲ್ ಬ್ರಾಂಡ್ಸ್, ಎಸಿಸಿ, ಅಫ್ಕಾನ್ಸ್ ಇನ್ಫ್ರಾಸ್ಟ್ರಕ್ಚರ್, ಅಲ್ಕೈಲ್ ಅಮೈನ್ಸ್ ಕೆಮಿಕಲ್ಸ್ ಮತ್ತು ಅಲೋಕ್ ಇಂಡಸ್ಟ್ರೀಸ್ ಮುಂತಾದ ಬಿಎಸ್‌ಇ 500 ಹೆಸರುಗಳು ಸೇರಿವೆ. ಇದಕ್ಕೆ ವ್ಯತಿರಿಕ್ತವಾಗಿ, ಕೇವಲ 48 ಷೇರುಗಳು ಹೊಸ ಒಂದು ವರ್ಷದ ಗರಿಷ್ಠ ಮಟ್ಟವನ್ನು ತಲುಪುವಲ್ಲಿ ಯಶಸ್ವಿಯಾದವು.

**7.8 ಲಕ್ಷ ಕೋಟಿ ರೂ. ನಷ್ಟ**


**ಮಾರುಕಟ್ಟೆ ವಿಸ್ತಾರವು ಕಥೆಯನ್ನು ಹೇಳುತ್ತದೆ:** ಸಕ್ರಿಯವಾಗಿ ವಹಿವಾಟು ನಡೆಸಲಾದ 3,765 ಷೇರುಗಳಲ್ಲಿ, 3,014 ಷೇರುಗಳು ನಷ್ಟದಲ್ಲಿದ್ದವು, ಕೇವಲ 596 ಮುನ್ನಡೆ ಸಾಧಿಸಿದವು ಮತ್ತು 155 ಷೇರುಗಳು ಬದಲಾಗದೆ ಇದ್ದವು. ವಿದೇಶಿ ಹೂಡಿಕೆದಾರರು ಮಾರಾಟದ ನೇತೃತ್ವ ವಹಿಸಿದ್ದರು, ಅವರು ಹಿಂದಿನ ಅವಧಿಯಲ್ಲಿ ನಿವ್ವಳ 7,536.36 ಕೋಟಿ ಷೇರುಗಳನ್ನು ಆಫ್‌ಲೋಡ್ ಮಾಡಿದರು, ದೇಶೀಯ ಸಂಸ್ಥೆಗಳು 12,292.81 ಕೋಟಿ ರೂ. ನಿವ್ವಳ ಖರೀದಿಯೊಂದಿಗೆ ಹೆಜ್ಜೆ ಹಾಕಿದವು.ದುರ್ಬಲ ಜಾಗತಿಕ ಸೂಚನೆಗಳು ಬೆಂಕಿಗೆ ಇಂಧನ ತುಂಬಿಸಿದವು.

# ಸರ್ವ ಭಾರತೀಯರ ಸುರಕ್ಷಿತಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ

### ರಾಯಭಾರ ಕಚೇರಿಯ ಜೊತೆ ನಿರಂತರ ಸಂಪರ್ಕ : ಕನ್ನಡಿಗರನ್ನು ತಾಯ್ನಾಡಿಗೆ ಕರೆತರಲು ಕೇಂದ್ರ ಸರ್ಕಾರ ಸನ್ನದ್ಧ


**ಹೊಸದಿಲ್ಲಿ :** ಇರಾನ್-ಇಸ್ರೇಲ್ ಯುದ್ಧ ಸನ್ನಿವೇಶದಲ್ಲಿ ಸಂಕಷ್ಟದಲ್ಲಿ ಸಿಲುಕಿದ ಎಲ್ಲಾ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಕೇಂದ್ರ ಸರ್ಕಾರ ಸನ್ನದ್ಧವಾಗಿದೆ. ಅಲ್ಲಿನ ರಾಯಭಾರಿ ಕಚೇರಿ ಉನ್ನತ ಅಧಿಕಾರಿಗಳ ಜತೆ ಮಾತುಕತೆ ನಡೆಸಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಜಗತ್ತಿನ ಎಲ್ಲೇ ಆಗಲಿ ಕನ್ನಡಿಗರು ಸೇರಿದಂತೆ ಭಾರತೀಯರು ಸಂಕಷ್ಟಕ್ಕೆ ಸಿಲುಕಿದಾಗ ಕೇಂದ್ರ ಸರ್ಕಾರ ಸುರಕ್ಷಿತವಾಗಿ ಕರೆ ತಂದಿದೆ. ಹಿಂದೆ ಯುಕ್ರೇನ್ ಅಲ್ಲಿ ಸಿಲುಕಿದ್ದವರನ್ನು ಮರಳಿ ಕರೆ ತಂದಿದ್ದೇವೆ. ಭಾರತೀಯರು ಎಲ್ಲೇ ಇದ್ದರೂ ಅವರ ಸುರಕ್ಷತೆಗೆ ಕೇಂದ್ರ ಸರ್ಕಾರ ಪ್ರಥಮ ಆದ್ಯತೆ ನೀಡುತ್ತದೆ ಎಂದು ಪ್ರಲ್ಹಾದ ಜೋಶಿ ಹೇಳಿದ್ದಾರೆ. ಇರಾನ್-ಇಸ್ರೇಲ್ ಯುದ್ಧದ ಭೀಕರತೆಯಿಂದಾಗಿ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಮಾಹಿತಿಯಿದ್ದು, ಈ ಸಂಬಂಧ ಹಿರಿಯ ಸಚಿವರೊಂದಿಗೆ ತುರ್ತು ಚರ್ಚೆ ನಡೆಸಿದ್ದು, ಎಲ್ಲಾ ಕನ್ನಡಿಗರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜೋಶಿ ತಿಳಿಸಿದ್ದಾರೆ.

**ಕನ್ನಡಿಗರು ಆತಂಕ ಪಡಬೇಕಿಲ್ಲ:** ಕನ್ನಡಿಗರು ಮಾತ್ರವಲ್ಲ ಭಾರತೀಯರನ್ನೆಲ್ಲ ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಸರ್ವ ಸನ್ನದ್ಧವಾಗಿದೆ. ಈಗಾಗಲೇ ರಾಯಭಾರಿ ಅಧಿಕಾರಿಗಳ ಜತೆ ಮಾತುಕತೆ ನಡೆಸಲಾಗಿದೆ.



**ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡದ ಹಿನ್ನಲೆಯಲ್ಲಿ ದುಬೈ, ಕತಾರ್ ಸೇರಿದಂತೆ, ಹಲವು ದೇಶಗಳ ಪ್ರಮುಖ ವಿಮಾನ ನಿಲ್ದಾಣವನ್ನು ಬಂದ್ ಮಾಡಲಾಗಿದೆ. ಸಾವಿರಾರು ಭಾರತೀಯರು, ಸ್ವದೇಶಕ್ಕೆ ಮರಳಲಾಗದೇ ಪರದಾಡುತ್ತಿದ್ದಾರೆ. ಹೊರ ದೇಶದಲ್ಲಿ ಇರುವವರನ್ನು ತಾಯ್ನಾಡಿಗೆ ಕರೆತರುವ ಕೆಲಸ, ಕೇಂದ್ರ ಸರ್ಕಾರ ಮಾಡುತ್ತಿದೆ.**

**-ಪ್ರಲ್ಹಾದ ಜೋಶಿ , ಸಚಿವ**



ಯಾರೊಬ್ಬರೂ ಆತಂಕ ಪಡಬೇಕಿಲ್ಲ ಎಂದು ಸಚಿವ ಪ್ರಹ್ಲಾದ ಜೋಶಿ, ಆತಂಕಿತ ಕುಟುಂಬಸ್ಥರಿಗೆ ಸ್ಥೈರ್ಯ ಹೇಳಿದ್ದಾರೆ. ಯುದ್ಧಪೀಡಿತ ಪ್ರದೇಶಗಳಲ್ಲಿ ವಿಮಾನ ಸಂಚಾರ ಅಪಾಯಕಾರಿ ಆಗಿದ್ದು, ತಜ್ಞರ ಸಲಹೆ ಪಡೆಯಲಾಗುತ್ತಿದೆ. ಭಾರತೀಯರ ಸುರಕ್ಷತೆಯೇ ಸರ್ಕಾರದ ಮೊದಲ ಆದ್ಯತೆ ಎಂದಿರುವ ಸಚಿವರು, ವಿಧಾನಪರಿಷತ್ ಸದಸ್ಯ ಭೋಜೇಗೌಡರು ಸೇರಿದಂತೆ ಸಂಕಷ್ಟದಲ್ಲಿರುವ ಎಲ್ಲಾ ಕನ್ನಡಿಗರ ರಕ್ಷಣೆಗೆ ಶ್ರಮಿಸುತ್ತೇವೆಂದು ಜೋಶಿ ಹೇಳಿದ್ದಾರೆ.

**ದುಬೈನಲ್ಲಿ ಸಿಲುಕಿದ ಕನ್ನಡಿಗರನ್ನು ಕರೆತರುತ್ತೇವೆ:** ದುಬೈನಲ್ಲಿ ಸಿಲುಕಿದ ಕನ್ನಡಿಗರನ್ನು ಕರೆತರುತ್ತೇವೆ, ಇರಾನ್-ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧದ ವೇಳೆ ದುಬೈನಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆ ನಮ್ಮ ಆದ್ಯತೆಯಾಗಿದೆ. ಯಾರೂ ಆತಂಕಪಡಬೇಕಿಲ್ಲ. ಸದ್ಯ ದುಬೈನಿಂದ ಯಾವುದೇ ವಿಮಾನ ಹಾರಾಟ ನಡೆಯುತ್ತಿಲ್ಲ. ಅಲ್ಲಿರುವವರನ್ನು ವಾಪಸ್ ಕರೆತರುವ ಬಗ್ಗೆ ಗಂಭೀರವಾಗಿ ಪ್ರಯತ್ನ ಮಾಡಲಾಗುತ್ತಿದೆ ಎಂದು ಜೋಶಿ ಹೇಳಿದ್ದಾರೆ. ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವುದನ್ನು ಅರಿತು ಪ್ರಧಾನಿ ನರೇಂದ್ರ ಮೋದಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆ ದೂರವಾಣಿ ಮೂಲಕ ಮಾತನಾಡಿ ಪರಿಸ್ಥಿತಿ ಬಗ್ಗೆ ಚರ್ಚಿಸಿದ್ದಾರೆ. ಯುದ್ಧ ನಿಲ್ಲಿಸಿ ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ. ಅಲ್ಲದೆ, ನಾಗರಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡುವಂತೆ ಕೋರಿದ್ದಾರೆ. ಅಲ್ಲಿನ ಭಾರತೀಯರ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಹೇಳಿದ್ದಾರೆ ಎಂದು ಜೋಶಿ ತಿಳಿಸಿದ್ದಾರೆ. ರಾಜ್ಯ ಸರ್ಕಾರ ಕೂಡಾ ಕನ್ನಡಿಗರ ರಕ್ಷಣೆಗೆ ಸಂಬಂಧಿಸಿದಂತೆ ಕ್ರಮಗಳನ್ನು ತೆಗೆದುಕೊಂಡಿದೆ. ಹೊರದೇಶದಲ್ಲಿ ಸಿಲುಕಿರುವ, ಕನ್ನಡಿಗರ ಮಾಹಿತಿಗಳನ್ನು ಸಂಗ್ರಹ ಮಾಡಲಾಗುತ್ತಿದೆ. ಅವರಿಗೆ ಸಹಾಯವಾಣಿ ಸಂಖ್ಯೆಯನ್ನು ನೀಡಲಾಗಿದೆ ಎಂದು ಸಿಎಂ ಕಚೇರಿ ಹೇಳಿದೆ.

**ಕನ್ನಡಿಗರ ಮಾಹಿತಿ ಸಂಗ್ರಹ**

## ಮಿನಿ ನ್ಯೂಸ್

### ಇರಾನ್ ವಿರುದ್ಧ 4 ವಾರಗಳವರೆಗೆ ಮಿಲಿಟರಿ ಕಾರ್ಯಾಚರಣೆ : ಟ್ರಂಪ್

**ವಾಷಿಂಗ್ಟನ್:** ಒಂದೇ ಹೊಡೆತಕ್ಕೆ ಇರಾನ್‌ನ 48 ನಾಯಕರು ಸಾವನ್ನಪ್ಪಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಮೇಲೆ ನಡೆಯುತ್ತಿರುವ ಅಮೆರಿಕ ಇಸ್ರೇಲ್ ಜಂಟಿ ದಾಳಿ ಕುರಿತು ಮಾತನಾಡಿದ ಅವರು, ಈ ಕಾರ್ಯಾಚರಣೆ ಅತ್ಯಂತ ಯಶಸ್ವಿಯಾಗಿ, ನಿರೀಕ್ಷೆಗಿಂತ ವೇಗವಾಗಿ ಮುಂದುವರಿದಿದೆ ಎಂದು ಹೇಳಿದ್ದಾರೆ. ನಿಜಕ್ಕೂ ನಾವು ಪಡೆಯುತ್ತಿರುವ ಯಶಸ್ಸನಂಬೋದಕ್ಕೆ ಸಾಧ್ಯವಾಗುತ್ತಿಲ್ಲ. ಒಂದೇ ಹೊಡೆತದಲ್ಲಿ 48 ಇರಾನ್‌ನ ನಾಯಕರು ಸಾವನ್ನಪ್ಪಿದ್ದಾರೆ ಎಂದು ಬಣ್ಣಿಸಿದ್ದಾರೆ. ಕಾರ್ಯಾಚರಣೆ ಮತ್ತಷ್ಟು ವೇಗವಾಗಿ ಸಾಗುತ್ತಿದೆ. ಇನ್ನೆಷ್ಟು ಗುರಿಗಳು ಬಾಕಿ ಉಳಿದಿವೆ ಅನ್ನೋದು ಕೂಡ ಅಮೆರಿಕಕ್ಕೆ ಸ್ಪಷ್ಟವಾಗಿ ಗೊತ್ತಿದೆ ಎಂದು ವಿವರಿಸಿದ್ದಾರೆ.

ಇರಾನ್ ವಿರುದ್ಧ ಅಮೆರಿಕ ಆರಂಭಿಸಿರುವ ಮಿಲಿಟರಿ ಕಾರ್ಯಾಚರಣೆ 4 ವಾರಗಳವರೆಗೆ ಮುಂದುವರಿಬಹುದು. ಇರಾನ್ ದೊಡ್ಡ ದೇಶ ಆಗಿರುವುದರಿಂದ ಕಾರ್ಯಾಚರಣೆ ನಾಲ್ಕು ವಾರಗಳು ಅಥವಾ ಅದಕ್ಕಿಂತ ಕಡಿಮೆ ಅವಧಿ ತೆಗೆದುಕೊಳ್ಳಬಹುದು. ನಮ್ಮ ಉದ್ದೇಶಗಳು ಸಂಪೂರ್ಣವಾಗಿ ಸಾಧಿಸುವವರೆಗೆ ಯುದ್ಧ ಕಾರ್ಯಾಚರಣೆಗಳು ಪೂರ್ಣ ಬಲದಿಂದ ಮುಂದುವರಿಯುತ್ತವೆ ಎಂದು ಎಚ್ಚರಿಸಿದ್ದಾರೆ. ಇರಾನಿಯರೊಂದಿಗೆ ಮುಂದಿನ ಹಂತದ ಮಾತುಕತೆಗಳಿಗೆ ತಾವು ಮುಕ್ತರಾಗಿರಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ ಆದರೆ ಇರಾನ್ ಸೇನಾ ನಾಯಕರು ಯಾವುದೇ ಮಾತುಕತೆ ಇಲ್ಲ ಎಂದು ಹೇಳಿದೆ ಇದರಿಂದ ಯುದ್ಧ ಮತ್ತಷ್ಟು ಹೆಚ್ಚಾಗಲಿದೆ ದಳಿ ಪ್ರತಿ ದಾಳಿ ತೀವ್ರ ಗೊಂಡಿದೆ.

### ಮತ್ತೆ ಬಾಲ ಬಿಚ್ಚಿದ ಹಿಜ್ಬುಲ್ಲಾ, ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ

**ಬೈರೂತ್:** ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್ ಮೇಲೆ ಇರಾನ್ ಬೆಂಬಲಿತ ಪಡೆಗಳು ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿವೆ.ಇರಾನ್ ಬೆಂಬಲಿತ ಬಂಡುಕೋರ ಸಂಘಟನೆ ಹಿಜ್ಬುಲ್ಲಾತಡರಾತ್ರಿ ದಾಳಿ ನಡೆಸಲಾಗಿದೆ ಎಂದು ಹೇಳಿಕೊಂಡಿದೆ. ಖಮೇನಿ ಅವರ ಪವಿತ್ರ ರಕ್ತಕ್ಕೆ ಪ್ರತೀಕಾರವಾಗಿ, ಲೆಬನಾನ್, ಅಲ್ಲಿನ ಜನರ ರಕ್ಷಣೆಗಾಗಿ, ಹಾಗೆಯೇ ಇಸ್ರೇಲ್‌ನ ಸರಣಿ ದಾಳಿಗಳಿಗೆ ಪ್ರತಿಯಾಗಿ ಕ್ಷಿಪಣಿಗಳ ಸುರಿಮಳೆ, ಡ್ರೋನ್‌ಗಳ ದಾಳಿ ನಡೆಸಲಾಗಿದೆ ಎಂದು ಹಿಜ್ಬುಲ್ಲಾ ತಿಳಿಸಿದೆ. ಇದಕ್ಕೆ ಇಸ್ರೇಲ್ ಕೂಡ ಪ್ರತ್ಯುತ್ತರ ಕೊಟ್ಟಿದೆ. ಲೆಬನಾನ್ ರಾಜಧಾನಿ ಬೈರೂತ್ ಮೇಲೆ ಪ್ರತಿದಾಳಿ ನಡೆಸಿದೆ. ಬೈರೂತ್‌ನ ದಕ್ಷಿಣ ಉಪನಗರಗಳನ್ನು ಗುರಿಯಾಗಿಸಿ ಇಸ್ರೇಲ್ ಸೋಮವಾರ ದಾಳಿ ನಡೆಸಿದೆ ಎಂದು ಲೆಬನಾನ್ ಮಾಧ್ಯಮಗಳು ವರದಿ ಮಾಡಿವೆ. ಅದಕ್ಕಾಗಿ ಪೂರ್ವ, ದಕ್ಷಿಣ ಲೆಬನಾನ್‌ನ ಸುಮಾರು 50 ಹಳ್ಳಿಗಳ ಜನರನ್ನ ಸ್ಥಳಾಂತರಿಸುವಂತೆ ಇಸ್ರೇಲಿ ಸೇನೆ ಒತ್ತಾಯಿಸಿದೆ. ನಾಗರಿಕರು ತಮ್ಮ ಮನೆಗಳನ್ನ ತೆರವುಗೊಳಿಸಿ ಹಳ್ಳಿಗಳಿಂದ ಕನಿಷ್ಠ 1,000 ಮೀಟರ್ ದೂರದಲ್ಲಿರುವ ತೆರೆದ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುವಂತೆ ಹೇಳಿದೆ.ಇಸ್ರೇಲ್ ದಾಳಿಗೆ ಬೈರೂತ್ ಜನ ಬೆಚ್ಚಿಬಿದ್ದಿದ್ದಾರೆ. ಅಲ್ಲಲ್ಲಿ ಭಾರೀ ಸ್ಫೋಟಗಳು ಕೇಳಿಬಂದಿದ್ದು, ಇದು ದಾಳಿಯ ತೀವ್ರತೆಯನ್ನು ಒತ್ತಿ ಹೇಳುತ್ತಿವೆ.

### ಎಡಿನ್‌ಬರ್ಗ್‌ನಲ್ಲಿ ಅಪರಿಚಿತ ದುಷ್ಕರ್ಮಿ ಒಬ್ಬನಿಂದ ಹಲವರಿಗೆ ಚಾಕು ಇರಿತ

**ಲಂಡನ್:** ಸ್ಕಾಟ್‌ಲ್ಯಾಂಡ್‌ನ ಎಡಿನ್‌ಬರ್ಗ್‌ನಲ್ಲಿ ಅಪರಿಚಿತ ದುಷ್ಕರ್ಮಿಯೊಬ್ಬ ಚಾಕುವಿನಿಂದ ಕಂಡಕಂಡ ಜನರಿಗೆ ಇರಿದಿದ್ದಾನೆ. ಇದರಿಂದ ಹತ್ತಾರು ಜನ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಕೈಯಲ್ಲಿ ಎರಡು ಹರಿತವಾದ ಚಾಕು ಹಿಡಿದು ಯುವಕನೊಬ್ಬ ಎಡಿನ್‌ಬರ್ಗ್‌ನ ಕ್ಲಾಡರ್ಸ್ ಪ್ರದೇಶದ ಪ್ರಾಥಮಿಕ ಶಾಲೆ ಹಾಗೂ ಮಾಲ್ ಒಂದರ ಬಳಿ ಜನರಿಗೆ ಇರಿದಿದ್ದಾನೆ. ಅಂಗಡಿಯನ್ನು ಧ್ವಂಸಗೊಳಿಸಿದ್ದಾನೆ. ಬಳಿಕ ಅಲ್ಲಿಂದ ಮತ್ತೆ ಬೇರೆ ಬೇರೆ ಪ್ರದೇಶಗಳಿಗೆ ತೆರಳಿ ಹುಚ್ಚಾಟ ಮೆರೆದಿದ್ದಾನೆ. ಸದ್ಯ ಆತನ ಪತ್ತೆಗೆ ತೀವ್ರ ಹುಡುಕಾಟ ನಡೆಸುತ್ತಿದ್ದು ಜನರು ಮನೆ ಬಿಟ್ಟು ಹೊರಗೆ ಬರದಂತೆ ಪೊಲೀಸರು ಸೂಚನೆ ಕೊಟ್ಟಿದ್ದಾರೆ.

### ಇರಾನ್ ಮೇಲೆ ದಾಳಿ ನಡೆಸಲು ಆಂಥ್ರೋಪಿಕ್ ಕ್ಲಾಡ್ ಎ.ಐ ಬಳಸಿದ ಅಮೆರಿಕ

**ವಾಷಿಂಗ್ಟನ್:** ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಆಂಥ್ರೋಪಿಕ್‌ನ 'ಕ್ಲಾಡ್' ಎ.ಐ ಬಳಕೆ ಮಾಡಿತ್ತು ಎಂದು ರಾಯಿಟರ್ಸ್, ದಿ ಗಾರ್ಡಿಯನ್ ಸಹಿತ ಪ್ರಮುಖ ಮಾಧ್ಯಮಗಳು ವರದಿ ಮಾಡಿವೆ. ಆಂಥ್ರೋಪಿಕ್‌ನ ಜೊತೆ ಮಾಡಿಕೊಂಡಿದ್ದ ಎಲ್ಲಾ ಒಪ್ಪಂದಗಳನ್ನು ರದ್ದು ಮಾಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಕೆಲವೇ ಗಂಟೆಗಳಲ್ಲಿ ದಾಳಿಗೆ ಕ್ಲಾಡ್ ಬಳಸಿಕೊಳ್ಳಲಾಗಿದೆ. ಗುಪ್ತಚರ, ಗುರಿ ಆಯ್ಕೆ ಹಾಗೂ ಯುದ್ಧಭೂಮಿಯ ಅಣುಕು ಪ್ರದರ್ಶನಕ್ಕೆ ಅಮೆರಿಕ ಸೇನೆ 'ಕ್ಲಾಡ್' ಅನ್ನು ಬಳಸಿಕೊಂಡಿದೆ 'ವಾಲ್ ಸ್ಟ್ರೀಟ್ ಜರ್ನಲ್' ಉಲ್ಲೇಖಿಸಿ ಗಾರ್ಡಿಯನ್ ವರದಿ ಮಾಡಿದೆ. ಇರಾನ್ ಮೇಲೆ ದಾಳಿ ನಡೆಸುವುದಕ್ಕೂ ಮುನ್ನ ಅಂಥ್ರೋಪಿಕ್ ಅನ್ನು 'ಮೂಲಭೂತವಾದಿ ಎಡಪಂಥೀಯ ಕಂಪನಿ' ಎಂದು ಡೊನಾಲ್ಡ್ ಟ್ರಂಪ್ ಟೀಕಿಸಿದ್ದರು. ಅಲ್ಲದೆ ಕ್ಲಾಡ್ ಬಳಕೆಯನ್ನು ನಿಲ್ಲಿಸಬೇಕು ಎಂದು ಎಲ್ಲಾ ಫೆಡರಲ್ ಸಂಸ್ಥೆಗಳಿಗೆ ಸೂಚಿಸಿದ್ದರು.

ಜನವರಿಯಲ್ಲಿ ವೆನಿಜುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಬಂಧಿಸುವ ಕಾರ್ಯಾಚರಣೆಯಲ್ಲೂ ಅಮೆರಿಕ ಸೇನೆ ಕ್ಲಾಡ್ ಅನ್ನು ಬಳಕೆ ಮಾಡಲಾಗಿತ್ತು. ಇದಕ್ಕೆ ಆಂಥ್ರೋಪಿಕ್ ಆಕ್ಷೇಪ ವ್ಯಕ್ತಪಡಿಸಿತ್ತು. ಹಿಂಸಾತ್ಮಕ ಕೃತ್ಯಗಳಿಗೆ, ಆಯುಧಗಳ ಅಭಿವೃದ್ಧಿ ಅಥವಾ ನಿಗಾವಹಿಸಲು ನಮ್ಮ ಟೂಲ್ ಬಳಸಬಾರದು ಎಂದು ಆಂಥ್ರೋಪಿಕ್ ಹೇಳಿತ್ತು.



# ಭಟ್ಟರ ಟಾಕ್ಸಿಕ್ ತಬಾಹಿ ಸಾಂಗ್

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ 'ಟಾಕ್ಸಿಕ್' ಚಿತ್ರದ 'ತಬಾಹಿ' ಹಾಡು ಬಿಡುಗಡೆಯಾಗಿದೆ. ಹೋಳಿ ಹಬ್ಬದ ಸಂಭ್ರಮ ಹೆಚ್ಚಿಸಿದೆ. ಈ ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು, ಐವರು ಸಂಗೀತ ಸಂಯೋಜಕರು ಕೆಲಸ ಮಾಡಿದ್ದಾರೆ. ಗೀತು ಮೋಹನ್ ದಾಸ್ ನಿರ್ದೇಶನದ ಈ ಚಿತ್ರದಲ್ಲಿ ನಯನತಾರಾ, ರುಕ್ಮಿಣಿ ವಸಂತ್, ಕಿಯಾರಾ ಅಡ್ವಾಣಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸಿನಿಮಾ ರಿಲೀಸ್‌ಗೆ ಸಿದ್ಧವಾಗಿದೆ.

ರಾಕಿಂಗ್ ಸ್ಟಾರ್ ಯಶ್ ನಟನೆಯ 'ಟಾಕ್ಸಿಕ್' ಸಿನಿಮಾಗೆ ಭರ್ಜರಿ ಪ್ರಚಾರ ನೀಡಲಾಗುತ್ತಿದೆ. ಕಳೆದ ಕೆಲ ದಿನಗಳಿಂದ ಸಿನಿಮಾ ಬಗ್ಗೆ ಒಂದಲ್ಲ ಒಂದು ಅಪ್‌ಡೇಟ್ ನೀಡುತ್ತಲೇ ಬರಲಾಗುತ್ತಿದೆ. ಈಗ ಚಿತ್ರದ 'ತಬಾಹಿ' ಹಾಡು ರಿಲೀಸ್ ಆಗಿದೆ. ಹೋಳಿ ಹಬ್ಬಕ್ಕೂ ಒಂದು ದಿನ ಮೊದಲು ಈ ಸಾಂಗ್ ಬಿಡುಗಡೆ ಆಗಿದ್ದು, ಗಮನ ಸೆಳೆದಿದೆ. ಈ ಹಾಡು ಕನ್ನಡ, ಹಿಂದಿ ಮೊದಲಾದ ಭಾಷೆಗಳಲ್ಲಿ ರಿಲೀಸ್ ಆಗಿದೆ. 'ಟಾಕ್ಸಿಕ್' ಚಿತ್ರದ ಕಡೆಯಿಂದ ಪೋಸ್ಟರ್, ಟೀಸರ್ ರಿಲೀಸ್ ಆಗಿತ್ತು. ಈಗ ಚಿತ್ರದ ಮೊದಲ ಹಾಡು 'ತಬಾಹಿ' ತೆರೆಗೆ ಬಂದಿದೆ. ಈ ಹಾಡಿಗೆ ಯೋಗರಾಜ್ ಭಟ್ ಸಾಹಿತ್ಯ ಬರೆದಿದ್ದಾರೆ. ವಿಶಾಲ್ ಮಿಶ್ರಾ ಸಂಗೀತ ಸಂಯೋಜನೆ ಮಾಡಿ ಹಾಡನ್ನು ಹಾಡಿದ್ದಾರೆ. ಸದ್ಯ ಲಿರಿಕಲ್ ಸಾಂಗ್ ಮಾತ್ರ ಬಿಡುಗಡೆ ಕಂಡಿದೆ.

**ಮ್ಯೂಸಿಕ್‌ಗೆ ಹೆಚ್ಚಿನ ಪ್ರಾಮುಖ್ಯತೆ**

'ಟಾಕ್ಸಿಕ್' ಚಿತ್ರದಲ್ಲಿ ಮ್ಯೂಸಿಕ್‌ಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಈ ಚಿತ್ರದಲ್ಲಿ ಒಟ್ಟೂ ಆರು ಹಾಡುಗಳು ಇವೆ ಎನ್ನಲಾಗಿದೆ. ಈ ಸಿನಿಮಾಗಾಗಿ ಐದು ಸಂಗೀತ ಸಂಯೋಜಕರು ಕೆಲಸ ಮಾಡಿದ್ದಾರೆ. ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕ ವಿಶಾಲ್ ಮಿಶ್ರಾ ಅವರು 4 ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ತನಿಷ್ಕ್ ಬಾಗ್ಚಿ ಅವರು ಅರ್ಸ್ಲಾನ್ ನಿಜಾಮಿ ಮತ್ತು ಫಹೀಮ್ ಅಬ್ದುಲ್ಲಾ ಜೊತೆ ಸೇರಿ ಒಂದು ಹಾಡಿಗೆ ಸಂಗೀತ ನೀಡಿದ್ದಾರೆ. ರವಿ ಬಸ್ರೂರು ಅವರು ಒಂದು ಹಾಡಿಗೆ ಮ್ಯೂಸಿಕ್ ಕಂಪೋಸ್ ಮಾಡಿದ್ದಾರೆ. 'ಟಾಕ್ಸಿಕ್' ಚಿತ್ರವನ್ನು ಗೀತು ಮೋಹನ್ ದಾಸ್ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ಬಹುತೇಕ ಕೆಲಸ ಪೂರ್ಣಗೊಂಡಿದ್ದು, ರಿಲೀಸ್ ಮಾತ್ರ ಬಾಕಿ ಉಳಿದುಕೊಂಡಿದೆ.

# ಒಟಿಟಿಯಲ್ಲಿ ಕನ್ನಡದ ಚಿತ್ರಗಳಿಗೆ ಇದೆಂಥ ಸ್ಥಿತಿ

ದೊಡ್ಡ ಬಜೆಟ್ ಸಿನಿಮಾಗಳಿಗೆ ಸಿಗುವಷ್ಟು ಮೌಲ್ಯ ಸಣ್ಣ ಕನ್ನಡ ಚಿತ್ರಗಳಿಗೆ ಒಟಿಟಿ ಪ್ಲಾಟ್‌ಫಾರ್ಮ್ ಸಿಗುತ್ತಿಲ್ಲ. 'ತೀರ್ಥ ರೂಪ ತಂದೆಯವರಿಗೆ' ಚಿತ್ರ ಥಿಯೇಟರ್ ಯಶಸ್ಸು ಕಂಡರೂ, ಒಟಿಟಿಯಲ್ಲಿ ಪ್ರತಿ ವೀಕ್ಷಣೆಗೆ ಕೇವಲ 10 ರೂಪಾಯಿ ಸಿಗುತ್ತಿದೆ. ಇದು ಸಣ್ಣ ಬಜೆಟ್ ಚಿತ್ರಗಳ ನಿರ್ಮಾಪಕರಿಗೆ ಆಗುತ್ತಿರುವ ಅನ್ಯಾಯವನ್ನು ಎತ್ತಿ ತೋರಿಸುತ್ತದೆ. ವೀಕ್ಷಕರ ಬೆಂಬಲಕ್ಕಾಗಿ ನಿರ್ದೇಶಕರು ಮನವಿ ಮಾಡಿದ್ದಾರೆ.

ದೊಡ್ಡ ಬಜೆಟ್ ಸಿನಿಮಾಗಳು ರಿಲೀಸ್ ಆಗುತ್ತವೆ ಎಂದರೆ ಅದನ್ನು ಖರೀದಿಸಲು ಒಟಿಟಿ ಸಂಸ್ಥೆಗಳು ರೆಡಿ ಇರುತ್ತವೆ. ಆದರೆ, ಸಣ್ಣ ಬಜೆಟ್ ಚಿತ್ರಗಳು ಎಂದರೆ ಒಟಿಟಿ ಸಂಸ್ಥೆಗಳು ನಿರ್ಲಕ್ಷ್ಯ ತೋರಿಸುತ್ತವೆ. 'ತೀರ್ಥ ರೂಪ ತಂದೆಯವರಿಗೆ' ಚಿತ್ರ ಥಿಯೇಟರ್‌ನಲ್ಲಿ ರಿಲೀಸ್ ಆಗಿ ವಿಮರ್ಶೆಯಲ್ಲಿ ಗೆದ್ದಿದೆ. ಹಾಗಂತ ದೊಡ್ಡ ಮೊತ್ತ ಕೊಟ್ಟು ಚಿತ್ರವನ್ನು ಒಟಿಟಿಯವರು ಖರೀದಿ ಮಾಡಿದರು ಎಂದುಕೊಳ್ಳಬೇಡಿ. ಈ ಚಿತ್ರಕ್ಕೆ ಸಿಗ್ತಿರೋದು ತುಂಬಾನೇ ಸಣ್ಣ ಮೊತ್ತ. ಈ ವಿಷಯವನ್ನು ಸ್ವತಃ ನಿರ್ದೇಶಕರೇ ರಿವೀಲ್ ಮಾಡಿದ್ದಾರೆ.



'ತೀರ್ಥ ರೂಪ ತಂದೆಯವರಿಗೆ' ಚಿತ್ರವನ್ನು ರಾಮೇನಹಳ್ಳಿ ಜಗನ್ನಾಥ ಅವರು ನಿರ್ದೇಶನ ಮಾಡಿದ್ದಾರೆ. ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್ ಇದನ್ನು ನಿರ್ಮಾಣ ಮಾಡಿದೆ. ನಿಹಾರ್ ಮುಕೇಶ್, ರಚನಾ ಇಂದರ್ ಮೊದಲಾದವರು ಸಿನಿಮಾದಲ್ಲಿ ನಟಿಸಿದ್ದಾರೆ. ಈ ಚಿತ್ರ ಥಿಯೇಟರ್‌ನಲ್ಲಿ ಯಶಸ್ವಿ ಪ್ರದರ್ಶನ ಕಂಡ ಬಳಿಕ ಒಟಿಟಿಗೆ ಕಾಲಿಟ್ಟಿದೆ. ಅಮೇಜಾನ್ ಪ್ರೈಮ್ ವಿಡಿಯೋ ಮೂಲಕ ಸಿನಿಮಾ ಪ್ರದರ್ಶನ ಕಾಣುತ್ತಿದೆ.

ಈ ಚಿತ್ರವನ್ನು ಒಟಿಟಿಯಲ್ಲೇ ನೋಡುವಂತೆ ರಾಮೇನಹಳ್ಳಿ ಜಗನ್ನಾಥ ಮನವಿ ಮಾಡಿದ್ದಾರೆ. ಇದಕ್ಕೆ ಕಾರಣವೂ ಇದೆ. ಈ ಚಿತ್ರವನ್ನು ಪ್ರೈಮ್ ಸಂಸ್ಥೆಯವರು ದುಡ್ಡು ಕೊಟ್ಟು ಖರೀದಿ ಮಾಡಿಲ್ಲ. ಬದಲಿಗೆ ವೀವ್ಸ್ ಆಧಾರದ ಮೇಲೆ ಪೇಮೆಂಟ್ ಮಾಡುವ ಆಯ್ಕೆ ಮೂಲಕ ಖರೀದಿ ಮಾಡಿದ್ದಾರೆ. ಸಿನಿಮಾನ ಒಂದು ಗಂಟೆ ವೀಕ್ಷಿಸಿದರೆ ತಂಡದವರಿಗೆ ಸಿಗೋದು ನಾಲ್ಕು ರೂಪಾಯಿ! ಅಂದರೆ, 'ತೀರ್ಥ ರೂಪ ತಂದೆಯವರಿಗೆ' ಸಿನಿಮಾ ಅವಧಿ 2 ಗಂಟೆ 30 ನಿಮಿಷ. ಈ ಸಿನಿಮಾನ ಸಂಪೂರ್ಣವಾಗಿ ಒಮ್ಮೆ ವೀಕ್ಷಿಸಿದರೆ ತಂಡದವರಿಗೆ 10 ರೂಪಾಯಿ ಸಿಗಲಿದೆ!

ಒಂದು ಚಿತ್ರವನ್ನು ಥಿಯೇಟರ್‌ನಲ್ಲಿ ವೀಕ್ಷಣೆ ಮಾಡಿದರೆ ಸಿನಿಮಾದ ಟಿಕೆಟ್ ಬೆಲೆ ಕನಿಷ್ಠ 200 ರೂಪಾಯಿ ಇರುತ್ತದೆ. ಓರ್ವ ಸಿನಿಮಾ ನೋಡಿದರೆ ಟ್ಯಾಕ್ಸ್, ಶೇರು ಎಲ್ಲವನ್ನೂ ಕಳೆದರೆ ಅಂದಾಜು 100 ರೂಪಾಯಿ ತಂಡದ ಕೈ ಸೇರುತ್ತದೆ.


# ಸಂಸ್ಕೃತಿ ಮರೆಯದ ರಶ್ಮಿಕಾ-ವಿಜಯ್

ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಅವರ ವಿವಾಹ ನಂತರದ ಸಂಪ್ರದಾಯಗಳು ಎಲ್ಲರ ಗಮನ ಸೆಳೆದಿವೆ. ಮದುವೆ ಬಳಿಕ ತಿರುಪತಿಗೆ ಭೇಟಿ, ನಂತರ ವಿಜಯ್ ದೇವರಕೊಂಡ ಹುಟ್ಟೂರು ನಾಗರ್ ಕರ್ನೂಲ್‌ಗೆ ದಂಪತಿ ತೆರಳಿದ್ದಾರೆ. ಫಾರ್ಮ್‌ಹೌಸ್‌ನಲ್ಲಿ ಸತ್ಯನಾರಾಯಣ ಪೂಜೆ ನಡೆಸಿ, 2000ಕ್ಕೂ ಹೆಚ್ಚು ಜನರಿಗೆ ಅನ್ನದಾನ ಮಾಡಿದರು. ಟೀಕೆಗಳನ್ನು ಲೆಕ್ಕಿಸದೆ ಈ ಜೋಡಿ ಸಂತೋಷದಿಂದ ಜೀವನ ಸಾಗಿಸುತ್ತಿದೆ.

ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಇತ್ತೀಚೆಗೆ ವಿವಾಹ ಆಗಿದ್ದಾರೆ. ಇವರ ಮದುವೆ ಬಗ್ಗೆ ಎಲ್ಲಾ ಕಡೆಗಳಲ್ಲೂ ಚರ್ಚೆ ಆಯಿತು. ಇವರ ವಿವಾಹ ಫೋಟೋಗೆ ಕೋಟಿ ಕೋಟಿ ಲೈಕ್ಸ್ ಸಿಕ್ಕಿದೆ. ರಶ್ಮಿಕಾ ಮಂದಣ್ಣ ಅವರು ವಿವಾಹದ ಬಳಿಕ ಪತಿ ವಿಜಯ್ ಜೊತೆ ತಿರುಪತಿಗೆ ಭೇಟಿ ಕೊಟ್ಟಿದ್ದರು. ಈಗ ಇವರು ಮದುವೆ ಬಳಿಕವೂ ಸಂಪ್ರದಾಯವನ್ನು ಮುಂದುವರಿಸಿದ್ದಾರೆ. ಕೆಲವರು ಕೆಲಸದ ಕಾರಣಕ್ಕೆ ಬೇರೆ ಕಡೆಗಳಿಗೆ ತೆರಳುತ್ತಾರೆ. ಆದರೆ, ಮದುವೆ ಬಳಿಕ ಹುಟ್ಟೂರಿಗೆ ಭೇಟಿ ಕೊಡೋದು ಸಂಪ್ರದಾಯ. ಈ ಸಂಪ್ರದಾಯವನ್ನು ವಿಜಯ್ ಹಾಗೂ ರಶ್ಮಿಕಾ ಮರೆತಿಲ್ಲ. ಹೌದು, ಮದುವೆ ಆದ ಬಳಿಕ ವಿಜಯ್ ದೇವರಕೊಂಡ ಸ್ವಂತ ಊರಿಗೆ ದಂಪತಿ ತೆರಳಿದ್ದಾರೆ. ತೆಲಂಗಾಣದ ನಾಗರ್ ಕರ್ನೂಲ್ ತುಮ್ಮನ್‌ಪೇಟ್‌ಗೆ ಭೇಟಿ ಕೊಟ್ಟಿದ್ದಾರೆ.



ವಿಜಯ್ ಅವರು ಸ್ವಂತ ಊರಲ್ಲಿ ಫಾರ್ಮ್‌ಹೌಸ್ ಹೊಂದಿದ್ದಾರೆ. ಅಲ್ಲಿ ಮಾರ್ಚ್ 2 ಸತ್ಯನಾರಾಯಣ ಪೂಜೆ ಮಾಡಿಸಿದ್ದಾರೆ. ಅಲ್ಲದೆ, ಗ್ರಾಮದ 2000ಕ್ಕೂ ಹೆಚ್ಚು ಜನಕ್ಕೆ ಅನ್ನದಾನ ವ್ಯವಸ್ಥೆ ಮಾಡಲಾಗಿದೆ. ರಶ್ಮಿಕಾ ಹಾಗೂ ವಿಜಯ್ ಊರಿಗೆ ಬರುತ್ತಿದ್ದಂತೆ ಎಲ್ಲರೂ ಅವರನ್ನು ಪ್ರೀತಿಯಿಂದ ಸ್ವಾಗತಿಸಿದರು. ಈ ಸಂದರ್ಭದ ವಿಡಿಯೋ ವೈರಲ್ ಆಗಿ ಗಮನ ಸೆಳೆದಿದೆ. ತಿರುಪತಿಗೆ ಭೇಟಿ ನೀಡಿದಾಗಲೂ ರಶ್ಮಿಕಾ ಹಾಗೂ ವಿಜಯ್ ಅವರನ್ನು ಅಭಿಮಾನಿಗಳು ಮುತ್ತಿಕೊಂಡಿದ್ದರು. ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಹಲವು ವರ್ಷಗಳಿಂದ ಪರಸ್ಪರ ಪ್ರೀತಿ ಮಾಡುತ್ತಿದ್ದರು. ಈ ವಿಷಯವನ್ನು ದಂಪತಿ ಮುಚ್ಚಿಟ್ಟಿದ್ದರು. ವಿವಾಹ ಆಗುವ ಹಲವು ವರ್ಷಗಳ ಪ್ರೀತಿಗೆ ಹೊಸ ಅರ್ಥ ನೀಡಿದ್ದಾರೆ.



# 'ದಿ ಕೇರಳ ಸ್ಟೋರಿ 2' ಕಲೆಕ್ಷನ್

ದಿ ಕೇರಳ ಸ್ಟೋರಿ 2 ಸಿನಿಮಾ ವಿವಾದಗಳ ನಡುವೆಯೂ ತೆರೆಕಂಡಿದೆ. ಲವ್ ಜಿಹಾದ್ ಕಥಾಹಂದರದಿಂದಾಗಿ ಕೋರ್ಟ್ ತಡೆಯನ್ನು ಎದುರಿಸಿತ್ತು. ಮೊದಲ ದಿನ ಕೇವಲ 75 ಲಕ್ಷ ರೂ. ಗಳಿಕೆ ಮಾಡಿದರೂ, ಶನಿವಾರ ಮತ್ತು ಭಾನುವಾರ ಭರ್ಜರಿ ಕಲೆಕ್ಷನ್ ಮಾಡಿ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸಿದೆ. ಈ ಚಿತ್ರದ ಯಶಸ್ಸು ವಿವಾದಗಳನ್ನು ಮೀರಿ ಬೆಳೆದಿದೆ. ಉಲ್ಕಾ ಗುಪ್ತಾ ನಟನೆಯ ಈ ಸಿನಿಮಾ ಪ್ರೇಕ್ಷಕರ ಗಮನ ಸೆಳೆದಿದೆ.

'ದಿ ಕೇರಳ ಸ್ಟೋರಿ' ಸಿನಿಮಾ ರಿಲೀಸ್ ಆಗಿ ಸೂಪರ್ ಹಿಟ್ ಆಯಿತು. ಈ ಚಿತ್ರಕ್ಕೆ ಸಾಕಷ್ಟು ವಿರೋಧ ವ್ಯಕ್ತವಾದವು. ಈಗ 'ದಿ ಕೇರಳ ಸ್ಟೋರಿ 2' ಸಿನಿಮಾ ತೆರೆಗೆ ಬಂದಿದೆ. ಈ ಚಿತ್ರ ಕೂಡ ಸಾಕಷ್ಟು ವಿವಾದಗಳನ್ನು ಸೃಷ್ಟಿಸಿದೆ. ಈ ಚಿತ್ರದ ರಿಲೀಸ್‌ಗೆ ಕೋರ್ಟ್ ತಡೆನೀಡಿತ್ತು. ಆ ಬಳಿಕ ತೆರವನ್ನು ತೆಗೆಯಲಾಯಿತು. ಈ ಸಿನಿಮಾ ಮೊದಲ ದಿನ ಗಳಿಕೆ ಮಾಡಿದ್ದು 75 ಲಕ್ಷ ರೂಪಾಯಿ ಮಾತ್ರ. ಆದರೆ, ಶನಿವಾರ ಹಾಗೂ ಭಾನುವಾರ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸಿದೆ.

'ದಿ ಕೇರಳ ಸ್ಟೋರಿ 2' ಚಿತ್ರದಲ್ಲಿ ಉಲ್ಕಾ ಗುಪ್ತಾ, ಅದಿತಿ ಭಾಟಿಯಾ, ಐಶ್ವರ್ಯಾ ಓಝಾ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರವನ್ನು ಕಾಮಾಖ್ಯ ನಾರಾಯಣ್ ಸಿಂಗ್ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ರಿಲೀಸ್‌ಗೆ ಕೇರಳ ಹೈಕೋರ್ಟ್ ತಡೆ ನೀಡಿತ್ತು. ಆದರೆ ಕೆಲವೇ ಗಂಟೆಗಳಲ್ಲಿ ಮರು ವಿಚಾರಣೆ ನಡೆಸಿ, ಚಿತ್ರದ ಬಿಡುಗಡೆಗೆ ಅನುಮತಿ ನೀಡಿತ್ತು. ಶುಕ್ರವಾರ ಸಿನಿಮಾ ತೆರೆಗೆ ಬಂದಿದೆ. ಮೊದಲ ದಿನ ಈ ಚಿತ್ರ 75 ಲಕ್ಷ ರೂಪಾಯಿ ಗಳಿಕೆ ಮಾಡಿದೆ. ಶನಿವಾರ ಹಾಗೂ ಭಾನುವಾರ ಅನುಕ್ರಮವಾಗಿ 4.65 ಕೋಟಿ ರೂಪಾಯಿ ಹಾಗೂ 5 ಕೋಟಿ ರೂಪಾಯಿ ಗಳಿಸಿದೆ. ಈ ಮೂಲಕ ಚಿತ್ರದ ಕಲೆಕ್ಷನ್ ಅಲ್ಲಿ ಏರಿಕೆ ಕಂಡಿದೆ. 'ದಿ ಕೇರಳ ಸ್ಟೋರಿ 2' ಸಿನಿಮಾದಲ್ಲಿ ಲವ್ ಜಿಹಾದ್ ಕುರಿತ ಕಥೆಯನ್ನು ಹೇಳಲಾಗುತ್ತಿದೆ. ಈ ಕಾರಣದಿಂದ ಸಿನಿಮಾ ವಿವಾದ ಸೃಷ್ಟಿಸಿದೆ. ಈ ಮೊದಲು ರಿಲೀಸ್ ಆಗಿದ್ದ 'ದಿ ಕೇರಳ ಸ್ಟೋರಿ' ಸಿನಿಮಾದಲ್ಲಿ, ಹಿಂದೂ ಯುವತಿಯರನ್ನು ಯಾವ ರೀತಿಯಲ್ಲಿ ಮುಸ್ಲಿಂ ಧರ್ಮಕ್ಕೆ ಮತಾಂತರಿಸಿ, ಅವರನ್ನು ಐಸಿಸ್‌ಗೆ ಸೇರ್ಪಡೆ ಮಾಡುತ್ತಾರೆ ಎಂಬುದನ್ನು ತೋರಿಸಲಾಗಿತ್ತು. ಈ ಚಿತ್ರಕ್ಕೆ ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳು ಬ್ಯಾನ್ ಹೇರುವ ಪ್ರಯತ್ನ ಮಾಡಿ ವಿಫಲರಾಗಿದ್ದವು.

# ರಾಜ್‌ಪಾಲ್ ಅದೃಷ್ಟ ಬದಲಿಸಲಿದೆ ಯೂಟ್ಯೂಬ್

ರಾಜ್‌ಪಾಲ್ ತಮ್ಮದೇ ಯೂಟ್ಯೂಬ್ ಚಾನೆಲ್ ಆರಂಭಿಸಿ ಅವರು ವಿಡಿಯೋ ಪೋಸ್ಟ್ ಮಾಡುತ್ತಿದ್ದಾರೆ. ಯೂಟ್ಯೂಬ್ ಅವರ ಅದೃಷ್ಟ ಬದಲಿಸೋ ಸೂಚನೆ ಸಿಕ್ಕಿದೆ.

ರಾಜ್‌ಪಾಲ್ ತಮ್ಮ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೋವನ್ನು ಪೋಸ್ಟ್ ಮಾಡುತ್ತಿದ್ದಾರೆ. ಅದರಲ್ಲಿ ಅವರು ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದಾರೆ. ಈ ವೀಡಿಯೊಗಳು ಯೂಟ್ಯೂಬ್‌ನಲ್ಲಿ ಭಾರಿ ವೀಕ್ಷಣೆಗಳನ್ನು ಪಡೆಯುತ್ತಿವೆ. ರಾಜ್‌ಪಾಲ್ ಕೇವಲ ಎರಡು ವಿಡಿಯೋಗಳನ್ನು ಮಾತ್ರ ಪೋಸ್ಟ್ ಮಾಡಿದ್ದರೂ, ಈಗ ಅವರ ಚಾನೆಲ್‌ನ ಚಂದಾದಾರರ ಸಂಖ್ಯೆ ವೇಗವಾಗಿ ಹೆಚ್ಚುತ್ತಿದೆ. 'ಮೊದಲ ಒಪ್ಪಂದವನ್ನು 2012ರಲ್ಲಿ ಮಾಡಿಕೊಳ್ಳಲಾಗಿತ್ತು. 5 ಕೋಟಿ ರೂಪಾಯಿ ಸಾಲಕ್ಕೆ ಪ್ರತಿಯಾಗಿ 8 ಕೋಟಿ ರೂಪಾಯಿಗಳನ್ನು ಕೇಳಲಾಯಿತು. ಚಿತ್ರ ಬಿಡುಗಡೆಯಾದ ನಂತರ ಹಣವನ್ನು ಹಿಂದಿರುಗಿಸುವುದಾಗಿ ಭರವಸೆ ನೀಡಿದೆ. ಸಿನಿಮಾ ಬಿಡುಗಡೆ ವಿಳಂಬವಾಯಿತು. ನಂತರ 11 ಕೋಟಿ ರೂಪಾಯಿ ಕೇಳಿದರು' ಎಂದು ರಾಜ್‌ಪಾಲ್ ಹೇಳಿದ್ದಾರೆ.

ಈ ರೀತಿಯ ವಿಷಯಗಳನ್ನು ಅವರು ಯೂಟ್ಯೂಬ್‌ನಲ್ಲಿ ಹೇಳಿದ್ದಾರೆ. ಜೈಲಿನಿಂದ ಬಿಡುಗಡೆಯಾದ ನಂತರ ಫೆಬ್ರವರಿ 28 ರಂದು ರಾಜ್‌ಪಾಲ್ ಯಾದವ್ ತಮ್ಮ ಯೂಟ್ಯೂಬ್ ಚಾನೆಲ್ ಅನ್ನು ಪ್ರಾರಂಭಿಸಿದರು. ಅಂದಿನಿಂದ, ಅವರು ಕೇವಲ ಎರಡು ವಿಡಿಯೋಗಳನ್ನು ಮಾತ್ರ ಪೋಸ್ಟ್ ಮಾಡಿದ್ದಾರೆ. ಆದಾಗ್ಯೂ, ಅವರ ಚಾನೆಲ್ 17.2 ಸಾವಿರ ಚಂದಾದಾರರನ್ನು ತಲುಪಿದೆ. ಅಲ್ಲದೆ, ವಿಡಿಯೋಗಳು ಲಕ್ಷಾಂತರ ವೀಕ್ಷಣೆ ಕಂಡಿದೆ. ಹೀಗಾಗಿ, ಯೂಟ್ಯೂಬ್ ಮೂಲಕ ಹಣ ಮಾಡಲು ಇಳಿದರೆ ಅವರು ಸಾಲದಿಂದ ಮುಕ್ತರಾಗಬಹುದು. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ನಡೆಯುತ್ತಿದೆ.


**ಜಾಮೀನಿನ ಮೇಲೆ ಬಿಡುಗಡೆ**



# ಇಷ್ಟು ದಿನ ಸಂಜುರನ್ನು ಹೊರಗಿಟ್ಟಿದ್ದೇಕೆ ಕೊನೆಗೂ ಮೌನ ಮುರಿದ ಗಂಭೀರ್

ಟೀಮ್ ಇಂಡಿಯಾ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ತಂಡವು 20 ಓವರ್‌ಗಳಲ್ಲಿ 195 ರನ್ ಕಲೆಹಾಕಿದ್ದರು. ಈ ಗುರಿಯನ್ನು 19.2 ಓವರ್‌ಗಳಲ್ಲಿ ಚೇಸ್ ಮಾಡುವ ಮೂಲಕ ಭಾರತ ತಂಡ 5 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ. ಟಿ20 ವಿಶ್ವಕಪ್ ಆರಂಭಕ್ಕೂ ಮುನ್ನ ಈ ಬಾರಿಯ ಟೂರ್ನಿಯಲ್ಲಿ ಟೀಮ್ ಇಂಡಿಯಾ ಪರ ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಆರಂಭಿಕರಾಗಿ ಕಣಕ್ಕಿಳಿಯಲಿದ್ದಾರೆ ಎನ್ನಲಾಗಿತ್ತು.

ಆದರೆ ವಿಶ್ವಕಪ್ ಆರಂಭವಾದ ಬಳಿಕ ಸ್ಯಾಮ್ಸನ್ ಬೆಂಚ್‌ನಲ್ಲಿದ್ದರು. ಆರಂಭಿಕನಾಗಿ ಇಶಾನ್ ಕಿಶನ್ ಹಾಗೂ ಅಭಿಷೇಕ್ ಶರ್ಮಾ ಕಾಣಿಸಿಕೊಂಡಿದ್ದರು. ಅತ್ತ ಅಭಿಷೇಕ್ ಶರ್ಮಾ ಸತತವಾಗಿ ವಿಫಲರಾದರೂ ಸಂಜು ಸ್ಯಾಮ್ಸನ್‌ಗೆ ಚಾನ್ಸ್ ನೀಡಿರಲಿಲ್ಲ. ಇದೀಗ ಸಿಕ್ಕ ಅವಕಾಶವನ್ನು ಬಳಸಿಕೊಂಡಿರುವ ಸ್ಯಾಮ್ಸನ್ ಭಾರತ ತಂಡಕ್ಕೆ ಭರ್ಜರಿ ಗೆಲುವು ತಂದುಕೊಟ್ಟಿದ್ದಾರೆ. ಈ ಗೆಲುವಿನೊಂದಿಗೆ ಟೀಮ್ ಇಂಡಿಯಾ ವಿಶ್ವಕಪ್‌ನ ಸೆಮಿಫೈನಲ್‌ಗೇರಿದೆ. ಭಾರತ ತಂಡ ವಿಶ್ವಕಪ್‌ನ ಸೆಮಿಫೈನಲ್‌ಗೇರಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡ ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್‌ಗೆ ಇಷ್ಟು ದಿನ ಸಂಜು ಸ್ಯಾಮ್ಸನ್ ಅವರನ್ನು ಪ್ಲೇಯಿಂಗ್ ಇಲೆವೆನ್‌ನಿಂದ ಹೊರಗಿಟ್ಟಿರುವುದೇಕೆ ಎಂಬ ಪ್ರಶ್ನೆಯೊಂದು ಎದುರಾಗಿದೆ. ಈ ಪ್ರಶ್ನೆಗೆ ನಿರ್ದಿಷ್ಟ ಕಾರಣಗಳನ್ನು ಮುಂದಿಡುವ ಮೂಲಕ ಗಂಭೀರ್ ಉತ್ತರಿಸಿದ್ದಾರೆ.ಸಂಜು ಸ್ಯಾಮ್ಸನ್‌ರನ್ನು ಹೊರಗಿಡಲು ಕಾರಣವೇನು ನ್ಯೂಝಿಲೆಂಡ್ ವಿರುದ್ಧದ ಸರಣಿಯಲ್ಲಿ ಸಂಜು ಸ್ಯಾಮ್ಸನ್ ಬೇಗನೆ ವಿಕೆಟ್ ಒಪ್ಪಿಸುತ್ತಿದ್ದರು. ಅವರು ಕಣಕ್ಕಿಳಿದ ಐದು ಇನಿಂಗ್ಸ್‌ಗಳಲ್ಲಿ ಕಲೆಹಾಕಿದ್ದು 10, 6, 0, 24, 6 ರನ್ ಮಾತ್ರ. ಅಂದರೆ ಅವರು ಫಾರ್ಮ್ ಸಮಸ್ಯೆಯಿಂದ ಬಳಲುತ್ತಿದ್ದರು. ಈ ಒತ್ತಡದ ಪರಿಸ್ಥಿತಿಯಿಂದ ಅವರನ್ನು ಹೊರತರಲು ಮತ್ತು ಮಾನಸಿಕವಾಗಿ ರಿಫ್ರೆಶ್ ಆಗಲು ವಿರಾಮ ನೀಡಬೇಕಿತ್ತು. ಹೀಗಾಗಿ ಟಿ20 ವಿಶ್ವಕಪ್‌ನ ಆರಂಭಿಕ ಪಂದ್ಯಗಳಿಗೆ ಸಂಜು ಸ್ಯಾಮ್ಸನ್‌ರನ್ನು ಪ್ಲೇಯಿಂಗ್ ಇಲೆವೆನ್‌ಗೆ ಆಯ್ಕೆ ಮಾಡಿರಲಿಲ್ಲ ಎಂದು ಗೌತಮ್ ಗಂಭೀರ್ ತಿಳಿಸಿದ್ದಾರೆ.



**ಸಿಕ್ಕ ಅವಕಾಶ ಬಳಸಿಕೊಂಡ ಸ್ಯಾಮ್ಸನ್**

ಇದಲ್ಲದೆ ಆರಂಭದಲ್ಲಿ ತಂಡದ ಕಾಂಬಿನೇಷನ್ ಮತ್ತು ಬ್ಯಾಟಿಂಗ್ ಆಳವನ್ನು ಹೆಚ್ಚಿಸಲು ಶಿವಂ ದುಬೆ ಹಾಗೂ ರಿಂಕು ಸಿಂಗ್ ಅವರಂತಹ ಆಟಗಾರರಿಗೆ ಆದ್ಯತೆ ನೀಡಲಾಗಿತ್ತು. ಇದಾಗ್ಯೂ ಸ್ಯಾಮ್ಸನ್ ನೆಟ್ಸ್‌ನಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶಿಸುತ್ತಿದ್ದರು.

ಹೀಗಾಗಿ ಬ್ಯಾಟಿಂಗ್ ಲೈನಪ್‌ನಲ್ಲಿ ಬದಲಾವಣೆ ಮಾಡಿ ಅವರನ್ನು ಆರಂಭಿಕರಾಗಿ ಕಣಕ್ಕಿಳಿಸಲಾಗಿದೆ ಎಂದು ಗಂಭೀರ್ ತಿಳಿಸಿದ್ದಾರೆ.

ಸಂಜು ಸ್ಯಾಮ್ಸನ್ ಅವರನ್ನು ಆರಂಭಿಕರಾಗಿ ಕಣಕ್ಕಿಳಿಸಲು ಟೀಮ್ ಇಂಡಿಯಾ ತನ್ನ ಬ್ಯಾಟಿಂಗ್ ಲೈನಪ್‌ನಲ್ಲಿ ಎರಡು ಬದಲಾವಣೆ ಮಾಡಿದೆ. ಆರಂಭದ ಪಂದ್ಯಗಳಲ್ಲಿ ಓಪನರ್ ಆಗಿ ಕಣಕ್ಕಿಳಿದಿದ್ದ ಇಶಾನ್ ಕಿಶನ್ ಅವರನ್ನು ಮೂರನೇ ಕ್ರಮಾಂಕಕ್ಕೆ ಹಿಂಬಡ್ತಿ ನೀಡಲಾಗಿದೆ.

ಹಾಗೆಯೇ ಮೂರನೇ ಕ್ರಮಾಂಕದಲ್ಲಿದ್ದ ತಿಲಕ್ ವರ್ಮಾ ಅವರನ್ನು ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿಸಲಾಗಿದೆ. ತಿಲಕ್ ವರ್ಮಾ ಅವರನ್ನು ಮಿಡಲ್ ಆರ್ಡರ್‌ನಲ್ಲಿ ಆಡಿಸಲು ಇಲ್ಲಿ ಟೀಮ್ ಮ್ಯಾನೇಜ್ಮೆಂಟ್ ರಿಂಕು ಸಿಂಗ್ ಅವರನ್ನು ಕೈ ಬಿಟ್ಟಿದ್ದಾರೆ. ಈ ಮೂಲಕ ಸಂಜು ಸ್ಯಾಮ್ಸನ್ ಅವರಿಗೆ ಆರಂಭಿಕನಾಗಿ ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶವನ್ನು ಬಳಸಿಕೊಂಡಿರುವ ಸಂಜು ಸ್ಯಾಮ್ಸನ್ ವೆಸ್ಟ್ ಇಂಡೀಸ್ ವಿರುದ್ಧ 50 ಎಸೆತಗಳಲ್ಲಿ ಅಜೇಯ 97 ರನ್ ಸಿಡಿಸಿದ್ದಾರೆ.



# ಅಂದು ಲೇವಡಿ ಮಾಡಿ, ಇಂದು ತಲೆಬಾಗಿ ನಿಂತ

ಟೀಮ್ ಇಂಡಿಯಾ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ತಂಡವು 20 ಓವರ್‌ಗಳಲ್ಲಿ 195 ರನ್ ಕಲೆಹಾಕಿದ್ದರು. ಈ ಗುರಿಯನ್ನು 19.2 ಓವರ್‌ಗಳಲ್ಲಿ ಚೇಸ್ ಮಾಡುವ ಮೂಲಕ ಭಾರತ ತಂಡ 5 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ. ಟಿ20 ವಿಶ್ವಕಪ್‌ನ 52ನೇ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಸ್ಮರಣೀಯ ಇನಿಂಗ್ಸ್ ಆಡಿದ್ದಾರೆ. ಈ ಇನಿಂಗ್ಸ್‌ನೊಂದಿಗೆ ಸ್ಯಾಮ್ಸನ್ ಭಾರತ ತಂಡಕ್ಕೆ ಭರ್ಜರಿ ಗೆಲುವನ್ನೂ ಸಹ ತಂದು ಕೊಟ್ಟಿದ್ದಾರೆ. ಈ ಗೆಲುವಿನೊಂದಿಗೆ ಟೀಮ್ ಇಂಡಿಯಾ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.

ಇಂಟ್ರೆಸ್ಟಿಂಗ್ ವಿಷಯ ಎಂದರೆ ಈ ಬಾರಿಯ ವಿಶ್ವಕಪ್‌ನ ಆರಂಭಿಕ ಪಂದ್ಯಗಳಲ್ಲಿ ಸ್ಯಾಮ್ಸನ್‌ಗೆ ಅವಕಾಶ ಸಿಕ್ಕಿರಲಿಲ್ಲ. ಅದರಲ್ಲೂ ನಮೀಬಿಯ ವಿರುದ್ಧದ ಪಂದ್ಯದಿಂದ ಅಭಿಷೇಕ್ ಶರ್ಮಾ ಹೊರಗುಳಿದಿದ್ದ ಕಾರಣ ಸ್ಯಾಮ್ಸನ್ ಅವರನ್ನು ಕಣಕ್ಕಿಳಿಸಲಾಗಿತ್ತು.

ಆದರೆ ಪಾಕಿಸ್ತಾನ್ ಮತ್ತು ನೆದರ್‌ಲೆಂಡ್ಸ್ ವಿರುದ್ಧದ ಪಂದ್ಯದ ವೇಳೆ ಅವರನ್ನು ಕೈ ಬಿಡಲಾಯಿತು. ಈ ಎರಡು ಪಂದ್ಯಗಳಲ್ಲಿ ಸೊನ್ನೆ ಸುತ್ತುವ ಮೂಲಕ ಅಭಿಷೇಕ್ ಶರ್ಮಾ ನಿರಾಸೆ ಮೂಡಿಸಿದ್ದರು. ಹೀಗಾಗಿಯೇ ಸೌತ್ ಆಫ್ರಿಕಾ ವಿರುದ್ಧದ ಪಂದ್ಯಕ್ಕೂ ಮುನ್ನ ನಡೆದ ಸುದ್ದಿಗೋಷ್ಠಿಯಲ್ಲಿ ಸಂಜು ಸ್ಯಾಮ್ಸನ್‌ಗೆ ಈ ಬಾರಿಯಾದರೂ ಅವಕಾಶ ನೀಡುತ್ತೀರಾ ಎಂದು ಸೂರ್ಯಕುಮಾರ್ ಯಾದವ್ ಅವರನ್ನು ಪ್ರಶ್ನಿಸಲಾಗಿತ್ತು. ಈ ಪ್ರಶ್ನೆಯನ್ನು ಲೇವಡಿ ಮಾಡಿದಂತೆ ಅಂದು ಸೂರ್ಯಕುಮಾರ್ ಯಾದವ್ ಉತ್ತರ ನೀಡಿದ್ದರು. ವರದಿಗಾರರು ಸಂಜು ಸ್ಯಾಮ್ಸನ್ ಅವರ ಆಕ್ರಮಣಕಾರಿ ಬ್ಯಾಟಿಂಗ್ ಬಗ್ಗೆ ಪ್ರಸ್ತಾಪಿಸಿದಾಗ, ಸೂರ್ಯಕುಮಾರ್ ತಮ್ಮದೇ ಶೈಲಿಯಲ್ಲಿ ನಗುತ್ತಾ ಮರುಪ್ರಶ್ನೆ ಹಾಕಿದ್ದರು. ''ಹಾಗಾದರೆ ನಾನು ಸಂಜು ಅವರನ್ನು ಅಭಿಷೇಕ್ ಬದಲಿಗೆ ಆಡಿಸಬೇಕು ಎಂದು ನೀವು ಹೇಳುತ್ತಿದ್ದೀರಾ'' ಎಂದು ಕೇಳಿದರು.ವರದಿಗಾರರು ಹೌದು ಎಂದಾಗ, ಸೂರ್ಯ ನಗುತ್ತಾ, ''ಅಂದರೆ 3ನೇ ಕ್ರಮಾಂಕದಲ್ಲಿ ತಿಲಕ್ ವರ್ಮಾ ಅವರನ್ನು ತೆಗೆದು ಸಂಜು ಅವರನ್ನು ಆಡಿಸಬೇಕೇ'' ಎಂದು ಮರುಪ್ರಶ್ನಿಸಿ ಲೇವಡಿ ಮಾಡಿದ್ದರು.

ಇದೀಗ ಅದೇ ಸೂರ್ಯಕುಮಾರ್ ಯಾದವ್ ಸಂಜು ಸ್ಯಾಮ್ಸನ್ ಮುಂದೆ ತಲೆಬಾಗಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧದ ನಿರ್ಣಾಯಕ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ವಿಫಲರಾದರೂ ಒಂದೆಡೆ ನಿಂತು ಜವಾಬ್ದಾರಿಯುತ ಇನಿಂಗ್ಸ್ ಆಡುವ ಮೂಲಕ ಸಂಜು ಸ್ಯಾಮ್ಸನ್ ಭಾರತ ತಂಡಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ಈ ಗೆಲುವಿನೊಂದಿಗೆ ಟೀಮ್ ಇಂಡಿಯಾ ಟಿ20 ವಿಶ್ವಕಪ್‌ನ ಸೆಮಿಫೈನಲ್‌ಗೇರಿದೆ. ಇತ್ತ ಟೀಮ್ ಇಂಡಿಯಾ ಗೆದ್ದ ಬೆನ್ನಲ್ಲೇ ಮೈದಾನಕ್ಕೆ ಆಗಮಿಸಿದ ಸೂರ್ಯ, ಸಂಜು ಸ್ಯಾಮ್ಸನ್‌ಗೆ ತಲೆಬಾಗುವ ಮೂಲಕ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಇದರ ಬೆನ್ನಲ್ಲೇ ಕೆಲ ದಿನಗಳ ಹಿಂದೆ ಸೂರ್ಯಕುಮಾರ್ ಯಾದವ್ ಆಡಿದ್ದ ಮಾತುಗಳ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಅಂದರೆ ಸೌತ್ ಆಫ್ರಿಕಾ ವಿರುದ್ಧದ ಪಂದ್ಯಕ್ಕೂ ಮುನ್ನ ಸಂಜು ಸ್ಯಾಮ್ಸನ್ ಅವರನ್ನು ಯಾಕೆ ಆಡಿಸಬಾರದು ಎಂಬ ಪತ್ರಕರ್ತನ ಪ್ರಶ್ನೆಗೆ ಲೇವಡಿಯೊಂದಿಗೆ ಮರು ಪ್ರಶ್ನಿಸಿದ್ದ ಅದೇ ಸೂರ್ಯಕುಮಾರ್ ಯಾದವ್ ಇದೀಗ ತಲೆಬಾಗಿ ನಿಂತಿದ್ದಾರೆ.

ಈ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗುತ್ತಿದ್ದು, ಸಂಜು ಸ್ಯಾಮ್ಸನ್‌ನನ್ನು ಕೊಂಡಾಡುತ್ತಿದ್ದಾರೆ.



**ಶಿವಂ ದುಬೆ ಬಾರಿಸಿದ 2 ಫೋರ್**

# ಯಾರೂ ಸಹ 2 ಫೋರ್‌ಗಳ ಬಗ್ಗೆ ಮಾತನಾಡ್ತಿಲ್ಲ:

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಟಿ20 ವಿಶ್ವಕಪ್‌ನ ಸೂಪರ್-8 ಸುತ್ತಿನ ಕೊನೆಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ತಂಡ ಕಲೆಹಾಕಿದ್ದು ಬರೋಬ್ಬರಿ 195 ರನ್‌ಗಳು. ಈ ಗುರಿಯನ್ನು ಟೀಮ್ ಇಂಡಿಯಾ 19.2 ಓವರ್‌ಗಳಲ್ಲಿ ಚೇಸ್ ಮಾಡಿದೆ. ಈ ಗೆಲುವಿನ ಮೂಲಕ ಟೀಮ್ ಇಂಡಿಯಾ ಸೆಮಿಫೈನಲ್‌ಗೇರಿದೆ. ಟಿ20 ವಿಶ್ವಕಪ್‌ನ ನಿರ್ಣಾಯಕ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗೆಲುವು ದಾಖಲಿಸಿ ಟೀಮ್ ಇಂಡಿಯಾ ಸೆಮಿಫೈನಲ್‌ಗೇರಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ ಕಲೆಹಾಕಿದ್ದು ಬರೋಬ್ಬರಿ 195 ರನ್‌ಗಳು. ಈ ಗುರಿಯನ್ನು ಬೆನ್ನತ್ತಿದ ಟೀಮ್ ಇಂಡಿಯಾ ಪರ ಸಂಜು ಸ್ಯಾಮ್ಸನ್ ಅಜೇಯ 97 ರನ್ ಸಿಡಿಸಿದ್ದರು. ಈ ಮೂಲಕ ಟೀಮ್ ಇಂಡಿಯಾ 19.2 ಓವರ್‌ಗಳಲ್ಲಿ 199 ರನ್ ಬಾರಿಸಿ 5 ವಿಕೆಟ್‌ಗಳ ಜಯ ಸಾಧಿಸಿದೆ.

ಈ ಗೆಲುವಿನ ಬೆನ್ನಲ್ಲೇ ಸಂಜು ಸ್ಯಾಮ್ಸನ್ ಅವರನ್ನು ಹಾಡಿ ಹೊಗಳಲಾಗುತ್ತಿದೆ. ಇದಾಗ್ಯೂ ಅಂತಿಮ ಹಂತದಲ್ಲಿ ಬ್ಯಾಕ್ ಟು ಬ್ಯಾಕ್ ಎರಡು ಬೌಂಡರಿಗಳನ್ನು ಬಾರಿಸಿ ಗೆಲುವಿಗೆ ತನ್ನದೇಯಾದ ಕೊಡುಗೆ ನೀಡಿದ ಶಿವಂ ದುಬೆ ಅವರನ್ನು ಯಾರು ಸಹ ಪ್ರಶಂಸಿಸುತ್ತಿಲ್ಲ ಎಂದು ಟೀಮ್ ಇಂಡಿಯಾ ವೇಗಿ ಜಸ್‌ಪ್ರೀತ್ ಬುಮ್ರಾ ಬೇಸರ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಬುಮ್ರಾ, ಶಿವಂ ದುಬೆ ಬಾರಿಸಿದ ಆ ಎರಡು ಬೌಂಡರಿಗಳು ಕ್ರಿಕೆಟ್‌ನ ಅಂಕಿ-ಅಂಶಗಳ ಪುಸ್ತಕದಲ್ಲಿ ಅಥವಾ ದಾಖಲೆಗಳಲ್ಲಿ ಅಷ್ಟಾಗಿ ಎದ್ದು ಕಾಣದಿರಬಹುದು. ಆದರೆ ನಿಜವಾದ ಕ್ರಿಕೆಟ್ ಜ್ಞಾನ ಇರುವವರಿಗೆ ಗೊತ್ತು, ಆ ಎರಡು ಬೌಂಡರಿಗಳು ಅಂತಿಮ ಓವರ್‌ಗೂ ಮುನ್ನ ನಮ್ಮ ಮೇಲಿದ್ದ ಒತ್ತಡವನ್ನು ಸಂಪೂರ್ಣವಾಗಿ ಕಡಿಮೆ ಮಾಡಿದವು. 19ನೇ ಓವರ್‌ನಲ್ಲಿ ಶಿವಂ ದುಬೆ ಬಾರಿಸಿದ 2 ಫೋರ್ ಫೋರ್‌ಗಳಿಂದಾಗಿ ಕೊನೆಯ ಓವರ್‌ನಲ್ಲಿ ಗೆಲುವಿನ ರನ್ ರೇಟ್ ಕಡಿಮೆಯಾಯಿತು. ಇದರಿಂದ ಅಂತಿಮ ಓವರ್‌ನಲ್ಲಿ ಭಾರತದ ಬ್ಯಾಟರ್‌ಗಳಿಗೆ ನಿರಾಳವಾಗಿ ಆಡಲು ಸಹಾಯ ಮಾಡಿತು. ಇದಾಗ್ಯೂ, ಯಾರು ಸಹ ಶಿವಂ ದುಬೆ ಅವರ ಈ ಕೊಡುಗೆಯನ್ನು ಸ್ಮರಿಸುತ್ತಿಲ್ಲ ಎಂದು ಜಸ್‌ಪ್ರೀತ್ ಬುಮ್ರಾ ಬೇಸರ ಹೊರಹಾಕಿದ್ದಾರೆ.

# ಕೊನೆಗೂ ಪಾಕಿಸ್ತಾನದ ವಿಶ್ವ ದಾಖಲೆ ಸರಿಗಟ್ಟಿದ ಭಾರತ

ಟಿ20 ವಿಶ್ವಕಪ್‌ನಲ್ಲಿ ಅತೀ ಹೆಚ್ಚು ಬಾರಿ ನಾಕೌಟ್ ಪಂದ್ಯಗಳನ್ನಾಡಿದ ವಿಶ್ವ ದಾಖಲೆ ಪಾಕಿಸ್ತಾನ್ ತಂಡದ ಹೆಸರಿನಲ್ಲಿದೆ. ಪಾಕ್ ಪಡೆಯು ಮೊದಲ ನಾಲ್ಕು ಆವೃತ್ತಿಗಳಲ್ಲಿ ಸೆಮಿಫೈನಲ್ ಆಡಿತ್ತು. ಇದಾದ ಬಳಿಕ 2021 ಹಾಗೂ 2022ರಲ್ಲಿ ಸೆಮಿಫೈನಲ್‌ಗೇರುವಲ್ಲಿ ಯಶಸ್ವಿಯಾಗಿದ್ದರು. ಇದೀಗ ಈ ದಾಖಲೆಯನ್ನು ಟೀಮ್ ಇಂಡಿಯಾ ಸರಿಗಟ್ಟಿದೆ.

ಟಿ20 ವಿಶ್ವಕಪ್‌ನ 52ನೇ ಪಂದ್ಯದಲ್ಲಿ ಭಾರತ ತಂಡವು ಭರ್ಜರಿ ಜಯ ಸಾಧಿಸಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳು ಮುಖಾಮುಖಿಯಾಗಿದ್ದವು. ಸೆಮಿಫೈನಲ್‌ಗೇರಲು ಉಭಯ ತಂಡಗಳಿಗೂ ನಿರ್ಣಾಯಕವಾಗಿದ್ದ ಈ ಪಂದ್ಯವನ್ನು ಗೆದ್ದುಕೊಳ್ಳುವಲ್ಲಿ ಟೀಮ್ ಇಂಡಿಯಾ ಯಶಸ್ವಿಯಾಗಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 195 ರನ್ ಕಲೆಹಾಕಿತು. ಈ ಗುರಿಯನ್ನು 19.2 ಓವರ್‌ಗಳಲ್ಲಿ ಚೇಸ್ ಮಾಡಿ ಟೀಮ್ ಇಂಡಿಯಾ 5 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಭಾರತ ತಂಡವು ಟಿ20 ವಿಶ್ವಕಪ್‌ನ ಸೆಮಿಫೈನಲ್‌ಗೇರಿದೆ. ಈ ಮೂಲಕ ಪಾಕಿಸ್ತಾನ್ ತಂಡದ ಹೆಸರಿನಲ್ಲಿದ್ದ ವಿಶೇಷ ದಾಖಲೆಯನ್ನು ಸರಿಗಟ್ಟುವಲ್ಲಿ ಟೀಮ್ ಇಂಡಿಯಾ ಯಶಸ್ವಿಯಾಗಿದೆ. ಅಂದರೆ ಟಿ20 ವಿಶ್ವಕಪ್‌ನಲ್ಲಿ ಅತೀ ಹೆಚ್ಚು ಬಾರಿ ಸೆಮಿಫೈನಲ್‌ನಲ್ಲಿ ಕಾಣಿಸಿಕೊಂಡ ತಂಡವೆಂಬ ವಿಶ್ವ ದಾಖಲೆ ಪಾಕಿಸ್ತಾನದ ಹೆಸರಿನಲ್ಲಿತ್ತು. ಪಾಕಿಸ್ತಾನ್ ತಂಡವು 2007, 2009, 2010, 2012, 2021 ಮತ್ತು 2022 ರ ಟಿ20 ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪಂದ್ಯವಾಡುವ ಮೂಲಕ ಈ ವಿಶ್ವ ದಾಖಲೆ ನಿರ್ಮಿಸಿದ್ದರು.

ಅಂದರೆ ಪಾಕ್ ಪಡೆ ಟಿ20 ವಿಶ್ವಕಪ್‌ನಲ್ಲಿ 6 ಬಾರಿ ಸೆಮಿಫೈನಲ್ ಪಂದ್ಯಗಳನ್ನಾಡಿದೆ. ಇದೀಗ 6ನೇ ಬಾರಿಗೆ ಸೆಮಿಫೈನಲ್ ಗೇರುವ ಮೂಲಕ ಟೀಮ್ ಇಂಡಿಯಾ ಪಾಕಿಸ್ತಾನ್ ತಂಡದ ವಿಶ್ವ ದಾಖಲೆಯನ್ನು ಸರಿಗಟ್ಟಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966